ಸೋಮವಾರ, ಡಿಸೆಂಬರ್ 19, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 349 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಆಳ-ಅಗಲ
ಸರ್ಕಾರದ ಜತೆಗೇ ವಹಿವಾಟು

‘ಜನವರಿ 1ರೊಳಗೆ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಸಿದ್ಧ’ 5
ಸಂಚರಿಸದ ಆಂಬುಲೆನ್ಸ್: ರೈತರಿಗೆ ಸಂಕಷ್ಟ 5
ಇಂದು ಶಿಕ್ಷಣ 6
ಮಹಾರಾಷ್ಟ್ರ ಸಿಎಂ ಶಿಂದೆ, ಡಿಸಿಎಂ ಫಡಣವೀಸ್ ಹೇಳಿಕೆ
‘ಪ್ರಚೋದನೆ: ಗುಪ್ತಚರ ವರದಿ ಬಹಿರಂಗ’ 7

15 ನೇ ವಿಧಾನಸಭೆ: ಬೆಳಗಾವಿಯ ಕೊನೆ ಕದನ • ಸಾಧನೆ ಬಿಂಬಿಸಿಕೊಳ್ಳಲು ವೇದಿಕೆ

‘ಕಿತ್ತೂರು ಕರ್ನಾಟಕ’ಕ್ಕಾಗಿ ಕಿತ್ತಾಟ

• ವೈ.ಗ. ಜಗದೀಶ್

ಬೆಳಗಾವಿ: ರಾಜಕೀಯ ಪಕ್ಷಗಳು ವಿಧಾನಸಭೆ ಚುನಾವಣೆಗೆ ತಾಲೀಮು ಚುರುಕುಗೊಳಿಸಿರುವ ಹೊತ್ತಿನಲ್ಲೇ ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ 10 ದಿನ ನಡೆಯಲಿರುವ ಅಧಿವೇಶನ ಕಿತ್ತೂರು ಭಾಗದ ಜನರ ಮನವೊಲಿಸಿಕೊಳ್ಳುವ ವೇದಿಕೆಯಾಗಲಿದೆ.

15 ವಿಧಾನಸಭೆ ಅವಧಿಯಲ್ಲಿ ಮಹಾರಾಷ್ಟ್ರ ಗಡಿಭಾಗದ ಬೆಳಗಾವಿಯಲ್ಲಿ ನಡೆಯುತ್ತಿರುವ ಈ ಅಧಿವೇಶನ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳಿಗೆ ತಮ್ಮ ಸಾಧನೆಯನ್ನು ಬಿಂಬಿಸಿಕೊಳ್ಳುವ, ಎದುರಾಳಿ ಪಕ್ಷದ ವೈಫಲ್ಯವನ್ನು ಎತ್ತಿ ತೋರಿಸುವ ಅವಕಾಶವನ್ನೂ ತೆರೆದುಕೊಡಲಿದೆ. ಕಿತ್ತೂರು ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ (ಶಿಗ್ಗಾವಿ), ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ (ಬಾದಾಮಿ) ಅವರಿಗೆ ತಮ್ಮ ನೇತೃತ್ವದ ಪಕ್ಷ ಈ ಭಾಗದ ಅಭಿವೃದ್ಧಿಗೆ ಮಾಡಿದ್ದೇನು? ತಾವು ಮತ್ತೆ ಅಧಿಕಾರಕ್ಕೆ ಬಂದರೆ ಏನು ಮಾಡಲಿದ್ದೇವೆ ಎಂಬುದನ್ನು ಅಧಿವೇಶನದಲ್ಲೇ ಸಾರಿ ಹೇಳುವ ಕಟ್ಟ ಕಡೆಯ ಅವಕಾಶವೂ ಇದಾಗಿದೆ. ಹೀಗಾಗಿಯೇ ಆಡಳಿತಾರೂಢರ ಯಶಸ್ಸು–ವೈಫಲ್ಯದ ಕೆಸರೆರಚಾಟ ಸಹಜವಾಗಿಯೇ ಈ ಅಧಿವೇಶನದ ಪ್ರಧಾನ ಕೇಂದ್ರವಾಗಿರಲಿದೆ.

ವಿಧಾನಸಭಾ ಸಭಾಂಗಣದಲ್ಲಿ ಅಧಿಕಾರಿಗಳು ಭಾನುವಾರ ಉಪಕರಣಗಳನ್ನು ಪರಿಶೀಲಿಸಿದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ 24ಗಂಟೆಯೊಳಗೆ ಮಹದಾಯಿ ಯೋಜನೆಯನ್ನು ಅನುಷ್ಠಾನ ಮಾಡುವುದಾಗಿ 2018ರ ಚುನಾವಣೆಯಲ್ಲಿ ಬಿ.ಎಸ್‌. ಯಡಿಯೂರಪ್ಪ ಘೋಷಿಸಿದ್ದರು. 2019ರ ಲೋಕಸಭೆ ಚುನಾವಣೆ ವೇಳೆಯೂ ಪಕ್ಷ ವಾಗ್ದಾನ ಮಾಡಿತ್ತು. ಅದರ ಜತೆಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸುವುದು ಬಿಜೆಪಿ, ಕಾಂಗ್ರೆಸ್‌ನ ವಾಗ್ದಾನವಾಗಿತ್ತು. ಸುಮಾರು 10 ವರ್ಷಗಳ ಅವಧಿಯಲ್ಲಿ ಈ ಎರಡೂ ಯೋಜನೆಗಳಲ್ಲಿ ನಿರೀಕ್ಷಿತ ಪ್ರಗತಿ ಆಗಿಲ್ಲ ಎಂಬ ಅಸಮಾಧಾನ ಈ ಪ್ರದೇಶದಲ್ಲಿದೆ. ಈ ವಿಷಯ ಕೂಡ ವಾಗ್ವಾದಕ್ಕೆ ಕಾರಣವಾಗುವ ಸಂಭವವೂ ಇದೆ.

ಪ್ರತಿವರ್ಷ ಅಧಿವೇಶನದ ಅವಧಿಯಲ್ಲಿ ಗಡಿ ಕ್ಯಾತೆ ತೆಗೆಯುವ ಕಿಡಿಗೇಡಿ ಕೆಲಸವನ್ನು ಕೆಲವು ಸಂಘಟನೆಗಳು ಮಾಡುತ್ತಲೇ ಬಂದಿವೆ. ಕಳೆದ ವರ್ಷ ಅಧಿವೇಶನದ ವೇಳೆ, ಬೆಳಗಾವಿಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಆಗ ಕೊಟ್ಟ ಭರವಸೆಗಳನ್ನು ಸರ್ಕಾರ ಇನ್ನೂ ಈಡೇರಿಸಿಲ್ಲ. ಗಡಿ ಸಂಗತಿ ಎರಡು ರಾಜಕೀಯ ಪಕ್ಷಗಳಿಗೆ ಅಸ್ತ್ರವಾಗಲಿದ್ದು, ವಾಗ್ಯುದ್ಧಕ್ಕೆ ದಾರಿ ಮಾಡಿಕೊಡಲಿದೆ.

7ನೇ ಪುಟ ನೋಡಿ

ಏಕರೂಪ ನಾಗರಿಕ ಸಂಹಿತೆ?

ಚುನಾವಣೆಗೆ ತಯಾರಿ ನಡೆಸುತ್ತಿರುವ ಬಿಜೆಪಿ, ಅಭಿವೃದ್ಧಿಯ ಜತೆಗೆ ಮತೀಯ ವಿಷಯವನ್ನು ಮುನ್ನೆಲೆಗೆ ತಂದು, ಮತ ಬ್ಯಾಂಕ್ ಗಟ್ಟಿಗೊಳಿಸಿಕೊಳ್ಳುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಲೇ ಇದೆ.

ಹಿಂದೆ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಮತಾಂತರ ನಿಷೇಧ ಮಸೂದೆ ಮಂಡಿಸಿತ್ತು. ಈ ಬಾರಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಮಸೂದೆ ಮಂಡಿಸುವ ತಯಾರಿಯಲ್ಲಿದೆ. ಮಸೂದೆಯನ್ನು ಈ ಬಾರಿಯೇ ಸದನದಲ್ಲಿ ಮಂಡಿಸಲು ಸರ್ಕಾರ ಚಿಂತನೆ ನಡೆಸಿದೆ. ಹೀಗೆ ಮಾಡುವ ಮೂಲಕ ಚರ್ಚೆಯ ಕಲಾಪದ ಚರ್ಚೆಯ ದಿಕ್ಕನ್ನೇ ಬದಲಿಸುವ ಆಲೋಚನೆ ಸರ್ಕಾರದ ಮುಂದಿದೆ.

ಗುಜರಾತ್ ಚುನಾವಣೆಗೆ ಮುನ್ನ ನಡೆದಿದ್ದ ಕೊನೆಯ ಸಚಿವ ಸಂಪುಟ ಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಮಿತಿಯೊಂದನ್ನು ರಚಿಸಲು ನಿರ್ಧರಿಸಲಾಗಿತ್ತು.

ಸಭಾಂಗಣದಲ್ಲಿ ಸಾವರ್ಕರ್ ಭಾವಚಿತ್ರ

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನ ಸೌಧದ ಸಭಾಂಗಣದಲ್ಲಿ ಸಾವರ್ಕರ್ ಸೇರಿದಂತೆ ಏಳು ಮಹನೀಯರ ಭಾವಚಿತ್ರಗಳನ್ನು ಅಳವಡಿಸಲಾಗಿದೆ.

ಮಹಾತ್ಮ ಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್ ಸೇರಿ ಒಟ್ಟು ಏಳು ಮಹನೀಯರ ಭಾವಚಿತ್ರಗಳನ್ನು ಅಧಿವೇಶನದ ಮೊದಲ ದಿನ ಸೋಮವಾರ (ಡಿ.19) ಬೆಳಿಗ್ಗೆ 10.30ಕ್ಕೆ ಅನಾವರಣ ಮಾಡಲು ಸಿದ್ಧತೆ ನಡೆದಿದೆ.

ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಸದನದಲ್ಲಿ ಸಾವರ್ಕರ್ ಚಿತ್ರ ಕುರಿತು ಯಾರೂ ಹೇಳಿಲ್ಲ. ಕಾರ್ಯಕ್ರಮಕ್ಕೂ ಕರೆದಿಲ್ಲ. ಏಕಾಏಕಿ ಈ ನಿರ್ಧಾರ ಏಕೆ? ಇದು ಬಿಜೆಪಿ ‘ಹಿಡನ್ ಅಜೆಂಡಾ’ ಎಂದರು.

ಗೈರಾಗಲು ಕಾಂಗ್ರೆಸ್ ನಿರ್ಧಾರ: ಸಾವರ್ಕರ್ ಸೇರಿ ಏಳು ಮಹನೀಯರ ಫೋಟೊ ಲೋಕಾರ್ಪಣೆ ಸಮಾರಂಭಕ್ಕೆ ಗೈರಾಗಲು ಕಾಂಗ್ರೆಸ್ ಶಾಸಕರು ನಿರ್ಧರಿಸಿದ್ದಾರೆ. ಭಾನುವಾರ ಇಲ್ಲಿ ನಡೆದ ಕಾಂಗ್ರೆಸ್ ಚುನಾವಣಾ ಸಮಿತಿ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆದ ಅರ್ಜೆಂಟೀನಾ ತಂಡದ ಲಯೊನೆಲ್ ಮೆಸ್ಸಿ ಹಾಗೂ ಸಹ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ರೋಚಕ ಫೈನಲ್‌ನಲ್ಲಿ ಮೆಸ್ಸಿ ಕನಸು ನನಸು: ಫ್ರಾನ್ಸ್‌ಗೆ ನಿರಾಸೆ

ಅರ್ಜೆಂಟೀನಾ ಚಾಂಪಿಯನ್

ದೋಹಾ (ಎಎಫ್‌ಪಿ/ರಾಯಿಟರ್ಸ್): ಆಧುನಿಕ ಫುಟ್‌ಬಾಲ್‌ನ ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ಅವರ ಕೋಟ್ಯಂತರ ಅಭಿಮಾನಿಗಳ ಪ್ರಾರ್ಥನೆ, ಕತಾರ್‌ನ ರಾಜಧಾನಿ ದೋಹಾದ ಲುಸೈಲ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಈಡೇರಿತು.

ರೋಚಕ ಫೈನಲ್‌ನಲ್ಲಿ ಫ್ರಾನ್ಸ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 4–2 ಗೋಲುಗಳಿಂದ ಮಣಿಸಿದ ಅರ್ಜೆಂಟೀನಾ ತಂಡ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯನ್ನು ಗೆದ್ದು ಬೀಗಿತು.

ಮೆಸ್ಸಿ ಅವರು ಈ ಹಿಂದಿನ ನಾಲ್ಕು ವಿಶ್ವಕಪ್ ಟೂರ್ನಿಗಳಲ್ಲಿ ತನಗೆ ದಕ್ಕದೇ ಇದ್ದ ಮಿರುಗುವ ಟ್ರೋಫಿಯನ್ನು ಐದನೇ ಪ್ರಯತ್ನದಲ್ಲಿ ಎತ್ತಿಹಿಡಿದು ಮುತ್ತಿಕ್ಕಿದರು. ಆ ಕ್ಷಣಕ್ಕಾಗಿ ಕಾಯುತ್ತಿದ್ದ ಅವರ ಅಭಿಮಾನಿಗಳು ಆನಂದಭಾಷ್ಪ ಸುರಿಸಿದರು. ದಕ್ಷಿಣ ಅಮೆರಿಕದ ರಾಷ್ಟ್ರ, ಅರ್ಜೆಂಟೀನಾ ಸಂಭ್ರಮದಲ್ಲಿ ಮಿಂದೆದ್ದಿತು. ಸಾವಿರಾರು ಮಂದಿ ಬೀದಿಗಿಳಿದು ಸಂತಸಪಟ್ಟರು.

ನಿಗದಿತ ಮತ್ತು ಹೆಚ್ಚುವರಿ ಅವಧಿಯ ಬಳಿಕ ಉಭಯ ತಂಡಗಳು 3–3 ಗೋಲುಗಳಿಂದ ಸಮಬಲ ಸಾಧಿಸಿದ್ದವು. ಇದರಿಂದ ವಿಜೇತರನ್ನು ನಿರ್ಣಯಿಸಲು ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು. ನಿಗದಿತ ಸಮಯದಲ್ಲಿ ಅರ್ಜೆಂಟೀನಾ ಪರ ಮೆಸ್ಸಿ (23 ಮತ್ತು 108ನೇ ನಿ.) ಎರಡು ಗೋಲುಗಳನ್ನು ಗಳಿಸಿದರೆ, ಇನ್ನೊಂದು ಗೋಲನ್ನು ಏಂಜೆಲ್ ಡಿ ಮರಿಯಾ (36ನೇ ನಿ.) ತಂದಿತ್ತರು. ಫ್ರಾನ್ಸ್ ತಂಡದ ಮೂರೂ ಗೋಲುಗಳನ್ನು ಕಿಲಿಯನ್ ಎಂಬಾಪೆ (80, 81 ಮತ್ತು 118ನೇ ನಿ.) ಗಳಿಸಿದರು.

ಫಿಫಾ ವಿಶ್ವಕಪ್ ಕತಾರ್ 2022

ಅರ್ಜೆಂಟೀನಾಕ್ಕೆ ದೊರೆತ ಮೂರನೇ ಟ್ರೋಫಿ ಇದು. ಈ ಹಿಂದೆ 1978 ಮತ್ತು 1986 ರಲ್ಲಿ ಚಾಂಪಿಯನ್ ಆಗಿತ್ತು. ಡಿಯೆಗೊ ಮರಡೋನಾ ಅವರು 36 ವರ್ಷಗಳ ಹಿಂದೆ ಮೆಕ್ಸಿಕೊದಲ್ಲಿ ಮಾಡಿದ್ದ ಚಮತ್ಕಾರವನ್ನು ಮೆಸ್ಸಿ, ಮರುಭೂಮಿಯ ನಾಡಿನಲ್ಲಿ ಮಾಡಿ ತೋರಿಸಿದರು. 35 ವರ್ಷದ ಮೆಸ್ಸಿ ಅವರಿಗೆ ಇದು ಬಹುತೇಕ ಕೊನೆಯ ವಿಶ್ವಕಪ್ ಟೂರ್ನಿ ಆಗಿದೆ.

ಸತತ ಎರಡನೇ ಪ್ರಶಸ್ತಿ ಜಯಿಸಬೇಕೆಂಬ ಫ್ರಾನ್ಸ್ ತಂಡದ ಕನಸು ನುಚ್ಚುನೂರಾಯಿತು. ಸ್ಟಾರ್ ಆಟಗಾರ ಎಂಬಾಪೆ ಮಿಂಚಿದರೂ ತಂಡಕ್ಕೆ ಗೆಲುವು ದಕ್ಕಲಿಲ್ಲ.

ಇನ್ನಷ್ಟು ಸುದ್ದಿಗಳು 11

ಈಗ ಚಿನ್ನ ಪಡೆಯಿರಿ ಚಿನ್ನದೊಂದಿಗೆ
ಮಣಪ್ಪುರಂ ಗೋಲ್ಡ್ ಲೋನ್ ಮಹೋತ್ಸವ
1ನೇ ಅಕ್ಟೋಬರ್ ನಿಂದ 31ನೇ ಡಿಸೆಂಬರ್ 2022 ರವರೆಗೆ.
ಮಣಪ್ಪುರಂ ಫೈನಾನ್ಸ್ ಲಿಮಿಟೆಡ್
Make Life Easy
Toll Free : 1800-420-22-33

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ
ವರ್ಷಕ್ಕೆ 8.55*% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
ಸಂಸ್ಕರಣ ಮತ್ತು ಡಾಕ್ಯುಮೆಂಟೇಷನ್ ಶುಲ್ಕ 100% ಮನ್ನಾ
1800 425 0018

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
ತಯಾರಕರು
SDM ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.
Ph: 0820-2520852, 8970977513

₹ 3,000 ಕೋಟಿ ಹಿಂದುಳಿದ ತಾಲ್ಲೂಕಿಗೊ, ಮಹತ್ವಾಕಾಂಕ್ಷಿ ತಾಲ್ಲೂಕಿಗೊ?

ಅನುದಾನ ಹಂಚಿಕೆ: ಮುಗಿಯದ ಗೊಂದಲ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ (2022–23) ‘ವಿಶೇಷ ಅಭಿವೃದ್ಧಿ ಯೋಜನೆ’ಯಡಿ (ಎಸ್‌ಡಿಪಿ) ಮೀಸಲಿಟ್ಟ ₹ 3,000 ಕೋಟಿ ಅನುದಾನವನ್ನು ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಗುರುತಿಸಿದ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಮಾತ್ರ ವೆಚ್ಚ ಮಾಡಬೇಕೇ ಅಥವಾ ಕೇಂದ್ರ ಸರ್ಕಾರದ ನೀತಿ ಆಯೋಗ ಸೂಚಿಸಿರುವ 49 ಸೂಚ್ಯಂಕಗಳಿಗೆ ಅನುಗುಣವಾಗಿ ‘ಮಹತ್ವಾಕಾಂಕ್ಷಿ ತಾಲ್ಲೂಕು’ಗಳ ಅಭಿವೃದ್ಧಿಗೆ ವೆಚ್ಚ ಮಾಡಬೇಕೇ ಎಂಬ ಗೊಂದಲ ಮುಂದುವರಿದಿದೆ.

ಹೀಗಾಗಿ, ಪ್ರಸಕ್ತ ಸಾಲಿನಲ್ಲಿ ಕ್ರಿಯಾಯೋಜನೆ ರೂಪಿಸುವುದು ವಿಳಂಬವಾಗಿದ್ದು, ಎಸ್‌ಡಿಪಿ ಅನುದಾನದಲ್ಲಿ ₹ 669.20 ಕೋಟಿ ಮಾತ್ರ ಬಿಡುಗಡೆಯಾಗಿದೆ. ಅದರಲ್ಲಿ ₹ 440.72 ಕೋಟಿ (ಅಕ್ಟೋಬರ್‌ವರೆಗೆ) ವೆಚ್ಚವಾಗಿದೆ ಎಂದು ಆರ್ಥಿಕ ಇಲಾಖೆ ಮೂಲಗಳು ತಿಳಿಸಿವೆ.

ನಂಜುಂಡಪ್ಪ ವರದಿಯ ಯೋಜನೆ ಬದಲು ನೀತಿ ಆಯೋಗ ಸೂಚಿಸಿರುವ ಸೂಚ್ಯಂಕಗಳಿಗೆ ಅನುಗುಣವಾಗಿ ಮಹತ್ವಾಕಾಂಕ್ಷಿ ತಾಲ್ಲೂಕುಗಳ ಅಭಿವೃದ್ಧಿಗೆ ಯೋಜನೆ ರೂಪಿಸಿ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮಂಡಿಸಿದ್ದ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಇನ್ನೂ ಒಪ್ಪಿಗೆ ನೀಡಿಲ್ಲ. ಬಜೆಟ್ ಘೋಷಣೆಯಂತೆ ಸಿದ್ಧಪಡಿಸಿದ್ದ ಈ ಪ್ರಸ್ತಾವವನ್ನು ಏಪ್ರಿಲ್ 17, ಮೇ 5 ಮತ್ತು ಆಗಸ್ಟ್ 12ರ ಸಚಿವ ಸಂಪುಟ ಸಭೆಗೆ ಮಂಡಿಸಿದ್ದರೂ ನಿರ್ಣಯ ಕೈಗೊಳ್ಳದೆ ಮುಂದೂಡಿಕೆಯಾಗಿದೆ.

ಈ ಮಧ್ಯೆ, ಅಧಿಕಾರಿಗಳ ಸಭೆಯಲ್ಲಿ ರಾಜ್ಯದಲ್ಲಿ ಶಿಕ್ಷಣ, ಆರೋಗ್ಯ ಮತ್ತು ಅಪೌಷ್ಟಿಕತೆ ನಿವಾರಣೆಯ ‘ಮಹತ್ವಾಕಾಂಕ್ಷಿ ತಾಲ್ಲೂಕು’ಗಳನ್ನು ಗುರುತಿಸಿ ಯೋಜನೆ ರೂಪಿಸಿ ಈ ಅನುದಾನ ಬಳಕೆಯ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ. ಆದರೆ, ಮಹತ್ವಾಕಾಂಕ್ಷಿ ತಾಲ್ಲೂಕುಗಳ ಹೆಸರಿನಲ್ಲಿ ನಂಜುಂಡಪ್ಪ ವರದಿಯಲ್ಲಿರುವ ಹಿಂದುಳಿದ ತಾಲ್ಲೂಕುಗಳ ಹೊರಗಿನ ತಾಲ್ಲೂಕುಗಳಿಗೆ ಎಸ್‌ಡಿಪಿ ಅನುದಾನ ವೆಚ್ಚ ಮಾಡುವುದಕ್ಕೆ ವಿಧಾನಮಂಡಲದ ಅಂದಾಜು ಸಮಿತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಪ್ರಜಾವಾಣಿ ವಿಶೇಷ

7ನೇ ಪುಟ ನೋಡಿ

ಹಿಂದುಳಿದ 114 ತಾಲ್ಲೂಕುಗಳಿಗೆ ಅನುದಾನ

(2007–08ರಿಂದ 2022–23ರವರೆಗೆ)

₹43,961 ಕೋಟಿ ಒಟ್ಟು ಅನುದಾನ	₹33,868 ಕೋಟಿ ಬಿಡುಗಡೆ
₹30,698 ಕೋಟಿ ಈವರೆಗೆ ವೆಚ್ಚ (2022 ಅಕ್ಟೋಬರ್)	69.83% ಒಟ್ಟು ಅನುದಾನಕ್ಕೆ ಆಗಿರುವ ವೆಚ್ಚ

ಅಂದಾಜು ಸಮಿತಿ ತೀರ್ಮಾನಕ್ಕೆ ವ್ಯತಿರಿಕ್ತ

‘ನೀತಿ ಆಯೋಗ ಸೂಚಿಸಿರುವ ಸೂಚ್ಯಂಕಗಳ ಆಧಾರದಲ್ಲಿ ಗುರುತಿಸಿರುವ ಅಭಿವೃದ್ಧಿ ಆಕಾಂಕ್ಷಿ (ಮಹತ್ವಾಕಾಂಕ್ಷಿ) ತಾಲ್ಲೂಕುಗಳಿಗೆ ಮಾತ್ರ ವಿಶೇಷ ಅಭಿವೃದ್ಧಿ ಯೋಜನೆಯ ಅನುದಾನ ವಿನಿಯೋಗಿಸಬೇಕು ಎಂದು ಇದೇ 13ರಂದು ಆರ್ಥಿಕ ಇಲಾಖೆ ಸೂಚಿಸಿದೆ. ಅಲ್ಲದೆ, ಮಹತ್ವಾಕಾಂಕ್ಷಿ ತಾಲ್ಲೂಕುಗಳ ಪಟ್ಟಿಯಲ್ಲಿ ಇಲ್ಲದ ನಂಜುಂಡಪ್ಪ ವರದಿಯಲ್ಲಿ ಇರುವ ತಾಲ್ಲೂಕುಗಳಲ್ಲಿ ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಿದ ಬಳಿಕ ಅದರಂತೆ ಕ್ರಮ ಕೈಗೊಳ್ಳಲಾಗುವುದು ಎಂದೂ ಇಲಾಖೆ ತಿಳಿಸಿದೆ. ಆರೋಗ್ಯದಲ್ಲಿ 55, ಶಿಕ್ಷಣದಲ್ಲಿ 40 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯಲ್ಲಿ 44 ಮಹತ್ವಾಕಾಂಕ್ಷಿ ತಾಲ್ಲೂಕುಗಳಾಗಿದ್ದು, ಇವು ನಂಜುಂಡಪ್ಪ ವರದಿಯಲ್ಲಿರುವ ತಾಲ್ಲೂಕುಗಳ ಪಟ್ಟಿಯಲ್ಲಿ ಇಲ್ಲ.

ಮರ್ಯಾದೆಗೇಡು ಹತ್ಯೆ: ಯುವತಿ ತಂದೆ ಸೆರೆ

ಪ್ರಜಾವಾಣಿ ವಾರ್ತೆ

ಸಾವಳಗಿ (ಬಾಗಲಕೋಟೆ ಜಿಲ್ಲೆ): ತನ್ನ ಮಗಳನ್ನು ಪ್ರೀತಿಸಿ ಮದುವೆಯಾದ ಯುವಕನನ್ನು ಯುವತಿಯ ತಂದೆ ಹಾಗೂ ಮೂವರು ಸೇರಿ ಶನಿವಾರ ತಡರಾತ್ರಿ ಜಮಖಂಡಿ ತಾಲ್ಲೂಕಿನ ಟಕ್ಕೋಡದಲ್ಲಿ ಹತ್ಯೆ ಮಾಡಿದ್ದಾರೆ.

ಜೈನ ಸಮುದಾಯಕ್ಕೆ ಸೇರಿದ ಭುಜಬಲಿ ಕರ್ಜಗಿ (34) ಹತ್ಯೆಯಾದ ಯುವಕ.

ಕ್ಷತ್ರಿಯ ಸಮಾಜದ ತಮ್ಮನಗೌಡ ಪಾಟೀಲರ ಪುತ್ರಿ ಭಾಗ್ಯಶ್ರೀ ಹಾಗೂ ಒಕ್ಕಲುತನ ಮಾಡುತ್ತಿದ್ದ ಭುಜಬಲಿ ಕರ್ಜಗಿ ಪ್ರೀತಿಸುತ್ತಿದ್ದರು. ಎಂಟು ತಿಂಗಳ ಹಿಂದೆ ರಿಜಿಸ್ಟರ್ ಮದುವೆಯಾಗಿದ್ದರು. ಆದರೆ ಗ್ರಾಮಕ್ಕೆ ಬಂದಿರಲಿಲ್ಲ. ಪೊಲೀಸ್ ಠಾಣೆಯಲ್ಲಿ ಎರಡೂ ಮನೆಯವರ ನಡುವೆ ಸಂಧಾನ ನಡೆದ ನಂತರ ಇಬ್ಬರೂ ನಾಲ್ಕು ತಿಂಗಳಿಂದ ಗ್ರಾಮದಲ್ಲಿ ವಾಸಿಸುತ್ತಿದ್ದರು.

ಭುಜಬಲಿ

ತಮ್ಮನಗೌಡ

‘ಶನಿವಾರ ರಾತ್ರಿ ಹನುಮಾನ ದೇವರ ಪಲ್ಲಕ್ಕಿ ಉತ್ಸವ ಮುಗಿಸಿ ಸಹೋದರನ ಪುತ್ರ ಸುಮೇದ್ ಜತೆ ದ್ವಿಚಕ್ರ ವಾಹನದಲ್ಲಿ ಭುಜಬಲಿ ಹೋಗಲು ಸಿದ್ಧರಾಗಿದ್ದಾಗ ಖಾರದಪುಡಿ ಎರಚಲಾಗಿದೆ. ಆಗ ಸುಮೇದ್ ಓಡಿ ಹೋಗಿದ್ದಾರೆ. ಆನಂತರ ಭುಜಬಲಿಯನ್ನು ಕಬ್ಬು ಕಟಾವಿಗೆ ಬಳಸುವ ಹರಿತವಾದವಸ್ತುವಿನಿಂದ ಇರಿದು ಕೊಲೆ ಮಾಡಲಾಗಿದೆ’ ಎಂದು ಸಾವಳಗಿ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಆರೋಪಿ ತಮ್ಮನಗೌಡ ಪಾಟೀಲ ಅವರನ್ನು ಬಂಧಿಸಲಾಗಿದ್ದು, ಉಳಿದ ಆರೋಪಿಗಳ ಗುರುತು ಪತ್ತೆ ಮಾಡಲಾಗುತ್ತಿದೆ ಎಂದು ಇನ್‌ಸ್ಪೆಕ್ಟರ್ ಮನೋಹರ ಕಂಚಗಾರ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಗ್ರಾ.ಪಂ ಚುನಾಯಿತ ಪ್ರತಿನಿಧಿಗಳ ಗೌರವಧನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ತಿಂಗಳ ಗೌರವಧನವನ್ನು ಇಮ್ಮಡಿಗೊಳಿಸಿ ರಾಜ್ಯ ಸರ್ಕಾರ ಭಾನುವಾರ ಆದೇಶ ಹೊರಡಿಸಿದೆ.

ಸರ್ಕಾರ 2017ರ ಮೇ 5 ರಂದು ಹೊರಡಿಸಿದ್ದ ಆದೇಶದ ಅನ್ವಯ ಸದ್ಯ ಅಧ್ಯಕ್ಷರಿಗೆ ₹ 3 ಸಾವಿರ, ಉಪಾಧ್ಯಕ್ಷರಿಗೆ ₹ 2 ಸಾವಿರ, ಸದಸ್ಯರಿಗೆ ₹ 1 ಸಾವಿರ ಮಾಸಿಕ ಗೌರವಧನ ನೀಡಲಾಗುತ್ತಿದೆ. ಈ ಮೊತ್ತವನ್ನು ಕ್ರಮವಾಗಿ ₹ 6 ಸಾವಿರ, ₹ 4 ಸಾವಿರ, ₹ 2 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಮಾಸಿಕ ಗೌರವ ಧನ ಹೆಚ್ಚಿಸುವಂತೆ ಆಗ್ರಹಿಸಿ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಸುನೀಲಗೌಡ ಪಾಟೀಲ ಸದನದ ಒಳಗೆ ಮತ್ತು ಹೊರಗೆ ನಿರಂತರ ಹೋರಾಟ ನಡೆಸುತ್ತಿದ್ದಾರೆ.

ಕಳೆದ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಸುನೀಲಗೌಡ ಪಾಟೀಲ ಕೇಳಿದ್ದ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಮಾಸಿಕ ಗೌರವಧನ ಹೆಚ್ಚಳ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಈ ಗೌರವಧನ ಪರಿಷ್ಕರಣೆ ಮಾಡಲು ನಿರ್ದಿಷ್ಟ ಕಾಲಮಿತಿ ನಿಗದಿಪಡಿಸಿಲ್ಲ’ ಎಂದಿದ್ದರು.

ಒಳ ಪುಟಗಳು

ಸಂಘಟನೆಗೆ ರಾಹುಲ್–ಖರ್ಗೆ ಜುಗಲ್‌ಬಂದಿ 10
ಸಂಸತ್ ಅಧಿವೇಶನ: ಸರ್ಕಾರ ಇಕ್ಕಟ್ಟಿಗೆ ಸಿಲುಕಿಸಲು ಸಜ್ಜು 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಜೆಪಿ ‘ಶಕ್ತಿ ಸಂಗಮ’ದಲ್ಲಿ ಬಲ ಪ್ರದರ್ಶನ

‘ಅಧಿವೇಶನದಲ್ಲೇ ಉತ್ತರ ಕೊಡ್ತೇವೆ ಬನ್ನಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಮ್ಮ ಪ್ರಶ್ನೆಗಳಿಗೆ, ಆರೋಪಗಳಿಗೆ ಬೆಳಗಾವಿ ಅಧಿವೇಶನದಲ್ಲೇ ಉತ್ತರ ಕೊಡುತ್ತೇವೆ ಬನ್ನಿ’ ಎಂದು ಬಿಜೆಪಿ ನಾಯಕರು ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರಿಗೆ ಸವಾಲು ಹಾಕಿದರು.

ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಬಿಜೆಪಿಯ 24 ಪ್ರಕೋಷ್ಠಗಳ ರಾಜ್ಯ ಸಮಾವೇಶ ‘ಶಕ್ತಿ ಸಂಗಮ’ ಕಾರ್ಯಕ್ರಮದಲ್ಲಿ ಬಿಜೆಪಿಯ ಮುಖಂಡರು ವಿರೋಧ ಪಕ್ಷಗಳ ನಾಯಕರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಇಡೀ ಕಾರ್ಯಕ್ರಮ ಪಕ್ಷದ ಕಾರ್ಯಕರ್ತರ ಬಲಪ್ರದರ್ಶನವಾಗಿ ರೂಪುಗೊಂಡಿತ್ತು.

ಹುಬ್ಬಳ್ಳಿ– ಹಾವೇರಿ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಮಾವೇಶಕ್ಕೆ ಆಗಮಿಸುವುದು ತಡವಾದರೂ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ನಳಿನ್ ಕುಮಾರ್ ಕಟೀಲ್ ಅವರಿಗಾಗಿಯೇ ಕಾದಿದ್ದರು. ಮುಖ್ಯಮಂತ್ರಿ ಭಾಷಣ ಮುಗಿದ ಮೇಲೆಯೇ ಒಟ್ಟಾಗಿ ತೆರಳಿದರು.

ಬೆಂಗಳೂರಿನಲ್ಲಿ ಭಾನುವಾರ ಬಿಜೆಪಿ ಆಯೋಜಿಸಿದ್ದ ಶಕ್ತಿ ಸಂಗಮ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಸದಸ್ಯರು – ಪ್ರಜಾವಾಣಿ ಚಿತ್ರ

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, ‘ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದ್ದು ಡಬ್ಬಲ್ ಎಂಜಿನ್ ಸರ್ಕಾರದಿಂದ ರಾಜ್ಯ ಮತ್ತಷ್ಟು ಅಭಿವೃದ್ಧಿ ಕಾಣಲಿದೆ’ ಎಂದು ಪ್ರತಿಪಾದಿಸಿದರು.

‘ಪ್ರಧಾನಿ ಮೋದಿಯವರು ರೈಲ್ವೆ, ವಿಮಾನಯಾನ ಸೇವೆ, ಮೆಟ್ರೊ ಸೇರಿದಂತೆ ದೇಶದ ಸಮಗ್ರ ಅಭಿವೃದ್ಧಿಗೆ ಮುಂದಾಗಿದ್ದಾರೆ. ಯುಪಿಎ ಅವಧಿಯಲ್ಲಿ ರೈಲ್ವೆ ಇಲಾಖೆಗೆ ಕೇವಲ ₹ 835 ಕೋಟಿ ಸಿಕ್ಕಿತ್ತು. ಬಿಜೆಪಿ ಅವಧಿಯಲ್ಲಿ ₹ 6,091 ಕೋಟಿ ಅನುದಾನ ಲಭಿಸಿದೆ’ ಎಂದು ವಿವರಿಸಿದರು.

> ಸಿ.ಟಿ.ರವಿ ಹೋರಾಟದ ಕಿಚ್ಚು ಹಚ್ಚಿದ್ದಾರೆ. ಪ್ರತಿಪಕ್ಷಗಳ ನಾಯಕರನ್ನು ಮಾತಿನ ಮೂಲಕ ಹುರಿದು ಉಪ್ಪಿನಕಾಯಿ ಹಾಕಿದ್ದಾರೆ
>
> **ಬಿ.ಎಲ್.ಸಂತೋಷ್,** ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

7ನೇ ಪುಟ ನೋಡಿ

‘ಟಿಪ್ಪು ತಾತನ ಹೆಸರು ನೆನಪು’

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ‘100 ದಿನಗಳಲ್ಲಿ ಚುನಾವಣೆ ದಿನಾಂಕ ಪ್ರಕಟಗೊಳ್ಳಲಿದೆ. ಒಂದೇ ಸಾರಿ ಪಂಚರತ್ನ ಬಂದಿದೆ. ಪ್ರತಿಸಾರಿಯೂ ಇದು ಕೊನೆಯ ಚುನಾವಣೆಯೆಂದು ಘೋಷಿಸುತ್ತಾರೆ. ಕಣ್ಣೀರಿನ ಮೂಲಕ ಚುನಾವಣೆಗೆ ಹೋಗುತ್ತಿದ್ದಾರೆ. ಮತ್ತೆ ಬೀದಿಗೆ ಬಂದಿದ್ದಾರೆ. ಅಪ್ಪನಿಂದ ಮಗನಿಗೆ, ತಾಯಿಯಿಂದ ಮಗನಿಗೆ ಕ್ಷೇತ್ರ ತ್ಯಾಗ ಮಾಡುವ ಮಾತನಾಡುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದರು.

‘ಟಿಪ್ಪು ತಾತನ ಹೆಸರು ನೆನಪಾಗುವ ಇನ್ನೊಂದು ಪಕ್ಷ ಇದೆ. ಚುನಾವಣಾ ಕಾಲ ಬಂದ ಕಾರಣಕ್ಕೆ ಟಿಪ್ಪು ನೆನಪಾಗುತ್ತಿದೆ ಎಂದ ಅವರು, ಕುಕ್ಕರ್ ಬಾಂಬ್‌ನ ಕೊಳಕು ರಾಜಕೀಯ ನಮ್ಮದಲ್ಲ’ ಎಂದರು.

24 ಪ್ರಕೋಷ್ಠ ಸೇರಿಸಿ ಸಮಾವೇಶ ನಡೆಸುತ್ತಿರುವುದು ಇದೇ ಮೊದಲು ಎಂದರು.

ಡಾ|| ಎಂ.ಎಸ್. ರಾಮಯ್ಯರವರ ಇಪ್ಪತ್ತೈದನೆಯ ಪುಣ್ಯತಿಥಿ

ನಮ್ಮ ಪೂಜ್ಯ ತಂದೆಯವರಾದ
ಡಾ|| ಎಂ.ಎಸ್. ರಾಮಯ್ಯ
ರವರ ಪುಣ್ಯತಿಥಿಯನ್ನು
ಇದೇ ಶ್ರೀ ಶುಭಕೃತನಾಮ ಸಂವತ್ಸರದ ಮಾರ್ಗಶಿರ ಬಹುಳ ಏಕಾದಶಿ ದಿನಾಂಕ: 19–12–2022 ನೇ ಸೋಮವಾರ, ನಮ್ಮ ಸ್ವಗೃಹವಾದ “ಗೋಕುಲ”ದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಡಾ|| ಎಂ.ಆರ್. ಜಯರಾಮ್
ಮತ್ತು ಸಹೋದರರು ಹಾಗೂ ಅವರ ಕುಟುಂಬ ವರ್ಗದವರು
ಕಾರ್ಯಕ್ರಮ : ಪುಣ್ಯಾಹ ವಾಚನ: ಬೆಳಿಗ್ಗೆ 11.30 ರಿಂದ । ಭೋಜನ : ಮಧ್ಯಾಹ್ನ 12.30 ಗಂಟೆಗೆ

ಮರಾಠಿ ಚಿತ್ರದ ಪೋಸ್ಟರ್‌ಗೆ ಮಸಿ, ಆಕ್ರೋಶ

ಪ್ರಜಾವಾಣಿ ವಾರ್ತೆ

ಕಾರವಾರ: ನಗರದ ಅಶೋಕ ಚಿತ್ರಮಂದಿರದಲ್ಲಿ ಮರಾಠಿ ಚಲನಚಿತ್ರ 'ಧೋಂಡಿ ಚಂಪ್ಯಾ ಏಕ್ ಪ್ರೇಮ್ ಕಥಾ' ಪ್ರದರ್ಶನ ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಕಾರ್ಯಕರ್ತರು ಭಾನುವಾರ ಪ್ರತಿಭಟಿಸಿದ್ದು, ಭಿತ್ತಿಪತ್ರಕ್ಕೆ ಮಸಿ ಬಳಿದರು.ಈ ಹಿನ್ನೆಲೆಯಲ್ಲಿ ಮರಾಠಿ ಚಿತ್ರದ ಪೋಸ್ಟರ್ ತೆರವು ಮಾಡಲಾಯಿತು. ಮುಂಜಾಗ್ರತೆಯಾಗಿ ಪೊಲೀಸರು ಹಾಜರಿದ್ದರು.

IN IMAX AT

PVR CINEMAS {Forum Mall, Koramangala, 6:30, 10:30 a.m., 2:30, 6:30, 10:30 p.m. | Vega City, 6:30, 10:30 a.m., 2:30, 6:30, 10:30 p.m. | VR Mall, 6:30, 10:30 a.m., 2:30, 6:30, 10:30 p.m.} | INOX CINEMAS {Mantri Square Mall, 7:10, 11:00 a.m., 2:50, 6:40, 10:30 p.m. | Galleria Mall, Yelahanka, 7:10, 11:00 a.m., 2:50, 6:40, 10:30 p.m.} | CINEPOLIS {Shanthiniketan, 7:00, 10:40 a.m., 2:35, 6:35, 10:30 p.m.}.

IN 4DX AT

PVR CINEMAS {Phoenix Marketcity Mall, 6:40, 10:35 a.m., 2:30, 6:25, 10:20 p.m. | Forum Mall, Koramangala, 6:40, 10:35 a.m., 2:30, 6:25, 10:20 p.m. | Vega City, 6:40, 10:35 a.m., 2:30, 6:25, 10:20 p.m. | Orion Mall, 6:40, 10:35 a.m., 2:30, 6:25, 10:20 p.m.} | CINEPOLIS {Shanthiniketan, 7:10, 10:50 a.m., 2:45, 6:40, 10:30 p.m.}.

IN ENGLISH VERSION AT

PVR CINEMAS {Phoenix Marketcity | Forum Mall | Orion Mall | Orion Uptown Mall | MSR Regalia Mall | Spirit Mall | VR Mall | Vaishnavi Saphire Mall | Superplex Vegacity Mall | GT Mall, Magadi Road | Aura Cinema | Director Cuts Rex} | MIRAJ CINEMAS {Magadi Road} | INOX CINEMAS {Garuda Mall | Swagath Mall | Mantri Mall | RMZ, Yelahanka | Central Mall | Brookefield Mall | Lido | Forum Value Mall | Garuda, Yelahanka | SBR Horizon} | CINEPOLIS CINEMAS {Shantiniketan | Royal Meenakshi Mall | ETA Mall | Orion East Mall | Sigma Mall | SJR Spectrum Mall} | GOPALAN {Innovation Mall | Arch Mall | Legacy Mall | Grand Mall | Signature Mall} | INNOVATIVE MULTIPLEX {Marathahalli} | ROCKLINE CINEMAS {Jalahalli} | KINO CINEMAS | SWAGATH SHANKARNAG {M.G Road} | SWAGATH POORNIMA {JC Road} | THIRUMALA {Agara} | LAKSHMI {Taverkare} | BALAJI THEATRE {Taverkare} | VICTORY CINEMAS {Magadi Raod} | MANASA {Konankunte} | SANDHYA {Madivala} | BRUNDHA THEATRE {Hongasandra} | SRI LAKSHMI CHITRAMANDIRA {Ram Murthy Nagar} | VINAYAKA {Vartur} | AMRUT THEATRE {Lingrajapuram} | VIJAYA CHITRA MANDIR {Byatarayanapura} | TULSI {Marathahalli} | ANJAN THEATRE {Magadi Raod} | RAVI {Sarjapura} | MUKTA A2 {Uttarahalli} | RADHAKRISHNA {Matadahalli} | VENKATESHWARA {Konappana Agrahara} | PRASANNA {Magadi Raod} | HMT {Jalahalli} | VAIBHAV {Sanjay Nagar} | VAIBHAV {Doddaballapur} | V CINEMA {Garudacharpalya} | SRI VINAYAKA {Marathahalli} | AKASH {Laggere} | SRI SIDDESHWARA CHITRAMANDIRA {JP Nagar} | BALAJI {Chikkalasandra} | SRINIVASA {S. G. Palya} | MAHADESHWARA {Banashankari} | BHARATHI {Peenya} | PUSHPANJALI {B N Pura} | URVASHI THEATRE {Lalbagh Road} | MUKUNDA THEATRE {Banaswadi Main Road} | CAUVERY {Sankey's Road} | PUSHPANJALI {Sultanpalya} | VENKATESHWARA {Kengiri} | ROBIN THEATRE {Kengiri} | CHANDRODAYA CHITRA MANDIRA {Banashankari} | VENKATESHWARA {Giri Nagar} | CHITRA MANDIRA {K R Puram} | MOHAN THEATRE {Sudalghatta} | NARTAKI THEATRE {MG Road} | MARUTHI THEATRE {Rajgopal Nagar} | GURU SHREE {Mandya} | BALAJI THEATRE {Dommasandra} | SRI LAKSHMI THEATRE {Gottigere} | SRI SRINIVASHA THEATRE {PadmanabaNagar} | VAINIDHI THEATRE {Singapura} | VEERESH THEATRE {Magadi Raod} | VINAYAKA THEATRE {Harinagar} | TRIVENI THEATRE {Gandhi Nagar} | PRITHIVI THEATE {Hassan} | DRC CINEMAS {Mysore} | INOX CINEMAS {Satyam, Mysore | Centro, Mysore} | PVR CINEMAS {Forum Mall, Mysore | Garuda Mall, Mysore} | VISION CINEMAS {Mysore} | RAJKAMAL {Mysore} | SANGAM {Mysore} | CINEPOLIS {City Centre Mall, Mangalore} | BHARATH CINEMAS {Mangalore} | PVR CINEMAS {Fiza Mall, Mangalore} | SREELEKHA THEATRE {Chikamagalur} | COORG {Kushalnagar} | INOX CINEMAS {S Mall, Tumkur} | JAI BHARATH {Tumkur} | CINE GALAXY {Surathkal} | BHARATH CINEMAS {Padubidri} | INOX {Manipal} | BHARATH CINEMAS {Manipal} | BHARATH CINEMAS {Shivamoga} | VEERABHADESHWARA {Shivamoga} | BHARATH CINEMAS {Kundapura} | MOVIETIME {Davangere} | TRINETRA {Davangere} | TRISHUL {Davangere} | VASANTHA {Davangere} | GANGA {Bellary} | RADHIKA {Bellary} | MEERALAM {Hospet}.

IN HINDI VERSION AT

PVR CINEMAS {Forum Mall | Orion Mall | VR Mall | Superplex Vegacity Mall} | CINEPOLIS CINEMAS {Shantiniketan | Royal Meenakshi Mall | ETA Mall | Orion East Mall | Sigma Mall | SJR Spectrum Mall} | GOPALAN {Innovation Mall | Signature Mall} | ROCKLINE CINEMAS {Jalahalli} | BALAJI THEATRE {Taverkare} | VAIBHAV {Sanjay Nagar} | V CINEMA {Garudacharpalya} | SRI SIDDESHWARA CHITRAMANDIRA {JP Nagar} | SANTOSH TALKIES {RPC Layout} | SAPNA THEATRE {K G Road} | VINAYAKA THEATRE {DJ Halli} | PVR CINEMAS {Forum Mall, Mysore} | CINEPOLIS {City Centre Mall, Mangalore} | PVR CINEMAS {Fiza Mall, Mangalore} | VASANTHA {Davangere} | RAGHAVENDRA THEATRE {Bellary} | BALA {Hospet}.

IN KANNADA VERSION AT

PVR CINEMAS {Orion Mall | Spirit Mall | Vaishnavi Saphire Mall | GT Mall, Magadi Road | Aura Cinema} | MIRAJ CINEMAS {Magadi Road} | INOX CINEMAS {Garuda Mall | Forum Value Mall | SBR Horizon} | CINEPOLIS CINEMAS {Shantiniketan | Royal Meenakshi Mall | ETA Mall | SJR Spectrum Mall} | GOPALAN {Arch Mall | Legacy Mall} | ROCKLINE CINEMAS {Jalahalli} | BALAJI THEATRE {Taverkare} | MUKTA A2 {Uttarahalli} | BALAJI {Chikkalasandra} | VANI THEATRE {Kanakapura} | SAPNA THEATRE {K G Road} | VENKATESHWARA {Kengiri} | ROBIN THEATRE {Kengiri} | VENKATESHWARA {Giri Nagar} | MOHAN THEATRE {Sudalghatta} | SAVITHA THEATRE {Malleshwaram | MARUTHI THEATRE {Rajgopal Nagar} | GURU SHREE {Mandya} | SRI SRINIVASHA THEATRE {Padmanabanagar} | VAINIDHI THEATRE {Singapura} | VEERESH THEATRE {Magadi Raod} | VINAYAKA THEATRE {Harinagar} | PRITHIVI THEATER {Hassan} | INOX CINEMAS {Centro, Mysore} | PVR CINEMAS {Forum Mall, Mysore} | VISION CINEMAS {Mysore} | MARUTHI THEATRE {Tumkur} | JAI BHARATH {Tumkur} | BHARATH CINEMAS {Shivamoga} | VEERABHADESHWARA {Shivamoga} | BHARATH CINEMAS {Kundapura} | MOVIETIME {Davangere} | ASHOKA THEATRE {Davangere}.

ALSO SHOWING IN TELUGU, TAMIL & MALAYALAM VERSION AT OTHER CINEMAS

FOR ANY CHANGES OR CANCELLATION IN SHOW TIMINGS, PLEASE CONTACT THE THEATRE

farnaz

ಕವಿ ಜಯಂತ ಕಾಯ್ಕಿಣಿ ಆಶಯ • 'ನನ್ನ ಬಕುಲದ ಹೂವು' ಪುಸ್ತಕ ಬಿಡುಗಡೆ

'ಹೊಸ ಪೀಳಿಗೆಗೆ ಎಕ್ಕುಂಡಿ ಕಾವ್ಯ ತಲುಪಲಿ'

ಪ್ರಜಾವಾಣಿ ವಾರ್ತೆ

ಪುಸ್ತಕ ಪರಿಚಯ

ಪುಸ್ತಕ: 'ನನ್ನ ಬಕುಲದ ಹೂವು'
ಸಂಪಾದಕರು: ಜಿ.ಎನ್. ಮೋಹನ್
ಪುಟಗಳು: 48
ಬೆಲೆ: ₹ 75
ಪ್ರಕಾಶನ: ಬಹುರೂಪಿ

ಬೆಂಗಳೂರು: 'ಸು.ರಂ. ಎಕ್ಕುಂಡಿ ಅವರ ಬರಹಗಳ ಓದು ಹೊಸ ಜೀವನದೃಷ್ಟಿಯನ್ನು ನೀಡಿತು. ಅವರ ಕವಿತೆಗಳು ಹೊಸ ತಲೆಮಾರಿಗೆ ತಲುಪಬೇಕು' ಎಂದು ಕವಿ ಜಯಂತ ಕಾಯ್ಕಿಣಿ ಭಾನುವಾರ ಇಲ್ಲಿ ಅಭಿಪ್ರಾಯಪಟ್ಟರು.

ಸು.ರಂ. ಎಕ್ಕುಂಡಿ ಅವರ ಜನ್ಮಶತಮಾನೋತ್ಸವ ಪ್ರಯುಕ್ತ ಭಾಗವತರು ಸಾಂಸ್ಕೃತಿಕ ಸಂಘಟನೆ ಹಮ್ಮಿಕೊಂಡಿದ್ದ 'ಸುರಮ್ಯ ಎಕ್ಕುಂಡಿ' ಕಾರ್ಯಕ್ರಮದಲ್ಲಿ 'ನನ್ನ ಬಕುಲದ ಹೂವು' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'70–80ರ ದಶಕದಲ್ಲಿ ನಾವೆಲ್ಲ ನವ್ಯ ಪೀಡಿತರಾಗಿದ್ದೆವು. ತಂದೆ ಆ ವೇಳೆ ಎಕ್ಕುಂಡಿ ಅವರ ಬರಹಗಳನ್ನು ಓದಲು ಒತ್ತಾಯಿಸುತ್ತಿದ್ದರು. ಕ್ರಮೇಣ ಅವರನ್ನು ಓದಿ, ತಿಳಿದುಕೊಂಡೆ. ಅವರ ಕವಿತೆಗಳನ್ನು ಹೊಸ ತಲೆಮಾರಿಗೆ ತಲುಪಿಸಬೇಕು. ಅವರ ಬದುಕು ಹಾಗೂ ಬರಹವನ್ನು ಯುವಜನರು ಪ್ರೇರಣೆಯಾಗಿ ಪಡೆದುಕೊಳ್ಳಬೇಕು. ತಾನು ಸಾಹಿತಿಯೆಂಬ ವಿಶೇಷ ಭುಜಕೀರ್ತಿಯನ್ನು ಅವರು ಹೊಂದಿದವರಲ್ಲ' ಎಂದು ಹೇಳಿದರು.

'ಶಿಕ್ಷಕರಾಗಿದ್ದ ಎಕ್ಕುಂಡಿ ಅವರು, ಕಡೆಯವರೆಗೂ ಸರಳ ಜೀವನ ನಡೆಸಿದರು. ನಿವೃತ್ತಿ ಆಗುವಾಗ ಅವರ ಬಳಿ ಸೈಕಲ್ ಕೂಡ ಇರಲಿಲ್ಲ. ಪ್ರಪಂಚವನ್ನು ಅವರು ಕಂಡ ಬಗೆ ಉಳಿದವರಿಗಿಂತ ವಿಶಿಷ್ಟವಾಗಿದೆ' ಎಂದು ಹೇಳಿದರು.

ಸು.ರಂ.ಎಕ್ಕುಂಡಿ ಅವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಅವರ ಕವನಗಳನ್ನು ಒಳಗೊಂಡ ಫೋಟೊ ಫ್ರೇಮ್‌ಗಳನ್ನು ಕವಿ ಎಚ್‌.ಎಸ್‌. ವೆಂಕಟೇಶಮೂರ್ತಿ ಬಿಡುಗಡೆ ಮಾಡಿದರು. ಭಾಗವತರು ಸಾಂಸ್ಕೃತಿಕ ಸಂಘಟನೆ ಅಧ್ಯಕ್ಷ ಕೆ. ರೇವಣ್ಣ, ಜಯಂತ ಕಾಯ್ಕಿಣಿ, ಪತ್ರಕರ್ತ ಜಿ.ಎನ್‌.ಮೋಹನ್‌, ವಿಜಯಾ, ವೇದಾ ಎಕ್ಕುಂಡಿ, ರಂಗನಾಥ ಎಕ್ಕುಂಡಿ ಇದ್ದಾರೆ. –ಪ್ರಜಾವಾಣಿ ಚಿತ್ರ

ಲೇಖಕಿ ವಿಜಯಾ, 'ಸು.ರಂ. ಎಕ್ಕುಂಡಿ ತಾವು ಕಂಡ ಬಡತನ, ಸಂಕಷ್ಟಗಳನ್ನು ಕವನಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಆದರೆ, ಅವರ ಬರಹಗಳನ್ನು ಓದಿದಾಗ ಸಮಸ್ಯೆಗಳು ವೈಯಕ್ತಿಕ ಎಂದೆನಿಸುವುದಿಲ್ಲ. ಸಾರ್ವತ್ರಿಕ ಸಮಸ್ಯೆ ಎನ್ನುವ ರೀತಿಯಲ್ಲಿ ಬರಹಗಳು ಇರುತ್ತಿದ್ದವು. ಸಾಮಾಜಿಕ ಬದಲಾವಣೆಗೆ ಅವರು ಮಿಡಿಯುತ್ತಿದ್ದರು. ತಾವು ಹೇಳಬೇಕಾದದ್ದನ್ನು ಕಾವ್ಯದ ಮೂಲಕವೇ ಓದುಗರಿಗೆ ತಲುಪಿಸುತ್ತಿದ್ದರು' ಎಂದರು.

ಸು.ರಂ. ಎಕ್ಕುಂಡಿ ಅವರ ಪುತ್ರ ರಂಗನಾಥ ಎಕ್ಕುಂಡಿ, 'ಇಂದಿಗೂ ತಂದೆ ಅವರ ಕವಿತೆಗಳನ್ನು ಮೆಚ್ಚಿಕೊಳ್ಳುವ ಸಾಹಿತ್ಯ ಪ್ರೇಮಿಗಳು ಇದ್ದಾರೆ. ಅವರು ಮರಣ ಹೊಂದಿ 27 ವರ್ಷ ಗತಿಸಿದರೂ ಅವರ ಕವಿತೆಗಳು ಚರ್ಚೆಯಾಗುತ್ತಿವೆ. ಅವರು ಮರೆಯಲಾರದ ಕವಿಯಾಗಿದ್ದಾರೆ' ಎಂದು ಅವರು ಹೇಳಿದರು.

2 ಸಾವಿರದ ಗಡಿಯತ್ತ ಡೆಂಗಿ

ಬೆಂಗಳೂರು: ನಗರದಲ್ಲಿ ಎರಡು ವಾರಗಳಿಂದ ಡೆಂಗಿ ಪ್ರಕರಣಗಳ ಸಂಖ್ಯೆ ಉಲ್ಬಣಗೊಂಡಿದೆ. ಇದುವರೆಗೆ ಜ್ವರಕ್ಕೆ ಒಳಗಾದವರ ಸಂಖ್ಯೆ ಎರಡು ಸಾವಿರದ ಗಡಿ (1,993) ಸಮೀಪಿಸಿದೆ.

ಈ ವರ್ಷ 68,708 ಮಂದಿ ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 9,768 ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. ನಗರದಲ್ಲಿ ಈವರೆಗೂ ಡೆಂಗಿ ಮರಣ ಪ್ರಕರಣ ವರದಿಯಾಗಿಲ್ಲ.

ಕಳೆದ ವರ್ಷ 52,333 ಡೆಂಗಿ ಶಂಕಿತರ ತಪಾಸಣೆ ಮಾಡಲಾಗಿದ್ದು, 1,570 ಮಂದಿಯಲ್ಲಿ ಡೆಂಗಿ ದೃಢಪಟ್ಟಿತ್ತು. ಈ ವರ್ಷ ಆಗಸ್ಟ್ ಅಂತ್ಯದವರೆಗೂ ನಗರದಲ್ಲಿ ಪ್ರಕರಣಗಳ ಸಂಖ್ಯೆ ನಿಯಂತ್ರಣದಲ್ಲಿತ್ತು. ಆ ವೇಳೆಗೆ ನಗರದಲ್ಲಿ 1,058 ಪ್ರಕರಣಗಳು ದೃಢಪಟ್ಟಿದ್ದವು. ಬಳಿಕ ಮಳೆ ಸುರಿದಿದ್ದರಿಂದ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ಕಂಡಿದೆ.

ಕಳೆದ 10 ದಿನಗಳಲ್ಲಿ 8 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿದ್ದು, 413 ಮಂದಿಯಲ್ಲಿ ಜ್ವರ ದೃಢಪಟ್ಟಿದೆ. ಚಿಕೂನ್‌ಗುನ್ಯಾ ಪ್ರಕರಣಗಳು ನಿಯಂತ್ರಣದಲ್ಲಿದೆ. 1,540 ಶಂಕಿತರನ್ನು ತಪಾಸಣೆಗೆ ಒಳಪಡಿಸಿದ್ದು, 13 ಮಂದಿಯಲ್ಲಿ ಚಿಕೂನ್‌ಗುನ್ಯಾ ಜ್ವರ ದೃಢಪಟ್ಟಿದೆ. ಕಳೆದ ವರ್ಷ 54 ಮಂದಿಯಲ್ಲಿ ಜ್ವರ ಕಾಣಿಸಿಕೊಂಡಿತ್ತು.

'ಹವಾಮಾನ ಬದಲಾವಣೆ ಹಾಗೂ ಮಳೆಯಿಂದಾಗಿ ಅನೇಕ ಮಂದಿ ವಿವಿಧ ಜ್ವರಗಳಿಗೆ ಒಳಪಡುತ್ತಿದ್ದಾರೆ. ಸೊಳ್ಳೆಗಳ ಕಡಿತದಿಂದ ಕಾಣಿಸಿಕೊಳ್ಳುವ ಡೆಂಗಿ, ಚಿಕೂನ್‌ಗುನ್ಯಾ ಪ್ರಕರಣಗಳು ಹೆಚ್ಚುತ್ತಿವೆ. 'ಮನೆಯ ಸುತ್ತ ಸ್ವಚ್ಛತೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಕೋವಿಡ್ ಬುಲೆಟಿನ್: 1000 ಸಂಚಿಕೆ

ಬೆಂಗಳೂರು: ಕೋವಿಡ್ ಸಾಂಕ್ರಾಮಿಕ ರೋಗದ ಬಗ್ಗೆ ಬಿಬಿಎಂಪಿ ಪ್ರಕಟಿಸುತ್ತಿರುವ 'ಕೋವಿಡ್ ಬುಲೆಟಿನ್' ಶುಕ್ರವಾರ ಒಂದು ಸಾವಿರದ ಸಂಚಿಕೆಗೆ ತಲುಪಿದೆ.

'ಕೋವಿಡ್ ಬುಲೆಟಿನ್–1000' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ಟ್ವೀಟ್ ಮಾಡಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಸದ್ಯ 1,268 ಸಕ್ರಿಯ ಪ್ರಕರಣಗಳಿವೆ. ಕೋವಿಡ್ ಆರಂಭದಿಂದ ಈವರೆಗೆ 3,19,99,524 ಪರೀಕ್ಷೆ ನಡೆಸಲಾಗಿದೆ. 18,76,491 ಪಾಸಿಟಿವ್ ಪ್ರಕರಣಗಳಾಗಿದ್ದು, 18,58,232 ಜನ ಚೇತರಿಸಿಕೊಂಡಿದ್ದಾರೆ. 16,991 ಮಂದಿ ಮೃತರಾಗಿದ್ದಾರೆ. ಈವರೆಗೆ 2,04,95,776 ಡೋಸ್ ವ್ಯಾಕ್ಸಿನ್ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಬೊಮ್ಮನಹಳ್ಳಿ, ಹೊರಮಾವು, ಬಾಗಲಗುಂಟೆ, ಬೆಳ್ಳಂದೂರು, ಹೆಮ್ಮಿಗೆಪುರ ವಾರ್ಡ್‌ಗಳಲ್ಲಿ 7 ದಿನಗಳಲ್ಲಿ ಪ್ರತಿನಿತ್ಯ ಒಂದೊಂದು ಪ್ರಕರಣ ದಾಖಲಾಗಿದೆ ಎಂದರು.

'ಸೀಮಿತತೆ ಬಿಡಿ, ಬಹುಮುಖಿಯಾಗಿ ಬೆಳೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಧನೆಯ ಹಾದಿಯಲ್ಲಿ ವ್ಯಕ್ತಿ ಬಹುಮುಖಿಯಾಗಿ ಬೆಳೆಯುವುದು ಬಹಳ ಮುಖ್ಯ. ಕೇವಲ ಕವಿಯಾಗಿ ಕಾವ್ಯಕ್ಕೆ, ಕತೆಗಾರರಾಗಿ ಕತೆಗಳಿಗೆ ಸೀಮಿತವಾಗಬಾರದು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಟಿ.ಎಸ್. ನಾಗಾಭರಣ ಅಭಿಪ್ರಾಯಪಟ್ಟರು.

ಋತುಗಾನ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ವಿಜಯಲಕ್ಷ್ಮಿ ಸತ್ಯಮೂರ್ತಿ ಅವರ 'ಪಾರಿಜಾತದ ನೆರಳು' ಕಥಾ ಸಂಕಲನ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪಾರಿಜಾತದ ನೆರಳು' ಕಥಾ ಸಂಕಲನವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಟಿ.ಎಸ್‌.ನಾಗಾಭರಣ ಬಿಡುಗಡೆ ಮಾಡಿದರು. ಸಾಹಿತಿ ವಿಜಯಲಕ್ಷ್ಮಿ ಸತ್ಯಮೂರ್ತಿ, ಉಪನ್ಯಾಸಕಿ ನಳಿನಾ ಪ್ರಸಾದ್ ಇತರರು ಇದ್ದಾರೆ

'ಎಲ್ಲ ರೀತಿಯ ಬೆಳವಣಿಗೆಗಳಿಗೆ ತನ್ನನ್ನು ತಾನು ತೊಡಗಿಸಿಕೊಳ್ಳಬೇಕು. ಸಾಧನೆಯ ಮೆಟ್ಟಿಲುಗಳಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು. ಆ ಮೂಲಕ ಬಹುಮುಖಿ ವ್ಯಕ್ತಿತ್ವವನ್ನು ಸಾರಸ್ವತ ಮತ್ತು ಕಲಾ ಲೋಕದಲ್ಲಿ ಪಡೆಯಬೇಕು ಎಂಬುದು ಇವತ್ತಿನ ಸಿದ್ಧಾಂತವಾಗಿದೆ' ಎಂದು ಹೇಳಿದರು.

ಉಪನ್ಯಾಸಕಿ ನಳಿನಾ ಪ್ರಸಾದ್ ಅವರು, '108 ಪುಟಗಳ ಈ ಕೃತಿಯಲ್ಲಿ, ಹೆಣ್ಣಿನ ಜೀವನದ ಹಲವು ಮುಖಗಳು, ಬದುಕಿನ ನೈಜ ಅನುಭವಗಳು ಬಿಂಬಿತವಾಗಿವೆ. ಪ್ರೇಮ ಈ ಕೃತಿಯಲ್ಲಿರುವ ಕತೆಗಳ ಮೂಲದ್ರವ್ಯ' ಎಂದರು.

'ಪ್ರೇಮ ಕೇವಲ ಭಾವತೀವ್ರತೆಯಾಗಿರದೇ ಬದುಕಿನ ಸುತ್ತ ಆವರಿಸಿಕೊಂಡಿರುವ ಭಾಗವೇ ಆಗಿದೆ' ಎಂದರು.

ಶೈಲಸುತೆ ರಂಜಿತಾ, ಅನುಪಮಾ ಪತ್ತಾರ್ ಹಾಜರಿದ್ದರು.

ಹಾಸ್ಟೆಲ್ ಕಾರ್ಮಿಕರ ಪ್ರಥಮ ಸಮ್ಮೇಳನದಲ್ಲಿ ನಿರ್ಣಯ

ಹೊರಗುತ್ತಿಗೆ ಕಾರ್ಮಿಕರ ಕಾಯಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮೈಸೂರು: ವಿವಿಧ ಇಲಾಖೆಗಳ ಹಾಸ್ಟೆಲ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಕಾರ್ಮಿಕರ ಸೇವೆ ಕಾಯಂಗೊಳಿಸಬೇಕು. ಅಲ್ಲಿವರೆಗೆ ₹ 35,950 ವೇತನ ನೀಡಬೇಕು ಎಂಬ ಹಕ್ಕೊತ್ತಾಯ ಸೇರಿದಂತೆ ಎಂಟು ನಿರ್ಣಯಗಳನ್ನು ಹಾಸ್ಟೆಲ್ ಹೊರಗುತ್ತಿಗೆ ಕಾರ್ಮಿಕರ ಪ್ರಥಮ ಸಮ್ಮೇಳನದಲ್ಲಿ ಕೈಗೊಳ್ಳಲಾಯಿತು.

ಇಲ್ಲಿ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘವು ಎಐಯುಟಿಯುಸಿ ಸಹಯೋಗದಲ್ಲಿ ಭಾನುವಾರ ಏರ್ಪಡಿಸಿಸಿದ್ದ ಪ್ರತಿನಿಧಿಗಳ ಸಮ್ಮೇಳನ ಮತ್ತು ಸಮಾರೋಪ ಸಮಾರಂಭದಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಕಾಯಂ ನೌಕರರಿಗೆ ಸಿಗುವ ಸೌಲಭ್ಯಗಳನ್ನು ನಮಗೂ ಕೊಡಬೇಕು. ಹೊರಗುತ್ತಿಗೆ ನೇಮಕ ಪದ್ಧತಿ ರದ್ದುಪಡಿಸಿ, ವೇತನಸಹಿತ ಎಲ್ಲ ಸೌಕರ್ಯಗಳನ್ನೂ ನೇರ ಗಿ ಇಲಾಖೆಯಿಂದಲೇ ನೀಡಬೇಕು. ರಜೆ ದಿನ ಕೆಲಸ ಮಾಡಿಕೊಂಡಲ್ಲಿ ದುಪ್ಪಟ್ಟು ವೇತನ ನೀಡಬೇಕು ಎಂದು ಒತ್ತಾಯಿಸಲಾಯಿತು.

ಎಐಯುಟಿಯುಸಿ ರಾಜ್ಯ ಘಟಕದ ಅಧ್ಯಕ್ಷ ಕೆ.ಸೋಮಶೇಖರ್, ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘದ ಅಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ ಹಾಗೂ ಕಾರ್ಯದರ್ಶಿ ಕೆ.ವಿ.ಭಟ್ ಉಪಸ್ಥಿತರಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Accounts & Finance

WANTED IMMEDIATELY Experienced OFFICE ASSISTANT. Computer knowledge with tally must. Staying close to Bilekahalli, Bannerghatta Road. Email : mail@ayyappa-cnc.com Phone: 080- 26585172

BUSINESS

Business to Business

Business

CERTIFICATE OF Origin For Exporters/ CHA's C&F's- Call 8089696173/ 8089696172 The South Indian Chamber of Commerce and Industry™ (SICCI™), ICD Whitefield, Bangalore

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

PERSONAL

Change of Name

CHANGE OF NAME
I, **OMKAR. S. RAIKAR @ OMKAR RAIKAR** residing at 3rd Block, 6th cross, Rifco Shantiniketan Layout, Medahalli, Bengaluru Rural, Karnataka 560049 have declared that both the above names pertain to me and name henceforth I shall be known as **OMKAR. S. RAIKAR** vide affidavit dated 17.12.2022 before notary Ravi, Bengaluru.

CHANGE OF NAME
I, **Vinola Mary Christina Joseph** @ Vinola Gerard Joseph, R/a No. 2-DC, 910, HRBR Layout, Block-1, Kalyan Nagar, Bengaluru - 560 043, declare that both the names pertain to me and henceforth I shall be known as **Vinola Gerard Joseph** vide affidavit dated: 16.12.2022, before Notary Y.R. Chandrasekar, Bangalore.

CHANGE OF NAME
I, **Arjunan Kavitha,** residing at #576, 3rd Floor, 29th 'A' Main, Corporation Colony, Jayanagar 9th Block, Bangalore - 560 041 have changed my name to **Kavitha Manjunatha** vide affidavit dated: 06.12.2022 before Notary Hegde Ganapati Venkataraman, Bangalore. Henceforth I shall be known as **Kavitha Manjunatha** only.

I, RAVI Kumar S/o Anniyappa, R/a Sai Paradise Apartment, 19th Cross, Kaggadasapura, Bangalore-560093 Have Changed My Name to Ravi Kumar Yadav, Vide Affidavit Dated 17-12-2022 Before Notary Sreedharan Nair PN, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD | ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ಸಪ್ನ ಬುಕ್ ಹೌಸ್ ಪ್ರಕಟಿಸಿರುವ ಸುಧಾಮೂರ್ತಿ ಅವರ 'ದಿ ಗೋಪಿ ಡೈರಿ'(ಗೋಪಿಯ ದಿನಚರಿ) ಪುಸ್ತಕ ಭಾನುವಾರ ಬಿಡುಗಡೆಗೊಂಡಿತು. ತಾವು ಸಾಕಿರುವ ಗೋಪಿ ಹೆಸರಿನ ನಾಯಿಯಿಂದ ಬಿಡುಗಡೆ ಮಾಡಿಸಿದ್ದು, ತಮ್ಮ ಮುದ್ದಿನ 'ಗೋಪಿ'ಯೊಂದಿಗೆ ಲೇಖಕಿ ಸಂಭ್ರಮಿಸಿದರು
–ಪ್ರಜಾವಾಣಿ ಚಿತ್ರ/ರಂಜು ಪಿ.

ವ್ಯಕ್ತಿ ಕಟ್ಟಿ ಹಾಕಿ ಹಲ್ಲೆ: ಮೂವರ ಬಂಧನ

ಮೂಲ್ಕಿ: ಇಲ್ಲಿನ ಹಳೆಯಂಗಡಿಯ ಕೊಪ್ಪಳ ನಿವಾಸಿ ದಾವೂದ್ ಹಕೀಂನನ್ನು ಕಂಬಕ್ಕೆ ಕಟ್ಟಿಹಾಕಿ ಹಲ್ಲೆ ನಡೆಸಿದ್ದ ಪ್ರಕರಣ ಸಂಬಂಧ ಹಿಂದೂ ಜಾಗರಣ ವೇದಿಕೆಯ ಮೂವರು ಸದಸ್ಯರನ್ನು ಪೊಲೀಸರು ಬಂಧಿಸಿದ್ದಾರೆ.

ದಿವೇಶ್ ದೇವಾಡಿಗ, ಯೋಗೀಶ್ ದೇವಾಡಿಗ ಹಾಗೂ ರಾಜೇಶ್ ಬಂಧಿತರು. ಇವರನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಯಿತು ಎಂದು ತಿಳಿಸಿದ್ದಾರೆ.

'ಬಾಲಕಿ ಜೊತೆ ಅನುಚಿತವಾಗಿ ವರ್ತಿಸಿದ್ದಾನೆ ಎಂದು ಹಕೀಂ ಎಂಬಾತನನ್ನು ಹಗ್ಗದಿಂದ ಕಂಬಕ್ಕೆ ಕಟ್ಟಿಹಾಕಿ ಗುಂಪು ಹಲ್ಲೆ ನಡೆಸಿದ ಆರೋಪ ಈ ಮೂವರ ಮೇಲಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಹಲ್ಲೆಗೊಳಗಾದ ದಾವೂದ್ ಹಕೀಂ ವಿರುದ್ಧ ಬಾಲಕಿಯೊಬ್ಬಳು ದೂರು ನೀಡಿದ್ದು, ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ (ಪೊಕ್ಸೊ) ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ. ಆತನನ್ನೂ ಪೊಲೀಸರು ಬಂಧಿಸಿದ್ದಾರೆ.

'ಸಂಜೆ ಶಾಲೆ ಬಿಡುವ ಸಮಯದಲ್ಲಿ ರಸ್ತೆ ಬಳಿ ನಿಂತು ಕಿರುಕುಳ ನೀಡುತ್ತಿದ್ದ ಎಂದು ಬಾಲಕಿಯು ದಾವೂದ್ ಹಕೀಂ ವಿರುದ್ಧ ಠಾಣೆಗೆ ದೂರು ನೀಡಿದ್ದಳು. ಅದರ ಆಧಾರದಲ್ಲಿ ಆತನ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದರು.

ಬಂಧನದ ವೇಳೆ ಗದ್ದಲ: ಮೂವರನ್ನು ಪೊಲೀಸರು ಬಂಧಿಸುತ್ತಿದ್ದಂತೆಯೇ ಹಿಂದೂ ಜಾಗರಣ ವೇದಿಕೆ ಸೇರಿ ವಿವಿಧ ಸಂಘಟನೆಯ ಕಾರ್ಯಕರ್ತರು ಮೂಲ್ಕಿ ಠಾಣೆಯ ಮುಂದೆ ಜಮಾಯಿಸಿ ಗದ್ದಲ ನಡೆಸಿದ್ದರು. ಇದರಿಂದ ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು.

ಪತಿ ಸಾವಿನ ನೋವು ಪತ್ನಿ ಆತ್ಮಹತ್ಯೆ

ಬೆಂಗಳೂರು: ಕಾಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ಸೌಂದರ್ಯ (24) ಎಂಬುವರು ಕೊಠಡಿಯಲ್ಲಿ ನೇಣು ಹಾಕಿಕೊಂಡು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ತವರು ಮನೆಯಲ್ಲಿ ವಾಸವಿದ್ದರು. ಕುಟುಂಬದವರ ಹೇಳಿಕೆ ಪಡೆದು ಪ್ರಕರಣ ದಾಖಲಿಸಲಾಗಿದೆ. ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲೆಕ್ಕ ಪರಿಶೋಧಕ ಧನಂಜಯ್ (33) ಎಂಬವರ ಜೊತೆ ಸೌಂದರ್ಯ ಮದುವೆಯಾಗಿದ್ದರು. ದಂಪತಿಗೆ ಒಂದೂವರೆ ವರ್ಷದ ಮಗುವಿದೆ. ಹಣಕಾಸು ವ್ಯವಹಾರದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಧನಂಜಯ್, ತಮ್ಮ ಕಚೇರಿಯಲ್ಲೇ ತಿಂಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಬಗ್ಗೆ ಮಾಗಡಿ ರಸ್ತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.' ಪತಿ ಸಾವಿನಿಂದ ಮಾನಸಿಕವಾಗಿ ನೊಂದಿದ್ದರು ಎಂದು ಕುಟುಂಬದವರು ಹೇಳುತ್ತಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸರ್ಟಿಫಿಕೇಟ್ ಕೋರ್ಸ್ ಸಮಗ್ರ ಪೋಷಕಾಂಶಗಳ ನಿರ್ವಹಣೆ: ಉದ್ಘಾಟನೆ: ಎಸ್.ವಿ.ಸುರೇಶ, ಅಧ್ಯಕ್ಷತೆ: ಕೆ. ನಾರಾಯಣಗೌಡ, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 10

ಬಿ.ಕಾಂ ಮತ್ತು ಬಿಬಿಎ 2ನೇ ಸೆಮಿಸ್ಟರ್‌ನ ವಾರ್ಷಿಕ ಸಾಮಾನ್ಯ ಸಭೆ: ಅತಿಥಿಗಳು: ಎಸ್.ಎಂ. ಜಯಕರ, ಎನ್. ಮಹೇಶ ಬಾಬು, ಟಿ. ದೇವರಾಜು, ಅಧ್ಯಕ್ಷತೆ: ಕೆ. ನಿರ್ಮಲಾ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಎಚ್.ಎನ್. ಸಭಾಂಗಣ, ಜೆ.ಬಿ. ಆವರಣ, ಮಧ್ಯಾಹ್ನ 2

'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಕೆ.ಸಿ. ರಾಮಮೂರ್ತಿ, ಡಿ.ಎ. ಕಲ್ಪಜ, ಅಧ್ಯಕ್ಷತೆ: ರಮೇಶ್ ಎಂ.ಕೆ., ಅತಿಥಿಗಳು: ಎಂ. ರಮೇಶ್, ಆಯೋಜನೆ: ದಿ ನ್ಯೂಸ್ ಪೇಪರ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

'ಪ್ರಕಾಶ ಮೂರ್ತಿ 50 ಹಾಡಿರಿ–ಹರಸಿರಿ' ಕಾರ್ಯಕ್ರಮ: 'ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ' ಪುಸ್ತಕ ಬಿಡುಗಡೆ, ಆಯೋಜನೆ: ಶಾರದಾ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 4

ನಾಟಕ, ಗೀತ ಗಾಯನ ಸಾಧಕರಿಗೆ ರಂಗಗೌರವ: ಉದ್ಘಾಟನೆ: ಡಬ್ಲ್ಯು.ಎಚ್. ಶಾಂತಕುಮಾರ್, ಅಧ್ಯಕ್ಷತೆ: ದೇವರಾಜಪ್ಪ ಬಿ., ಅತಿಥಿಗಳು: ಆರ್. ಚಂದ್ರಶೇಖರ್, 'ಗುರು ಶಿಷ್ಯರು' ನಾಟಕ ಪ್ರದರ್ಶನ, ಆಯೋಜನೆ: ರಂಗ ಕಳಸ ಕಲಾವಿದರು, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.45

ಉದ್ಯಮಿ ಮನೆಯಲ್ಲಿ ಕೃತ್ಯ • ದುಷ್ಕರ್ಮಿಗಳ ಪತ್ತೆಗೆ ವಿಶೇಷ ತಂಡ

ಜೋಡಿ ಕೊಲೆ: ಚಿನ್ನ, ನಗದು ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ 2ನೇ ಹಂತದ ನಿವಾಸಿ ಉದ್ಯಮಿಯೊಬ್ಬರ ಮನೆಯಲ್ಲಿ ಕೆಲಸಗಾರ ಕರಿಯಪ್ಪ (45), ಭದ್ರತಾ ಸಿಬ್ಬಂದಿ ಬಹದ್ದೂರ್ (28) ಅವರನ್ನು ಕೊಲೆ ಮಾಡಿರುವ ದುಷ್ಕರ್ಮಿಗಳು, ಚಿನ್ನಾಭರಣ, ನಗದು ಕದ್ದೊಯ್ದಿದ್ದಾರೆ.

'ಉದ್ಯಮಿ ರಾಜಗೋಪಾಲ್ ರೆಡ್ಡಿ ಅವರ ಮನೆಯಲ್ಲಿ ಶನಿವಾರ ರಾತ್ರಿ ಕೃತ್ಯ ನಡೆದಿದೆ. ದುಷ್ಕರ್ಮಿಗಳು, ಸುಮಾರು ₹ 5 ಲಕ್ಷ ನಗದು, ಅಪಾರ ಪ್ರಮಾಣದ ಚಿನ್ನಾಭರಣ ಕದ್ದೊಯ್ದಿದ್ದಾರೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ.ಬಾಬಾ 'ಪ್ರಜಾವಾಣಿ'ಗೆ ತಿಳಿಸಿದರು.

'ದಾವಣಗೆರೆಯ ಕರಿಯಪ್ಪ, 30 ವರ್ಷಗಳಿಂದ ಉದ್ಯಮಿ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಅಸ್ಸಾಂನ ಬಹದ್ದೂರ್, ಎರಡು ವರ್ಷಗಳ ಹಿಂದೆಯಷ್ಟೇ ಭದ್ರತಾ ಸಿಬ್ಬಂದಿ ಕೆಲಸಕ್ಕೆ ಸೇರಿದ್ದರು' ಎಂದು ಹೇಳಿದರು.

ಬೇರೆಡೆ ಹೋಗಿದ್ದ ಕುಟುಂಬ: 'ಉದ್ಯಮಿ ರಾಜಗೋಪಾಲ್, ಕುಟುಂಬದವರ ಜೊತೆ ಇತ್ತೀಚೆಗೆ ಬೇರೆ ಊರಿಗೆ ಹೋಗಿದ್ದರು. ಮನೆ ನೋಡಿಕೊಳ್ಳಲೆಂದು ಕರಿಯಪ್ಪ ಹಾಗೂ ಬಹದ್ದೂರ್ ಅವರಿಗೆ ಹೇಳಿದ್ದರು. ಕರಿಯಪ್ಪ ಮನೆಯಲ್ಲಿದ್ದರು. ಬಹದ್ದೂರ್, ಹೊರಗೆ ಕಾವಲು ಕಾಯುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಮನೆ ಬಗ್ಗೆ ಮಾಹಿತಿ ಕಲೆ ಹಾಕಿದ್ದ ದುಷ್ಕರ್ಮಿಗಳು ಸಂಚು ರೂಪಿಸಿ ಕೃತ್ಯ ಎಸಗಿದ್ದಾರೆ. ಆರೋಪಿಗಳ ಬಗ್ಗೆ ಕೆಲ ಸುಳಿವು ಸಿಕ್ಕಿವೆ. ಅದನ್ನು ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಸಂಪ್‌ನಲ್ಲಿ ಮೃತದೇಹ: 'ಉದ್ಯಮಿ ಕುಟುಂಬ ಇಲ್ಲದ್ದನ್ನು ಗಮನಿಸಿದ್ದ ದುಷ್ಕರ್ಮಿಗಳು, ಶನಿವಾರ ರಾತ್ರಿ ಮನೆ ಬಳಿ ಬಂದಿದ್ದರು. ಹೊರಗಿದ್ದ ಭದ್ರತಾ ಸಿಬ್ಬಂದಿ ಬಹದ್ದೂರ್ ಮೇಲೆ ದಾಳಿ ಮಾಡಿ, ಬಾಯಿಗೆ ಬಟ್ಟೆ ತುರುಕಿ ಹಾಗೂ ಹಗ್ಗದಿಂದ ಕೈ–ಕಾಲು ಕಟ್ಟಿದ್ದರು. ನಂತರ, ಬಹದ್ದೂರ್ ಅವರನ್ನು ನೀರಿನ ಸಂಪ್‌ಗೆ ಎಸೆದು ಮುಚ್ಚಳ ಮುಚ್ಚಿರುವುದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೀರಿನ ಸಂಪ್‌ನಲ್ಲಿಯೇ ಬಹದ್ದೂರ್ ಮೃತಪಟ್ಟಿದ್ದು, ಮೃತ ದೇಹವನ್ನು ಹೊರಗೆ ತೆಗೆದು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎನ್ನಲಾಗಿದೆ.

ಮನೆಯೊಳಗೆ ಕೊಲೆ: 'ಬಹದ್ದೂರ್ ಅವರನ್ನು ಸಂಪ್‌ಗೆ ಎಸೆದ ನಂತರ ಆರೋಪಿಗಳು, ಮನೆಗೆ ನುಗ್ಗಿದ್ದರು. ಕೊಠಡಿಯಲ್ಲಿ ಮಲಗಿದ್ದ ಕರಿಯಪ್ಪ ಅವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಂದಿದ್ದಾರೆ. ನಂತರ, ಮನೆಯಲ್ಲಿ ಹುಡುಕಾಡಿ ಆಭರಣ, ನಗದು ದೋಚಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭಾನುವಾರ ಬೆಳಿಗ್ಗೆ ಮನೆ ಸ್ವಚ್ಛತೆ ಬಂದಿದ್ದ ಕೆಲಸಗಾರರು, ಕರಿಯಪ್ಪ ಶವ ಕಂಡು ಠಾಣೆಗೆ ಮಾಹಿತಿ ನೀಡಿದ್ದರು. ಶ್ವಾನದಳ, ಬೆರಳಚ್ಚು ತಜ್ಞರ ಸಮೇತ ಸ್ಥಳದಲ್ಲಿ ಪರಿಶೀಲಿಸಲಾಗಿದೆ. ಉದ್ಯಮಿಯ ದೂರು ನೀಡಿದ್ದಾರೆ. ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳ ತಂಡವೇ ಕೃತ್ಯ ಎಸಗಿರುವ ಶಂಕೆ ಇದೆ' ಎಂಬುದಾಗಿಯೂ ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

'ಬಹದ್ದೂರ್ ಮೇಲೆ ವ್ಯಕ್ತವಾಗಿದ್ದ ಶಂಕೆ'

'ಆರಂಭದಲ್ಲಿ ಕರಿಯಪ್ಪ ಮೃತದೇಹ ಮಾತ್ರ ಮನೆಯೊಳಗೆ ಪತ್ತೆಯಾಗಿತ್ತು. ಭದ್ರತಾ ಸಿಬ್ಬಂದಿ ಬಹದ್ದೂರ್ ಎಲ್ಲಿದ್ದಾರೆಂಬ ಮಾಹಿತಿ ಇರಲಿಲ್ಲ. ಹೀಗಾಗಿ, ಅವರೇ ಕೊಲೆ ಮಾಡಿರಬಹುದೆಂಬ ಅನುಮಾನ ದಟ್ಟವಾಗಿತ್ತು' ಎಂದು ಪೊಲೀಸರು ಹೇಳಿದರು.

'ಸಂಜೆಯವರೆಗೂ ಮನೆಯಲ್ಲೆಲ್ಲ ಹುಡುಕಾಟ ನಡೆಸಿದರೂ ಬಹದ್ದೂರ್ ಸುಳಿವು ಸಿಕ್ಕಿರಲಿಲ್ಲ. ಸಂಜೆ ನೀರಿನ ಸಂಪ್ ಪರಿಶೀಲಿಸಿದಾಗ ಬಹದ್ದೂರ್ ಮೃತದೇಹ ಕಂಡಿತು' ಎಂದರು.

ಲಾಂಗ್‌ನಿಂದ ಹಲ್ಲೆ ಯತ್ನ: ಬಂಧನ

ಬೆಂಗಳೂರು: ಮೀನು ಮಾರಾಟ ಮಳಿಗೆಗೆ ನುಗ್ಗಿ ಲಾಂಗ್‌ನಿಂದ ಮಾಲೀಕರ ಮೇಲೆ ಹಲ್ಲೆಗೆ ಯತ್ನಿಸಿದ್ದ ಆರೋಪಿ ಸುದೇಶ್ ಎಂಬುವರನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಳಿಗೆಗೆ ನುಗ್ಗಿ ಗಲಾಟೆ ಮಾಡಿದ್ದ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿತ್ತು. ಮಳಿಗೆ ಮಾಲೀಕರ ಹೇಳಿಕೆ ಪಡೆದು ಪ್ರಕರಣ ದಾಖಲಿಸಿ ಆರೋಪಿ ಬಂಧಿಸಲಾಗಿದೆ' ಎಂದರು.

ಮಹಿಳೆ ಗೌರವಕ್ಕೆ ಧಕ್ಕೆ: ಬಿಜೆಪಿ ಮುಖಂಡ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಬಗ್ಗೆ ಅವಹೇಳನಕಾರಿ ಪೋಸ್ಟ್ ಪ್ರಕಟಿಸಿದ್ದ ಆರೋಪದಡಿ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ವೆಂಕಟೇಶ್ ಮೌರ್ಯ ಅವರನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪೋಸ್ಟ್ ಪ್ರಕಟಿಸಿದ್ದಲ್ಲದೇ, ಪ್ರಶ್ನಿಸಿದ್ದಕ್ಕೆ ವೆಂಕಟೇಶ್ ಮೌರ್ಯ ಹಾಗೂ ಇತರರು ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ್ದಾರೆ' ಎಂದು ಮಹಿಳೆಯರಿಬ್ಬರು ದೂರು ನೀಡಿದ್ದರು. ಸದ್ಯ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಟ್ಟಿಗೆ, ಕಲ್ಲಿನಿಂದ ಹೊಡೆದು ಕೊಲೆಗೆ ಯತ್ನಿಸಲಾಗಿದೆ' ಎಂಬುದಾಗಿ ವೆಂಕಟೇಶ್ ಸಹ ದೂರು ನೀಡಿದ್ದಾರೆ. ಈ ಬಗ್ಗೆ ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

ಅರಮನೆ ಮೈದಾನದಲ್ಲಿ ಗಲಾಟೆ: 'ಸ್ವಾಮೀಜಿಯೊಬ್ಬರಿಗೆ ಕೇಕ್ ತಿನ್ನಿಸಿದ್ದ ಮಹಿಳೆಯೊಬ್ಬರ ಫೋಟೊ ಸಮೇತ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸಲಾಗಿತ್ತು. ಅದನ್ನು ಹಲವರು ಹಂಚಿಕೊಂಡಿದ್ದರು. ಇದಕ್ಕೆ ವೆಂಕಟೇಶ್ ಕಾರಣ ಎಂದು ಮಹಿಳೆಯರು ಭಾವಿಸಿದ್ದರು' ಎಂದು ಹೇಳಿವೆ.

'ಶನಿವಾರ ರಾತ್ರಿ ಅರಮನೆ ಮೈದಾನದಲ್ಲಿ ಈ ವಿಷಯ ಎರಡು ಗುಂಪಿನ ನಡುವೆ ಜಗಳಕ್ಕೆ ಕಾರಣವಾಗಿತ್ತು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಗಲಾಟೆ ತಿಳಿಗೊಳಿಸಿ ಠಾಣೆಗೆ ಕರೆತಂದಿದ್ದರು' ಎಂದು ತಿಳಿಸಿವೆ.

200 ವರ್ಷಗಳ ಬುದ್ಧ ವಿಗ್ರಹ ಮಾರಾಟ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: '200 ವರ್ಷ ಹಳೆಯದ್ದು' ಎನ್ನಲಾದ ಬುದ್ಧ ವಿಗ್ರಹ ಮಾರಾಟಕ್ಕೆ ಯತ್ನಿಸುತ್ತಿದ್ದ ಐವರು ಆರೋಪಿಗಳನ್ನು ಸಂಪಂಗಿರಾಮನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತೆಲಂಗಾಣದ ಪಂಚಮರ್ತಿ ರಘು ರಾಮ ಚೌಧರಿ ಅಲಿಯಾಸ್ ಪಿ.ರಘು, ಉದಯ್‌ಕುಮಾರ್, ಫ್ರೆಡ್ಡಿ ಡಿಸೋಜ್, ಶರಣ್ ನಾಯರ್ ಹಾಗೂ ಎಂ.ಕೆ. ಪ್ರಸನ್ನ ಬಂಧಿತರು. 'ಎಲ್ಲರೂ ರಿಯಲ್ ಎಸ್ಟೇಟ್ ಮಧ್ಯರ್ತಿಗಳು. ಅಕ್ರಮ ಹಣ ಸಂಪಾದನೆಗೆ ವಿಗ್ರಹ ಮಾರಾಟಕ್ಕೆ ಯೋಚಿಸಿದ್ದರು. ಇವರಿಂದ 38 ಸೆಂ.ಮೀ ಉದ್ದದ ಬುದ್ಧ ವಿಗ್ರಹ, ಸೂಟ್‌ಕೇಸ್ ಹಾಗೂ 5 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಕಳ್ಳತನ ಮಾಡಿದ್ದ ಪುರಾತನ ಕಲ್ಲಿನ ವಿಗ್ರಹವನ್ನು ಹೈದರಾಬಾದ್ ನಿವಾಸಿ ಶ್ರೀಕಾಂತ್ ಆರೋಪಿ ಪಂಚಮರ್ತಿ ರಘುಗೆ ₹30 ಲಕ್ಷಕ್ಕೆ ಮಾರಿದ್ದ. ವಿದೇಶದಲ್ಲಿ ಮಾರಿದರೆ ಕೋಟಿಗೂ ಹೆಚ್ಚು ಹಣ ಸಿಗಲಿದೆ ಹೇಳಿದ್ದ. ಹೀಗಾಗಿ, ಆರೋಪಿಯು ಸಹಚರರ ಜೊತೆ ಸೇರಿ ವಿಗ್ರಹವನ್ನು ವಿದೇಶಕ್ಕೆ ಮಾರಲೆಂದು ಬೆಂಗಳೂರಿಗೆ ಬಂದಿದ್ದ.'

ಬಂಧಿತ ಆರೋಪಿಗಳಿಂದ ಜಪ್ತಿ ಮಾಡಿರುವ ಬುದ್ಧ ವಿಗ್ರಹ

'ಮಧ್ಯವರ್ತಿಯೊಬ್ಬರ ಮೂಲಕ ವಿದೇಶಕ್ಕೆ ವಿಗ್ರಹ ಕಳುಹಿಸುವುದು ಆರೋಪಿಗಳ ಉದ್ದೇಶವಾಗಿತ್ತು. ನಗರದ ಹೋಟೆಲೊಂದರಲ್ಲಿ ಇರುವ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು. ಪ್ರಮುಖ ಆರೋಪಿ ಶ್ರೀಕಾಂತ್ ಬಂಧನಕ್ಕೆ ಶೋಧ ನಡೆದಿದೆ' ಎಂದು ಪೊಲೀಸರು ತಿಳಿಸಿದರು.

ಹುಂಜದ ಕೂಗಿನಿಂದ ಸಮಸ್ಯೆ: ದೂರು

ಬೆಂಗಳೂರು: 'ಪಕ್ಕದ ಮನೆಯವರು ಸಾಕಿರುವ ಹುಂಜಗಳು ಕೂಗುವುದರಿಂದ ನಿತ್ಯವೂ ತೊಂದರೆ ಆಗುತ್ತಿದೆ' ಎಂದು ಉತ್ತರ ಭಾರತದ ವ್ಯಕ್ತಿಯೊಬ್ಬರು ಇ–ಮೇಲ್ ಮೂಲಕ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಗೆ ದೂರು ನೀಡಿದ್ದಾರೆ.

'ಜೆ.ಪಿ.ನಗರದ 8ನೇ ಹಂತದ ಸ್ಥಳೀಯರೊಬ್ಬರು ಹಲವು ವರ್ಷಗಳಿಂದ ಕೋಳಿಸಾಕಣೆ ಮಾಡುತ್ತಿದ್ದು, ಇತ್ತೀಚೆಗೆ ಅಲ್ಲಿಗೆ ಬಂದಿರುವ ವ್ಯಕ್ತಿ, ಕೋಳಿ ಸಾಕದಂತೆ ತಾಕೀತು ಮಾಡುತ್ತಿದ್ದಾರೆ. ಈ ಬಗ್ಗೆ ಇಬ್ಬರ ನಡುವೆ ಗಲಾಟೆ ಆಗಿದೆ. ಇಬ್ಬರನ್ನು ಠಾಣೆಗೆ ಕರೆಸಿ ಗಲಾಟೆ ಮಾಡದಂತೆ ಬುದ್ದಿ ಹೇಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಇಬ್ಬರ ಬಂಧನ, 61 ದ್ವಿಚಕ್ರ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಆ್ಯಪ್ ಆಧರಿತ ಬಾಡಿಗೆ ವಾಹನ ಸೇವೆ ನೀಡುವ ವೋಗೊ ಕಂಪನಿಯ ದ್ವಿಚಕ್ರ ವಾಹನಗಳ ಕಳ್ಳತನ ಆರೋಪದಡಿ ಇಬ್ಬರು ಆರೋಪಿಗಳನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಾದನಾಯಕನಹಳ್ಳಿಯ ವಿನಯ್ (22) ಹಾಗೂ ತುಮಕೂರಿನ ನಂದನ್ (23) ಬಂಧಿತರು. ಇವರಿಬ್ಬರಿಂದ ₹ 55 ಲಕ್ಷ ಮೌಲ್ಯದ 61 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ವಿನಯ್, ವೋಗೊ ಕಂಪನಿಯಲ್ಲಿ ಮೆಕ್ಯಾನಿಕ್ ಆಗಿದ್ದ. ಆ್ಯಪ್ ಮೂಲಕ ದ್ವಿಚಕ್ರ ವಾಹನ ಬಾಡಿಗೆ ಪಡೆಯುತ್ತಿದ್ದ ಗ್ರಾಹಕರು, ನಿಗದಿತ ಸ್ಥಳಗಳಲ್ಲಿ ನಿಲ್ಲಿಸಿ ಹೋಗುತ್ತಿದ್ದರು. ಅಂಥ ವಾಹನಗಳ ಜಿಪಿಎಸ್ ಉಪಕರಣವನ್ನು ವಿನಯ್ ನಿಷ್ಕ್ರಿಯಗೊಳಿಸುತ್ತಿದ್ದ. ನಂತರ, ಪರಿಚಯಸ್ಥ ನಂದನ್ ಜೊತೆ ಸೇರಿ ದ್ವಿಚಕ್ರ ವಾಹನ ಕದ್ದೊಯ್ದು ಬೇರೊಂದು ಸ್ಥಳದಲ್ಲಿ ನಿಲ್ಲಿಸುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

ಕಂಪನಿ ನಷ್ಟವೆಂದು ಮಾರಾಟ: 'ಕದ್ದ ವಾಹನಗಳನ್ನು ಒಂದೆಡೆ ಇರಿಸುತ್ತಿದ್ದ ಆರೋಪಿಗಳು, 'ವೋಗೊ ಕಂಪನಿ ನಷ್ಟದಲ್ಲಿದೆ. ಬಂದ್ ಮಾಡಲಾಗುತ್ತಿದೆ. ಹೀಗಾಗಿ, ವಾಹನ ಮಾರಲಾಗುತ್ತಿದೆ' ಎಂಬುದಾಗಿ ಹೇಳಿ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಇತ್ತೀಚಿಗೆ ಕಂಪನಿಯ ವಾಹನಗಳು ಹೆಚ್ಚು ಕಳ್ಳತನ ಆಗುತ್ತಿರುವುದು ಆಡಳಿತ ಮಂಡಳಿ ಗಮನಕ್ಕೆ ಬಂದಿತ್ತು. ಕಂಪನಿ ಪ್ರತಿನಿಧಿ ಕಳ್ಳತನದ ಬಗ್ಗೆ ದೂರು ನೀಡಿದ್ದರು' ಎಂದು ತಿಳಿಸಿದರು.

ICFAI® GROUP

WALK-IN INTERVIEW

ICFAI Group is looking for result oriented Marketing Professionals for various positions at Bangalore.

CLUSTER HEAD / BRANCH HEAD

Candidates should be minimum Graduates with at least 3 years of experience in Sales / Marketing and should be able to manage a team. He/She will be responsible for motivating the team to achieve the desired results.

MARKETING OFFICERS / COUNSELLORS

Candidates should be graduates with minimum 1 year of experience in Sales / Marketing. Female candidates are preferred for the position of Counsellors.

Excellent communication skills in English and Local language are a must for all positions.

Remuneration and performance based incentives will be commensurate with qualifications and experience.

Candidates from Education /Finance background will be given preference.

WALK-IN INTERVIEW AT BANGALORE

DATES	VENUE
Dec. 19 & 20, 2022 (10 am - 5 pm)	IGID, # 924, Ground Floor, 28th Main, 9th Block, Jayanagar, Bangalore - 560 069. Ph:8498053801

Those who cannot attend the walk-in-Interview can send their resume to: hriu@icfaiuniversity.in

• 11 Universities • 9 Business Schools • 7 Tech Schools • 8 Law Schools

ಕಲ್ಮಶ, ಒತ್ತುವರಿ ತೆರವು ಮಾಹಿತಿ ಇಲ್ಲದ 20 ಡಿಪಿಆರ್ ವಾಪಸ್ ● ಕೆರೆ ಅಭಿವೃದ್ಧಿ ಪ್ರಾಧಿಕಾರದ ಕ್ರಮ

ಹೊರವಲಯದ ಕೆರೆಗಳಿಗೆ 'ಗ್ರಾನೈಟ್ ಕೆಸರು'

● ಆರ್. ಮಂಜುನಾಥ್

ಬೆಂಗಳೂರು: ನಗರದ ಹೊರವಲಯದ ಜಿಗಣಿ ಗ್ರಾನೈಟ್, ಮಾರ್ಬಲ್‌ಗಳಿಗೆ ಹೆಸರುವಾಸಿ. ಇಲ್ಲಿ ಈ ವಹಿವಾಟಿನಿಂದ ಸೃಷ್ಟಿಯಾಗುತ್ತಿರುವ ಮಾಲಿನ್ಯ ಕೆರೆಗಳ ಪರಿಸರಕ್ಕೆ ಹಾನಿ ಉಂಟುಮಾಡುತ್ತಿದೆ. ಗ್ರಾನೈಟ್ ಕತ್ತರಿಸುವ ಪ್ರಕ್ರಿಯೆಯಿಂದ ಹೊರಬರುವ ಬಿಳಿ ಕೆಸರು, ಕೆರೆಗಳಲ್ಲಿ 'ಗಟ್ಟಿ ಮಾಲಿನ್ಯ'ಕ್ಕೆ ಕಾರಣವಾಗಿದೆ.

ಆನೇಕಲ್‌ನ ಜಿಗಣಿ, ಹಾರೋಗದ್ದೆ ಸೇರಿ ಹಲವು ಕೆರೆಗಳಿಗೆ 'ಗ್ರಾನೈಟ್ ಕೆಸರು' ಸೇರಿದಂತೆ ಹಲವು ರೀತಿಯ ಕಲ್ಮಶ ಹರಿಯುತ್ತಿದೆ. ಒತ್ತುವರಿಯೂ ಆಗಿದೆ. ಇದನ್ನು ತಡೆಯಬೇಕು ಎಂದು ಸಣ್ಣ ನೀರಾವರಿ ಇಲಾಖೆ, ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿಗಳಿಗೆ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ಕೆಟಿಸಿಡಿಎ) ಸೂಚಿಸಿದೆ.

'ಗ್ರಾನೈಟ್ ಕೆಸರು ಹರಿಯುವುದನ್ನು ತಡೆಯುವ ಬಗ್ಗೆ ವಿಸ್ತೃತ ಯೋಜನಾ ವರದಿಯಲ್ಲಿ (ಡಿಪಿಆರ್) ವಿವರ ಇಲ್ಲ. ಹೀಗಾಗಿ ಕೆರೆ ಅಭಿವೃದ್ಧಿಗೆ ಸಲ್ಲಿಸಿರುವ ಡಿಪಿಆರ್‌ಗಳಿಗೆ ಅನುಮತಿ ನೀಡಲು ಸಾಧ್ಯವಿಲ್ಲ. ಮಾಲಿನ್ಯ ತಡೆ ಹಾಗೂ ಒತ್ತುವರಿ ತೆರವು ನಂತರವಷ್ಟೇ ಅಭಿವೃದ್ಧಿ ಕೈಗೊಳ್ಳಬೇಕು ಎಂದು ಡಿಪಿಆರ್‌ಗಳನ್ನು ವಾಪಸು ಕಳುಹಿಸಿದೆ.



ಕಲ್ಮಶ ಹಾಗೂ 'ಗ್ರಾನೈಟ್ ಕೆಸರು' ತುಂಬಿಕೊಂಡಿರುವ ಜಿಗಣಿ ಕೆರೆ

ಬಿಬಿಎಂಪಿ, ನಗರ ಜಿಲ್ಲಾ ಪಂಚಾಯಿತಿ, ಕೆಲವು ಗ್ರಾಮ ಪಂಚಾಯಿತಿಗಳು ಕೆರೆಗಳ ಅಭಿವೃದ್ಧಿಗೆ ಡಿಪಿಆರ್‌ಗಳನ್ನು ಕೆಟಿಸಿಡಿಎಗೆ ಸಲ್ಲಿಸಿವೆ. ಇದರಲ್ಲಿ ಒತ್ತುವರಿ ಆಗಿದೆಯೇ? ಇಲ್ಲವೇ? ಎಂದು ಸ್ಪಷ್ಟೀಕರಿಸುವ ನಕ್ಷೆಯನ್ನು ನೀಡಿಲ್ಲ. ಕಲ್ಮಶದ ವಿವರಗಳಿಲ್ಲ. ಮಾಲಿನ್ಯದ ಪ್ರಮಾಣ ದೃಢೀಕರಿಸುವ ಪ್ರಯೋಗಾಲಯ ವರದಿಯನ್ನು ಕೆಟಿಸಿಡಿಎ ಕೇಳಿದೆ. ಇದನ್ನು ಸಲ್ಲಿಸಲು ಸ್ಥಳೀಯ ಸಂಸ್ಥೆಗಳು ವಿಫಲವಾಗಿವೆ.

ಬೃಹತ್ ಕೆರೆಗಳಾದ ಜಿಗಣಿ (53 ಎಕರೆ) ಹಾಗೂ ಹಾರಗದ್ದೆ (75 ಎಕರೆ) ಕೆರೆಗಳ ಅಭಿವೃದ್ಧಿಗೆ ಸಣ್ಣ ನೀರಾವರಿ ಇಲಾಖೆ ಸಲ್ಲಿಸಿದ್ದ ಡಿಪಿಆರ್ ಕೂಡ ವಾಪಸ್ ಹೋಗಿದೆ. 'ಗ್ರಾನೈಟ್ ಕೆಸರು' ನಿರ್ವಹಣೆ, ಹಾರಗದ್ದೆ ಕೆರೆಯಲ್ಲಿ 2 ಎಕರೆ 20 ಗುಂಟೆ ಒತ್ತುವರಿ ತೆರವಿನ ಕ್ರಮದ ವಿವರ ಅದರಲ್ಲಿ ಇರಲಿಲ್ಲ. ಬೆಂಗಳೂರು ನಗರ ಜಿಲ್ಲೆಯಲ್ಲಿ 20 ಕೆರೆಗಳಿಗೆ ಡಿಪಿಆರ್‌ಗಳು ಕೆಟಿಸಿಡಿಎಗೆ ಅನುಮೋದನೆಗೆ ಇತ್ತೀಚೆಗೆ ಬಂದಿದ್ದವು. ಅವೆಲ್ಲವು ವಾಪಸ್ ಆಗಿವೆ.

'ಕೆರೆಗಳ ಅಭಿವೃದ್ಧಿ ಸಮಗ್ರವಾಗಿರಬೇಕು. ಡಿಪಿಆರ್‌ನಲ್ಲಿ ಎಲ್ಲ ವಿವರಗಳು ಇರಬೇಕು ಎಂಬುದು ಪ್ರಾಧಿಕಾರದ ನಿಯಮ. ಹೀಗಾಗಿ, ಒತ್ತುವರಿ, ಕಲ್ಮಶ ಸೇರ್ಪಡೆ ಮತ್ತಿತರ ವಿವರಗಳನ್ನು ಒದಗಿಸದ್ದರಿಂದ ವಾಪಸು ಕಳುಹಿಸಲಾಗಿದೆ. ಸಮಗ್ರವಾಗಿದ್ದರಷ್ಟೇ ಒಪ್ಪಿಗೆ ನೀಡಲಾಗುತ್ತದೆ' ಎಂದು ಕೆಟಿಸಿಡಿಎ ನಿರ್ದೇಶಕ ಶಿವಸ್ವಾಮಿ ಹೇಳಿದರು.

ಒತ್ತುವರಿ, ಕಲ್ಮಶ ತೆರವಾಗಲೇಬೇಕು...

'ಬಿಬಿಎಂಪಿ ಸೇರಿದಂತೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಅಭಿವೃದ್ಧಿ ಆಗಿರುವ, ಆಗುತ್ತಿರುವ ಕೆರೆಗಳಲ್ಲಿ ಒತ್ತುವರಿ ಇನ್ನೂ ಇದೆ. ಒಳಚರಂಡಿ ಹಾಗೂ ಇತರೆ ಕಲ್ಮಶ ಹರಿಯುವುದನ್ನು ತಡೆಯಲು ಈಗ ಅಭಿವೃದ್ಧಿ ಕಾರ್ಯಕೈಗೊಂಡಿರುವ ಸಂಸ್ಥೆಗಳು ವಿಫಲವಾಗಿವೆ. ಪಂಚಾಯಿತಿ ಮಟ್ಟದಲ್ಲಿ ಹಲವು ಕೆರೆಗಳು ಡಿಪಿಆರ್ ಇಲ್ಲದೇ ಅಭಿವೃದ್ಧಿಯಾಗಿವೆ. ಯಾವುದೇ ಕೆರೆ ಅಭಿವೃದ್ಧಿ ಕಾಮಗಾರಿಗೆ ಮುನ್ನ ಅದರ ವ್ಯಾಪ್ತಿ ರಕ್ಷಣೆಯಾಗಬೇಕು. ಅದರ ವಿವರಗಳು ಇರಬೇಕು. ಕಲ್ಮಶ, ಒಳಚರಂಡಿ ನೀರು ಹರಿಯದಂತೆ ತಡೆಯಲು ಕೈಗೊಳ್ಳುವ ಕಾರ್ಯಗಳೇನು ಎಂದು ಡಿಪಿಆರ್‌ನಲ್ಲೇ ವಿವರಿಸಬೇಕು. ಅದರಂತೇ ಅಭಿವೃದ್ಧಿ ಕಾರ್ಯ ನಡೆಯಬೇಕು' ಎಂದು ಫ್ರೆಂಡ್ಸ್ ಆಫ್ ಲೇಕ್‌ನ ರಾಮ್‌ಪ್ರಸಾದ್ ಅವರು ಒತ್ತಾಯಿಸಿದರು.

ಅನುಮೋದನೆಗೆ ಬಂದಿದ್ದ ಕೆರೆಗಳ ಡಿಪಿಆರ್

ಕೆರೆ	ಸರ್ವೆ ನಂ	ವಿಸ್ತೀರ್ಣ	ಒತ್ತುವರಿ
ಗುಡ್ಡಹಟ್ಟಿ	82	16 ಎ	1ಎ 6ಗು
ಇಗ್ಗಲೂರು	63	39ಎ 8ಗು	2ಎ 18ಗು
ನೊಸೆನೂರು	81	31ಎ 18ಗು	36 ಗು
ವಳಗೆರೆ ಕಲ್ಲಹಳ್ಳಿ	101	23ಎ 37ಗು	4ಎ 5ಗು
ಬೆಂಡಿಗಾನಹಳ್ಳಿ	35	29ಎ 9ಗು	2ಎ 15ಗು
ಸೋಂಪುರ	82	39ಎ 9ಗು	1ಎ 2ಗು
ಗುಡ್ಡನಹಳ್ಳಿ	104	1ಎ 17ಗು	ಇಲ್ಲ
ರಾಮಕೃಷ್ಣಪುರ ಕೆರೆ	30	11ಎ 9ಗು	2ಎ 11ಗು
ನೆರಳೂರು	142	71ಎ 4ಗು	12ಎ 37ಗು

ಸುದ್ದಿ 2 ನಿಮಿಷ

ಆನ್‌ಲೈನ್ ಗೇಮ್ ನಿರ್ಬಂಧ ಸದ್ಯದಲ್ಲೇ ತೀರ್ಮಾನ: ಸಚಿವ

ಬೆಂಗಳೂರು: 'ಆನ್‌ಲೈನ್ ಗೇಮ್ ನಿರ್ಬಂಧಕ್ಕೆ ಸಂಬಂಧಿಸಿ ಚರ್ಚೆಗಳು ನಡೆಯುತ್ತಿವೆ. ಕಾನೂನು ರೂಪಿಸುವ ಕುರಿತು ಶೀಘ್ರವೇ ತೀರ್ಮಾನಿಸಲಾಗುವುದು' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಭಾನುವಾರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು, ಬಹುತೇಕ ರಾಜ್ಯಗಳು ಆನ್‌ಲೈನ್ ಗೇಮ್ ನಿರ್ಬಂಧಿಸಲು ಉತ್ಸಾಹ ತೋರಿವೆ. ಎಲ್ಲ ರಾಜ್ಯಗಳ ಮಾಹಿತಿ ಕ್ರೋಢೀಕರಿಸಿ ನಿರ್ಧರಿಸುತ್ತೇವೆ.

'ಡಿಜಿಟಲ್ ಇಂಡಿಯಾ ಕಾಯ್ದೆ'ಯನ್ನು ಶೀಘ್ರವೇ ಜಾರಿಗೆ ತರಲಾಗುವುದು ಎಂದರು.

ದೇಶದ ಎಲ್ಲ ಪ್ರಮುಖ ನಗರಗಳಲ್ಲಿ '5ಜಿ' ಇಂಟರ್‌ನೆಟ್ ಸೇವೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದಿನ ವರ್ಷದ ದೀಪಾವಳಿಗೆ ಗ್ರಾಹಕರಿಗೆ ಈ ಸೇವೆ ಲಭ್ಯವಾಗಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'2023ರ ಅಂತ್ಯಕ್ಕೆ ದೇಶದ ಮೊದಲ ಹೈಡ್ರೋಜನ್ ರೈಲು ಸಂಚರಿಸಲಿದೆ. ಮುಂಬೈ-ಅಹಮದಾಬಾದ್ ನಡುವೆ ಮೊದಲ ಬುಲೆಟ್ ರೈಲು ಸಂಚಾರ ಮಾಡಲಿದೆ' ಎಂದು ರೈಲ್ವೆ ಸಚಿವರೂ ಆದ ಅವರು ಹೇಳಿದರು.

116 ಕಿ.ಮೀ ವರೆಗೆ ಬುಲೆಟ್ ರೈಲು ಸಂಚಾರಕ್ಕೆ ಹಳಿ ನಿರ್ಮಿಸಲಾಗಿದೆ. ಅದರ ವೇಗವು ಪ್ರತಿ ಗಂಟೆಗೆ 320 ಕಿ.ಮೀ. ಇರಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹೋರಾಟ ನಡೆಸಲಾಗದ ವಿಚಿತ್ರ ಸ್ಥಿತಿಯಲ್ಲಿ ದೇಶ: ಬಿಳಿಮಲೆ

ಬೆಂಗಳೂರು: 'ಕೋಮುವಾದ ಹಾಗೂ ಬಂಡವಾಳಶಾಹಿಗಳ ವಿರುದ್ಧ ಹೋರಾಟ ನಡೆಸಲಾಗದ ವಿಚಿತ್ರ ಪರಿಸ್ಥಿತಿಯಲ್ಲಿ ಭಾರತವಿದೆ' ಎಂದು ನಿವೃತ್ತ ಪ್ರಾಧ್ಯಾಪಕ ಡಾ.ಪುರುಷೋತ್ತಮ ಬಿಳಿಮಲೆ ಹೇಳಿದರು.

ಕನ್ನಡ ಜನಶಕ್ತಿ ಕೇಂದ್ರ ಭಾನುವಾರ ಹಮ್ಮಿಕೊಂಡಿದ್ದ 'ಕುವೆಂಪು ದರ್ಶನ ಮತ್ತು ಪ್ರಸ್ತುತತೆ' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'90ರ ದಶಕದಲ್ಲಿ ಎಲ್.ಕೆ.ಅಡ್ವಾಣಿ ಅವರು ನಡೆಸಿದ್ದ ಯಾತ್ರೆ, ಅಯೋಧ್ಯೆಯಲ್ಲಿ ನಡೆದ ಘಟನೆಗಳು ಭಾರತದ ಅಂತಃಸತ್ವವನ್ನು ಗಾಯಗೊಳಿಸಿ ವಿಭಜಿಸಿತು. ಆ ಗಾಯ ಮಾಯಲು ಶತಮಾನಗಳೇ ಬೇಕು' ಎಂದರು.

'ಜವಾಹರ್‌ಲಾಲ್ ನೆಹರೂ ಅವರು ಕಟ್ಟಾ ಸಮಾಜವಾದಿ ಆಗಿದ್ದರು. 1990ರ ನಂತರ ಬೆಳವಣಿಗೆಗಳು ಬೇರೆ ರೀತಿ ನಡೆದವು. ಹೊಸ ತಲೆಮಾರಿನವರು ನೆಹರೂರನ್ನು ಅಪನಂಬಿಕೆಯಿಂದ ನೋಡಿದರು' ಎಂದು ವಿಷಾದಿಸಿದರು.

ಲೇಖಕಿ ಕಮಲಾ ಹಂಪನಾ ಮಾತನಾಡಿ, 'ನಾನು ಕುವೆಂಪು ಅವರ ನೇರ ಶಿಷ್ಯೆ. ಅವರು ಬರವಣಿಗೆಯಿಂದ ಹತ್ತಿರ ಆಗುತ್ತಿದ್ದರು. ಅವರ ಸಾಹಿತ್ಯದಲ್ಲಿ ಅಂತಃಸತ್ವವಿದೆ. ಬದುಕಿನ ಪ್ರೀತಿಯಿದೆ' ಎಂದು ವಿಶ್ಲೇಷಿಸಿದರು.

ದಲಿತ ಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬ ಸಂಭ್ರಮ

ಜಾತಿ ವ್ಯವಸ್ಥೆಯ ಕ್ರೌರ್ಯ ಹೆಚ್ಚುತ್ತಿದೆ. ಗುಂಪುಗಾರಿಕೆಗೆ ಸರ್ಕಾರ, ಸಾಮಾಜಿಕ ವ್ಯವಸ್ಥೆಯಲ್ಲೂ ಪರೋಕ್ಷ ಪ್ರೋತ್ಸಾಹವಿದೆ– ಮೂಡ್ನಾಕೂಡು ಚಿನ್ನಸ್ವಾಮಿ

'ಅಂಬೇಡ್ಕರ್ ಮನೆಮನೆಗೆ ತಲುಪಲಿ'

ಬೆಂಗಳೂರು: 'ದಲಿತರು ಇನ್ನೂ ಕಗ್ಗತ್ತಲಿನಲ್ಲಿದ್ದಾರೆ. ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಇನ್ನು ತೆರೆದುಕೊಂಡಿಲ್ಲ. ಹಾಗಾಗಿ, ಅಂಬೇಡ್ಕರ್ ಅವರನ್ನು ಮನೆಮನೆಗೆ ತಲುಪಿಸುವ ಕೆಲಸವಾಗಬೇಕಿದೆ' ಎಂದು ಹಿರಿಯ ಸಾಹಿತಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರು ಭಾನುವಾರ ಇಲ್ಲಿ ಹೇಳಿದರು.

ರಾಜ್ಯ ದಲಿತ ಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬದ ಸಂಭ್ರಮ, ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, 'ದಲಿತರಿಗೆ ಹಿಂದೂ ಧರ್ಮ, ಅಸ್ಪೃಶ್ಯತೆ ಹಾಗೂ ಮುಖ್ಯವಾಗಿ ಅಂಬೇಡ್ಕರ್ ಅವರು ದಲಿತರ ವಿಮೋಚನೆಯ ಕುರಿತು ಹೇಳಿರುವ ಬಗ್ಗೆ ಜಾಗೃತಿ ಮೂಡಿಸಬೇಕಿದೆ' ಎಂದರು.

'ಜಾತಿ ನಿರ್ಮೂಲನೆ ಬಗ್ಗೆ ತಿಳಿ ಹೇಳಲು ಪಠ್ಯಪುಸ್ತಕದಲ್ಲಿ ಒಂದೂ ಪಠ್ಯ ಇಲ್ಲ. ಸಗಣಿ, ಗಂಜಲವೇ ಶ್ರೇಷ್ಠ ಎನ್ನುವ ಸಮಾಜದಲ್ಲಿ ನಾವಿದ್ದೇವೆ. ದೇವರಕೋಲು ಮುಟ್ಟಿದ್ದಕ್ಕೆ ಬಾಲಕನಿಗೆ ದಂಡ ವಿಧಿಸಲಾಗುತ್ತದೆ. ಹೆಣ್ಣು ಮಗಳೊಬ್ಬಳಿಗೆ ನೀರು ಕುಡಿಯಲೂ ಬಿಡದ ಧರ್ಮ ಯಾವುದು' ಎಂದು ಪ್ರಶ್ನಿಸಿದರು.

'ಬುಕ್ ಬ್ರಹ್ಮ'ದ ಸಂಪಾದಕ ದೇವು ಪತ್ತಾರ ಅವರು ಪ್ರೊ.ಸಿದ್ದು ಯಾಪಲಪರವಿ ಅವರ 'ಹಗಲಿನಲ್ಲಿಯೇ ಸಂಜೆಯಾಯಿತು' ಕೃತಿಯನ್ನು ಬಿಡುಗಡೆ ಮಾಡಿದರು.

ದಲಿತ ಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬದ ನಿಮಿತ್ತ 25 ಸಾಧಕರನ್ನು ಸನ್ಮಾನಿಸಲಾಯಿತು. ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ. ಅರ್ಜುನ ಗೊಳಸಂಗಿ ಅಧ್ಯಕ್ಷತೆ ವಹಿಸಿದ್ದರು.

'ಉರ್ದು ಪರಕೀಯ ಭಾಷೆಯಲ್ಲ'

ಅರೇಬಿಕ್, ದಖನಿ ಉರ್ದು ಗ್ರಂಥಗಳ ಕನ್ನಡ ಅನುವಾದಿತ 19 ಸಂಪುಟ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉರ್ದು ಕೂಡ ನಮ್ಮ ಭಾಷೆ, ಭಾರತದಲ್ಲೇ ಹುಟ್ಟಿದ ಭಾಷೆ. ಆದರೆ, ಅದನ್ನು ಈಗ ಪರಕೀಯ ಭಾಷೆ ಎಂಬಂತೆ ಬಿಂಬಿಸಲಾಗುತ್ತಿದೆ' ಎಂದು ಲೇಖಕ ಸುಧೀಂದ್ರ ಕುಲಕರ್ಣಿ ಬೇಸರ ವ್ಯಕ್ತಪಡಿಸಿದರು.

ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ ಹಾಗೂ ಬೆಂಗಳೂರಿನ ಸೆಂಟರ್ ಫಾರ್ ರಿಸರ್ಚ್ ಆ್ಯಂಡ್ ಕಮ್ಯುನಿಕೇಷನ್ ಜಂಟಿಯಾಗಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡಕ್ಕೆ ಅನುವಾದಗೊಂಡ ಆದಿಲ್ ಶಾಹಿ ಕಾಲದ ಪರ್ಷಿಯನ್, ಅರೇಬಿಕ್, ದಖನಿ ಉರ್ದು ಗ್ರಂಥಗಳ 19 ಸಂಪುಟಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಪರ್ಷಿಯನ್, ಅರೇಬಿಕ್, ಉರ್ದು ಭಾಷೆಗಳು ನಮ್ಮದಲ್ಲ ಎಂಬ ಮಾನಸಿಕತೆ ಬೆಳೆಸಲಾಗುತ್ತಿದೆ. ವಾಸ್ತವದಲ್ಲಿ ಕಲಬುರಗಿ, ವಿಜಯಪುರ, ಉತ್ತರ ಕರ್ನಾಟಕದ ಹಲವು ಜಿಲ್ಲೆ, ಅನೇಕ ರಾಜ್ಯಗಳಲ್ಲಿ ಇಂಗ್ಲಿಷ್‌ಗಿಂತ ಮುಂಚೆ ಪರ್ಷಿಯನ್ ಶತಮಾನಗಳ ಕಾಲ ಅಧಿಕೃತ ಭಾಷೆಯಾಗಿತ್ತು' ಎಂದರು.

ಬೆಂಗಳೂರಿನಲ್ಲಿ ಭಾನುವಾರ 19 ಸಂಪುಟಗಳನ್ನು ಸುಧೀಂದ್ರ ಕುಲಕರ್ಣಿ ಅವರು ಬಿಡುಗಡೆ ಮಾಡಿದರು. ಸೆಂಟರ್ ಫಾರ್ ರಿಸರ್ಚ್ ಆ್ಯಂಡ್ ಕಮ್ಯುನಿಕೇಷನ್‌ನ ಟ್ರಸ್ಟಿ ಮನ್ಸೂರ್ ಅಲಿ ಖಾನ್, ಪತ್ರಕರ್ತ ದೇವು ಪತ್ತಾರ, ಶಾಸಕ ರಿಜ್ವಾನ್ ಅರ್ಷದ್, ಎಂ.ಬಿ.ಪಾಟೀಲ, ಕಾಂಗ್ರೆಸ್ ಮುಖಂಡ ರೆಹಮಾನ್ ಖಾನ್, ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ನಿರ್ದೇಶಕ ಕೃಷ್ಣ ಕೊಲ್ಹಾರ ಕುಲಕರ್ಣಿ ಇದ್ದರು – ಪ್ರಜಾವಾಣಿ ಚಿತ್ರ

'ಗೋಲಗುಮ್ಮಟ ಸೇರಿ ಮುಸ್ಲಿಂ ಹೆಸರಿನಲ್ಲಿ ಇರುವ ಎಲ್ಲವೂ ನಮ್ಮದಲ್ಲ. ಟಿಪ್ಪು ಸುಲ್ತಾನ್ ದೇಶಭಕ್ತನಲ್ಲ ಎಂದು ಪ್ರತಿಪಾದಿಸಲಾಗುತ್ತಿದೆ. ಈ ರೀತಿ ಸಮಾಜವನ್ನು ಒಡೆಯುವ ರಾಜಕಾರಣ ಅತ್ಯಂತ ದುರದೃಷ್ಟಕರ' ಎಂದು ಹೇಳಿದರು.

'ಆದಿಲ್ ಶಾಹಿ ಇತಿಹಾಸವನ್ನು ಕನ್ನಡಿಗರ ಮುಂದೆ 19 ಸಂಪುಟಗಳಲ್ಲಿ ತಂದಿರುವುದು ಅತ್ಯಂತ ಮಹತ್ವದ ಕೆಲಸ. ಎಂ.ಎಂ.ಕಲಬುರ್ಗಿ ಮತ್ತು ಕೃಷ್ಣ ಕೋಲ್ಹಾರ ಕುಲಕರ್ಣಿ ಅವರ ಈ ಕಾರ್ಯ ಎಲ್ಲರೂ ಮೆಚ್ಚುವಂತದ್ದು' ಎಂದು ಬಣ್ಣಿಸಿದರು.

ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಅವರು, 'ಫ.ಗು.ಹಳಕಟ್ಟಿ ಇಲ್ಲದಿದ್ದರೆ ವಚನ ಸಾಹಿತ್ಯವೇ ಇರುತ್ತಿರಲಿಲ್ಲ. ಶರಣರು, ವಚನಕಾರರ ಕೃತಿಗಳನ್ನು ಸಂಗ್ರಹಿಸಿ ಅವರು ತಮ್ಮ ಸ್ವಂತ ಹಣದಿಂದ ಪ್ರಕಟಿಸಿದರು' ಎಂದರು.

ಗೋವಿಂದಯ್ಯ ಯತೀಶ್ ಫನಾ ಅಧ್ಯಕ್ಷ

ಬೆಂಗಳೂರು: ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್‌ನ (ಫನಾ) ನೂತನ ಅಧ್ಯಕ್ಷರಾಗಿ ಡಾ. ಗೋವಿಂದಯ್ಯ ಯತೀಶ್ ಆಯ್ಕೆಯಾಗಿದ್ದಾರೆ.

ಭಾನುವಾರ ಸರ್ವಸದಸ್ಯರ ಸಭೆಯಲ್ಲಿ 2024ವರೆಗಿನ ಅವಧಿಗೆ ಪದಾಧಿಕಾರಿಗಳ ಆಯ್ಕೆ ನಡೆಯಿತು. ಡಾ. ಗಿರಿಧರ್ ಅವರು ಕಾರ್ಯದರ್ಶಿಯಾಗಿ, ಡಾ.ಶೋಭಾ ಪ್ರಕಾಶ್ ಮುಂದಿನ ಅವಧಿಯ ಚುನಾಯಿತ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಡಾ. ರಾಜಶೇಖರ್, ಖಜಾಂಚಿಯಾಗಿ ಡಾ. ದಿವಾಕರ್, ಜಂಟಿ ಕಾರ್ಯದರ್ಶಿಯಾಗಿ ಸಂತೋಷ್ ಸಕ್ಷೇಚ ಅವರು ಆಯ್ಕೆಯಾದರು.

ಡಾ. ಗೋವಿಂದಯ್ಯ ಯತೀಶ್ ಮಾತನಾಡಿದರು.

ಕಾಂಗ್ರೆಸ್‌ನ ಒಕ್ಕಲಿಗ ನಾಯಕರಿಂದ ನಿರ್ಮಲಾನಂದನಾಥ ಶ್ರೀಗಳ ಭೇಟಿ

'ಮೀಸಲಾತಿ ಹೋರಾಟದ ನೇತೃತ್ವ ವಹಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕಲಿಗರ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಆಗ್ರಹಿಸಿ ನಡೆಸುವ ಹೋರಾಟದ ನಾಯಕತ್ವ ವಹಿಸುವಂತೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಕಾಂಗ್ರೆಸ್ ಪಕ್ಷದ ಒಕ್ಕಲಿಗ ನಾಯಕರು ಆಗ್ರಹಿಸಿದ್ದಾರೆ.

ಇತ್ತೀಚೆಗೆ ನಡೆದ ಕಾಂಗ್ರೆಸ್ ಪಕ್ಷದ ಒಕ್ಕಲಿಗ ನಾಯಕರ ಸಭೆಯಲ್ಲಿ ಮೀಸಲಾತಿ ಕುರಿತು ಚರ್ಚೆ ನಡೆದಿತ್ತು. ಸಭೆಯ ನಿಲುವು ವ್ಯಕ್ತಪಡಿಸಲು ವಿಜಯನಗರದ ಆದಿಚುಂಚನಗಿರಿ ಮಠಕ್ಕೆ ಭಾನುವಾರ ನಾಯಕರು ಭೇಟಿ ನೀಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಚಲುವರಾಯಸ್ವಾಮಿ, 'ಒಕ್ಕಲಿಗ ಸಮುದಾಯದ ಮೀಸಲಾತಿ ಹೋರಾಟಕ್ಕೆ ಕಾಂಗ್ರೆಸ್ ಪಕ್ಷದ ಒಕ್ಕಲಿಗ ನಾಯಕರು ಬೆಂಬಲಿಸುತ್ತಿದ್ದೇವೆ. ಹೋರಾಟದ ನಾಯಕತ್ವ ವಹಿಸುವಂತೆ ಶ್ರೀಗಳನ್ನು ಕೋರಿದ್ದೇವೆ' ಎಂದರು.

'ಶ್ರೀಗಳು ಇತ್ತೀಚೆಗೆ ಕರೆದಿದ್ದ ಒಕ್ಕಲಿಗ ನಾಯಕರ ಸಭೆಗೆ ಎಚ್.ಡಿ. ಕುಮಾರಸ್ವಾಮಿ, ದೇವೇಗೌಡರು, ಎಚ್.ಡಿ. ರೇವಣ್ಣ ಯಾಕೆ ಬಂದಿಲ್ಲವೆಂದು ನಮಗೆ ಗೊತ್ತಿಲ್ಲ ಅದನ್ನು ಅವರೇ ಹೇಳಬೇಕು' ಎಂದರು.

ಒಕ್ಕಲಿಗ ನಾಯಕರು ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಮೀಸಲಾತಿ ಹೆಚ್ಚಳ ಹೋರಾಟದ ನೇತೃತ್ವ ವಹಿಸಿಕೊಳ್ಳಲು ಮನವಿ ಮಾಡಿದರು. ಪ್ರೊ. ರಾಜೀವಗೌಡ, ಟಿ.ಬಿ.ಜಯಚಂದ್ರ, ಎಂ.ಕೃಷ್ಣಪ್ಪ, ಕೃಷ್ಣ ಬೈರೇಗೌಡ, ಎಂ.ವಿ.ಗೋಪಾಲಸ್ವಾಮಿ, ಜಿ.ಸಿ. ಚಂದ್ರಶೇಖರ್ ಇದ್ದರು

ಕಾಂಗ್ರೆಸ್ ಮುಖಂಡರಾದ ಜಿ.ಸಿ. ಚಂದ್ರಶೇಖರ್, ಕಿಮ್ಮನೆ ರತ್ನಾಕರ್, ಪ್ರೊ. ರಾಜೀವ್ ಗೌಡ, ಎಸ್. ರವಿ, ಕೃಷ್ಣ ಭೈರೇಗೌಡ, ದಿನೇಶ್ ಗೂಳಿಗೌಡ, ಟಿ.ಬಿ. ಜಯಚಂದ್ರ, ಎಂ. ಕೃಷ್ಣಪ್ಪ ಮತ್ತಿತರರು ಇದ್ದರು.

ದೇವೇಗೌಡರನ್ನು ಭೇಟಿಯಾದ ನಂಜಾವಧೂತ ಶ್ರೀ

ಬೆಂಗಳೂರು: ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲು ಸೌಲಭ್ಯವನ್ನು ಕುಂಚಿಟಿಗ ಒಕ್ಕಲಿಗ ಸಮುದಾಯಕ್ಕೆ ಕಲ್ಪಿಸುವ ಕುರಿತು ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ನಂಜಾವಧೂತ ಸ್ವಾಮೀಜಿ ಅವರು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಜೊತೆ ಭಾನುವಾರ ಸಮಾಲೋಚಿಸಿದರು.

'ಶ್ರೀಗಳ ಸಲಹೆಯಂತೆ ಸಂಸತ್ ಭವನದಲ್ಲಿ ಇತ್ತೀಚೆಗೆ ಪ್ರಧಾನಿ ಅವರನ್ನು ಭೇಟಿಯಾಗಿ ಸಮುದಾಯಕ್ಕೆ ಒಬಿಸಿ ಮೀಸಲು ಸೌಲಭ್ಯ ನೀಡುವಂತೆ ಒತ್ತಾಯಿಸಿದ್ದೇನೆ' ಎಂದು ಗೌಡರು ತಿಳಿಸಿದ್ದಾರೆ.

ಮೆಸ್ಸಿಗೆ ಮುತ್ತು...

ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದ ಅರ್ಜೆಂಟೀನಾ ತಂಡದ ಅಭಿಮಾನಿಗಳು ನಗರದ ಆಸ್ಟಿನ್ ಟೌನ್‌ನಲ್ಲಿ ಭಾನುವಾರ ಲಯೊನೆಲ್ ಮೆಸ್ಸಿ ಅವರ ಚಿತ್ರಕ್ಕೆ ಮುತ್ತಿಕ್ಕಿ ವಿಜಯೋತ್ಸವ ಆಚರಿಸಿದರು –ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್

'ಸಿದ್ದರಾಮಯ್ಯ ಮತಾಂಧ, ಜಾತಿ ಒಡೆದರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ರಾಮುಲ್ಲಾಖಾನ್' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕರನ್ನು ನಾನು ಕರೆದಿಲ್ಲ. ರಾಜ್ಯದ ಜನರು ಕರೆದಿದ್ದಾರೆ' ಎಂದು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಭಾನುವಾರ ತಿರುಗೇಟು ನೀಡಿದರು.

ಬಿಜೆಪಿ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ 24 ಪ್ರಕೋಷ್ಠಗಳ ಶಕ್ತಿ ಸಂಗಮದಲ್ಲಿ ಮಾತನಾಡಿದ ಅವರು, ಅವರು ಮಾತನಾಡಿದರು.

'ಸಿದ್ದರಾಮಯ್ಯ ಸ್ಥಿತಿ ಕಂಡು ಅವರ ತಂದೆ ಆತ್ಮವೇ ವಿಲವಿಲ ಎಂದು ಒದ್ದಾಡುತ್ತಿದೆ. ಅವರು ಟಿಪ್ಪುಜಯಂತಿ ಆಚರಿಸಿದ ದೊಡ್ಡ ಮತಾಂಧ. ಬೆರಕೆ ರಾಜಕಾರಣ ಮಾಡುತ್ತಿರುವವರು ಶುದ್ಧವಾಗಲು ಸಾಧ್ಯವಿಲ್ಲ. ಅವರು ಜಾತಿ ಒಡೆಯುವ ಕೆಲಸ ಮಾಡಿದವರು' ಎಂದು ಕಿಡಿಕಾರಿದರು.

'ಪ್ರಾದೇಶಿಕ ಭಾಷೆಗೆ ಕೃತಿಗಳ ಅನುವಾದ ಕಷ್ಟಕರ'

ಬೆಂಗಳೂರು: 'ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಸಾಹಿತ್ಯ ಕೃತಿಗಳ ಅನುವಾದ ಕಷ್ಟಕರ. ಭಾಷೆಯ ಅಸಮಂಜಸ ಬಳಕೆ ತಪ್ಪು ವ್ಯಾಖ್ಯಾನಕ್ಕೆ ಅವಕಾಶ ಮಾಡಿಕೊಡಲಿದೆ' ಎಂದು ರಾಜಕೀಯ ವಿಶ್ಲೇಷಕ ಪ್ರತಾಪ್ ಭಾನು ಮೆಹ್ತಾ ಭಾನುವಾರ ಹೇಳಿದರು.

ಋಜುವಾತು ಹಾಗೂ ಬಹುವಚನ ಜಂಟಿಯಾಗಿ ಆಯೋಜಿಸಿದ್ದ ಯು.ಆರ್. ಅನಂತಮೂರ್ತಿ ಸ್ಮಾರಕ ಉಪನ್ಯಾಸದಲ್ಲಿ 'ವಿಜೃಂಭಿಸುತ್ತಿರುವ ರಾಜಕೀಯ ಕಾಲದಲ್ಲಿ ಸಂಸ್ಕೃತಿ ಮತ್ತು ಅಸ್ಮಿತೆ' ವಿಷಯದ ಬಗ್ಗೆ ಮಾತನಾಡಿದರು.

'ನಮ್ಮ ಯೋಚನೆ, ವ್ಯಕ್ತಪಡಿಸುವಿಕೆ, ಪ್ರೇಕ್ಷಕರ ಗ್ರಹಿಕೆ ನಡುವೆ ಅಂತರವಿದೆ. ಕೆಲವೊಮ್ಮೆ ಸಾಂಸ್ಕೃತಿಕ ಅಂತರದಿಂದಾಗಿ ತಪ್ಪು ಸಂವಹನಕ್ಕೆ ಎಡೆಮಾಡಿಕೊಡುತ್ತದೆ. ಅನಂತಮೂರ್ತಿ ಅವರ ವಿಚಾರದಲ್ಲಿಯೂ ಇದೇ ಆಗಿತ್ತು' ಎಂದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ರಸ್ತೆ ದುರಸ್ತಿಗೊಳಿಸಿ

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಘವೇಂದ್ರ ಬಡಾವಣೆಯ ಪೈಪ್‌ಲೈನ್ ರಸ್ತೆ ಹಾಳಾಗಿದೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇಲ್ಲಿನ ದೂಳು ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡುತ್ತಿದೆ. ಈ ಭಾಗದಲ್ಲಿ ಶಾಲೆಗಳಿವೆ. ಗುಂಡಿಗಳಿಂದಾಗಿ ಸಂಚಾರ ದಟ್ಟಣೆ ಆಗುತ್ತಿದೆ. ಸಂಚಾರಕ್ಕೆ ಅನನುಕೂಲವಾಗಿದೆ. ಈ ಬಗ್ಗೆ ಜನಪ್ರತಿನಿಧಿಗಳಿಗೆ, ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು ಪ್ರಯೋಜನವಾಗಿಲ್ಲ.

ಪ್ರಭು, ಸ್ಥಳೀಯ ನಿವಾಸಿ



ರಾಘವೇಂದ್ರ ಬಡಾವಣೆಯ ಪೈಪ್‌ಲೈನ್ ರಸ್ತೆ.

'ಸಿ.ಸಿ.ಟಿ.ವಿ ಕ್ಯಾಮೆರಾ ದುರಸ್ತಿಗೊಳಿಸಿ'

ಟಿ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚೊಕ್ಕಸಂದ್ರ ವಾರ್ಡ್ ನಂ.39ರ ವಿನಾಯಕನಗರ ಮತ್ತು ವಿಕಾಸನಗರದ ಮುಖ್ಯರಸ್ತೆಯಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ಕೆಟ್ಟು ಮೂರು ವರ್ಷ ಗಳಾದರೂ ದುರಸ್ತಿಯಾಗಿಲ್ಲ. ಈ ಭಾಗದಲ್ಲಿ ಕಳ್ಳರ ಉಪಟಳ ಹೆಚ್ಚಾಗಿದ್ದು, ಮಧ್ಯರಾತ್ರಿ ಓಡಾಡುವ ಸಾರ್ವಜನಿಕರ ಮೇಲೆ ದಾಳಿ ಮಾಡಿ ಚಾಕು ಇರಿದು, ಸುಲಿಗೆ ಮಾಡಿರುವ ಘಟನೆಗಳು ನಡೆದಿವೆ. ಈ ಕುರಿತು ಕ್ಷೇತ್ರದ ಶಾಸಕ ಆರ್. ಮಂಜುನಾಥ್ ಮತ್ತು ಬಿಬಿಎಂಪಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ. ಕ್ಯಾಮೆರಾದ ಕೆಲವು ಭಾಗಗಳು ಕೆಳಗೆ ಬಿದ್ದಿವೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ದುರಸ್ತಿಗೆ ಕ್ರಮವಹಿಸಲಿ.

ಆರ್.ಗೋವಿಂದರಾವ್ ಸೂರ್ಯವಂಶಿ, ಸ್ಥಳೀಯ ನಿವಾಸಿ

ಸಿ.ಸಿ ಟಿ.ವಿ ಕ್ಯಾಮೆರಾ ತುಂಡಾಗಿ ಬಿದ್ದಿರುವುದು

ವರದಿ ಪರಿಣಾಮ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ 109ರ ಕಾರ್ಪೊರೇಷನ್ ಕಂದಾಯ ಕಚೇರಿಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಬಿಬಿಎಂಪಿ ಸಿಬ್ಬಂದಿ ದುರಸ್ತಿಗೊಳಿಸಿದರು. 'ಪ್ರಜಾವಾಣಿ' ಕುಂದು ಕೊರತೆ ವಿಭಾಗದಲ್ಲಿ ನವೆಂಬರ್ 26ರಂದು 'ರಸ್ತೆ ದುರಸ್ತಿಗೊಳಿಸಿ' ಎಂಬ ಶೀರ್ಷಿಕೆ ಅಡಿಯಲ್ಲಿ ಅಹವಾಲು ಪ್ರಕಟವಾಗಿತ್ತು.

'ಫೆಡರೇಷನ್ ಕ್ರಿಕೆಟ್ ಲೀಗ್' ನಲ್ಲಿ ಚಾಂಪಿಯನ್ ಆದ ರೋಹನ್ ಆಕೃತಿ ಕ್ರಿಕೆಟ್ ಕ್ಲಬ್ ಮತ್ತು ಎರಡನೇ ಸ್ಥಾನ ಪಡೆದ ಬನಶಂಕರಿ ಯುನೈಟೆಡ್ ತಂಡದ ಸದಸ್ಯರು ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಫೆಡರೇಷನ್ ಕ್ರಿಕೆಟ್ ಲೀಗ್; ಬನಶಂಕರಿ ರನ್ನರ್ಸ್ ಅಪ್

ರೋಹನ್ ಆಕೃತಿ ಕ್ಲಬ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೊಗಸಾದ ಆಟವಾಡಿದ ರೋಹನ್ ಆಕೃತಿ ಕ್ರಿಕೆಟ್ ಕ್ಲಬ್ ತಂಡದವರು ಚೇಂಜ್‌ಮೇಕರ್ಸ್ ಆಫ್ ಕನಕಪುರ ರೋಡ್ ಅಸೋಸಿಯೇಷನ್ ಆಯೋಜಿಸಿದ್ದ 'ಫೆಡರೇಷನ್ ಕ್ರಿಕೆಟ್ ಲೀಗ್' ನಲ್ಲಿ ಚಾಂಪಿಯನ್ ಆದರು.

ಕನಕಪುರ ರಸ್ತೆಯ ಜುಡಿಷಿಯಲ್ ಬಡಾವಣೆ ಮೈದಾನದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ರೋಹನ್ ಆಕೃತಿ ತಂಡ 23 ರನ್‌ಗಳಿಂದ ಬನಶಂಕರಿ 6ನೇ ಹಂತ ಯುನೈಟೆಡ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ರೋಹನ್ ಆಕೃತಿ ನಿಗದಿತ ಎಂಟು ಓವರ್‌ಗಳಲ್ಲಿ 8 ವಿಕೆಟ್‌ಗೆ 67 ರನ್ ಗಳಿಸಿದರೆ, ಎದುರಾಳಿ ತಂಡ ಆರು ವಿಕೆಟ್ ಕಳೆದುಕೊಂಡ 44 ರನ್ ಮಾತ್ರ ಗಳಿಸಿತು. ವಿಜೇತ ತಂಡದ ಪುನೀತ್ 'ಪಂದ್ಯಶ್ರೇಷ್ಠ' ಪ್ರಶಸ್ತಿ ಪಡೆದರು.

ಇದಕ್ಕೂ ಮುನ್ನ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ರೋಹನ್ ಆಕೃತಿ ತಂಡ 44 ರನ್‌ಗಳಿಂದ ಮಂತ್ರಿ ಸೆರೆನಿಟಿ ವಿರುದ್ಧ ಗೆದ್ದಿತ್ತು. ಮೊದಲು ಬ್ಯಾಟ್ ಮಾಡಿದ ರೋಹನ್ ಆಕೃತಿ 3 ವಿಕೆಟ್‌ಗೆ 88 ರನ್ ಗಳಿಸಿದರೆ, ಮಂತ್ರಿ ತಂಡ 5 ವಿಕೆಟ್‌ಗಳಿಗೆ 44 ರನ್ ಕಲೆಹಾಕಿತು.

ಇನ್ನೊಂದು ಸೆಮಿಫೈನಲ್‌ನಲ್ಲಿ ಬನಶಂಕರಿ ಯುನೈಟೆಡ್ ತಂಡ 7 ರನ್‌ಗಳಿಂದ ನಾಪಾ ವ್ಯಾಲಿ ತಂಡವನ್ನು ಮಣಿಸಿತ್ತು.

ವೈಯಕ್ತಿಕ ಪ್ರಶಸ್ತಿ: ಟೂರ್ನಿಯ ಉತ್ತಮ ಆಟಗಾರ: ಪ್ರದ್ಯುಮ್ನ (ರೋಹನ್ ಆಕೃತಿ), ಉತ್ತಮ ಬ್ಯಾಟ್ಸ್‌ಮನ್: ಪ್ರಶಾಂತ್ (ಮಂತ್ರಿ ಕೋರ್ಟ್‌ಯಾರ್ಡ್), ಉತ್ತಮ ಬೌಲರ್: ಕೌಶಿಕ್ (ಬನಶಂಕರಿ ಯುನೈಟೆಡ್)

ವಾಹನ ಬಂತು, ಸಿಬ್ಬಂದಿ ಕೊಡಲಿಲ್ಲ: ಚರ್ಮಗಂಟಿನಿಂದ ಹಸು, ಎತ್ತುಗಳ ಸಾವು

ಸಂಚರಿಸದ ಆಂಬುಲೆನ್ಸ್: ರೈತರಿಗೆ ಸಂಕಷ್ಟ

● ಬಸವರಾಜ ಹವಾಲ್ದಾರ

ಮುಖ್ಯಾಂಶಗಳು
- 536 ಜಾನುವಾರುಗಳ ಸಾವು
- ಲಕ್ಷ ಜಾನುವಾರುಗಳಿಗೆ ಒಂದು ಆಂಬುಲೆನ್ಸ್

ಬಾಗಲಕೋಟೆ: ಚರ್ಮಗಂಟು ರೋಗದಿಂದ ನಿತ್ಯ ಹಸು, ಎತ್ತು, ಕರುಗಳು ಸಾವನ್ನಪ್ಪುತ್ತಿವೆ. ಅವುಗಳ ನೆರವಿಗೆ ಬರಬೇಕಿದ್ದ ಜಾನುವಾರುಗಳ ಸಂರಕ್ಷಣೆ ಹಾಗೂ ಆರೋಗ್ಯ ಸೇವೆಯ ಆಂಬುಲೆನ್ಸ್‌ಗಳು ಸಂಚಾರ ಆರಂಭಿಸದ ಕಾರಣ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ರಾಜ್ಯದಲ್ಲಿ ಇಲ್ಲಿಯವರೆಗೆ ಚರ್ಮಗಂಟು ರೋಗದಿಂದ 17 ಸಾವಿರ (ಬಾಗಲಕೋಟೆ ಜಿಲ್ಲೆಯಲ್ಲಿ 536) ಜಾನುವಾರುಗಳು ಮೃತಪಟ್ಟಿವೆ. ಈಗಲೂ ಸಾವಿರಾರು ಹಸು, ಎತ್ತುಗಳು ಚರ್ಮಗಂಟು ರೋಗದಿಂದ ಬಳಲುತ್ತಿವೆ.

ಬೆಳಗಾವಿ ವಿಭಾಗದ ಏಳು ಜಿಲ್ಲೆಗಳಿಗೆ 82 ಆಂಬುಲೆನ್ಸ್‌ಗಳನ್ನು (ಸಹಾಯವಾಣಿ ಸಂಖ್ಯೆ 1962) ನೀಡಲಾಗಿದೆ. ಬಾಗಲಕೋಟೆ ಜಿಲ್ಲೆಗೆ 13 ವಾಹನಗಳನ್ನು ನೀಡಲಾಗಿದೆ. ಆದರೆ, ಅವಶ್ಯಕ ಸಿಬ್ಬಂದಿ ನೀಡದ್ದರಿಂದ ವಾಹನಗಳು ಶೆಡ್ ಸೇರಿವೆ. ನಿಂತಲ್ಲಿಯೇ ಹಾಳಾಗುವ ಭೀತಿ ಎದುರಾಗಿದೆ.

13 ವಾಹನಗಳಿಗೆ ಬೇಕಾದ ವಾಹನ ಚಾಲಕ, ವೈದ್ಯರು ಹಾಗೂ ವೈದ್ಯಕೀಯ ಸಹಾಯಕ ಸಿಬ್ಬಂದಿ ನೀಡಿಲ್ಲ. ಜಿಲ್ಲೆಗೆ ಮಂಜೂರಾಗಿರುವ 587 ಹುದ್ದೆಗಳ ಪೈಕಿ 290 ಹುದ್ದೆಗಳು ಖಾಲಿ ಇವೆ. ಇರುವ ಸಿಬ್ಬಂದಿಯಲ್ಲಿಯೇ ಕೆಲವರನ್ನು ಆಂಬುಲೆನ್ಸ್‌ಗಳಿಗೆ ನಿಯೋಜಿಸಿ, ಆರು ವಾಹನಗಳನ್ನು ಮಾತ್ರ ಓಡಿಸಲಾಗುತ್ತದೆ ಎಂದು ಪಶುಪಾಲನೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಶಶಿಧರ ನಾಡಗೌಡ ಹೇಳಿದರು.

ಬಾಗಲಕೋಟೆಯ ಪಶು ಆಸ್ಪತ್ರೆ ಬಳಿ ನಿಂತಿರುವ ಆಂಬುಲೆನ್ಸ್

ಜುಲೈ ತಿಂಗಳಲ್ಲಿಯೇ ವಾಹನಗಳು ಬಂದಿವೆ. ಈಗ ಓಡುತ್ತಿರುವ ಅರ್ಧ ದಷ್ಟು ವಾಹನಗಳು ಕಾಟಾಚಾರಕ್ಕೆ ಎಂಬಂತೆ ಸಂಚರಿಸಿವೆ.

> ತಿಂಗಳಿಗೆ 500 ಕಿ.ಮೀ. ಕಾಟಾಚಾರಕ್ಕೆ ಓಡಿಸಲಾಗಿದೆ. ಇದರಿಂದ ರೈತರಿಗೆ ಸೌಲಭ್ಯ ಸಿಗುವುದಿಲ್ಲ. ಸಿಬ್ಬಂದಿ ಭರ್ತಿ ಬಗ್ಗೆ ಸಚಿವರೊಂದಿಗೆ ಮಾತನಾಡುವೆ
> **ಸಿ.ಸಿ. ಪಾಟೀಲ,** ಜಿಲ್ಲಾ ಉಸ್ತುವಾರಿ ಸಚಿವ

> ಪಶು ಆಸ್ಪತ್ರೆಯಲ್ಲಿಯೇ ವೈದ್ಯರು ಸಿಗುವುದಿಲ್ಲ. ಇನ್ನು ಕರೆ ಮಾಡಿದರೆ ವಾಹನ ಬರುವುದೇ. ಆಂಬುಲೆನ್ಸ್ ಇರುವ ಬಗ್ಗೆ ಗೊತ್ತಿಲ್ಲ
> **ಕರಿಯಪ್ಪ,** ಅನಗವಾಡಿ

'ದಿನಕ್ಕೆ 16 ಕಿ.ಮೀ. ಮಾತ್ರ ಎಂದರೆ ಎಷ್ಟು ಗ್ರಾಮಗಳಿಗೆ, ಎಷ್ಟು ರೈತರಿಗೆ ತಲುಪಿದೆ ಎಂಬುದು ಗೊತ್ತಾಗುತ್ತದೆ. ಸಿಬ್ಬಂದಿ ನೇಮಕದ ಬಗ್ಗೆ ಮುಖ್ಯಮಂತ್ರಿಯವರೊಂದಿಗೆ ಮಾತನಾಡುವೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ. ಪಾಟೀಲ ಹೇಳಿದರು.

ರಾಜ್ಯದಲ್ಲಿ ದನ, ಎಮ್ಮೆ, ಕುರಿ, ಮೇಕೆ ಮತ್ತು ಹಂದಿ ಸೇರಿದಂತೆ 290 ಲಕ್ಷ ಜಾನುವಾರುಗಳಿವೆ. ಪ್ರತಿ ಒಂದು ಲಕ್ಷ ಜಾನುವಾರುಗಳಿಗೆ ಒಂದು ಆಂಬುಲೆನ್ಸ್ ಇದೆ. ಅಷ್ಟು ದೊಡ್ಡ ಸಂಖ್ಯೆಗೆ ಒಂದು ವಾಹನ ಸಾಲುವುದಿಲ್ಲ. ಅವೂ ಈಗ ಸಂಚರಿಸುತ್ತಿಲ್ಲ.

'ವಾಹನಗಳಿಗೆ ಬೇಕಾದ ಸಿಬ್ಬಂದಿ ಒದಗಿಸಿಲ್ಲ. ರಾಜ್ಯ ಮಟ್ಟದಲ್ಲಿ ಸಿಬ್ಬಂದಿ ನೇಮಕಾತಿಗೆ ಸರ್ಕಾರ ಮುಂದಾಗಿದೆ. ಜಿಲ್ಲಾ ಮಟ್ಟದಲ್ಲಿ ಇದಕ್ಕೆ ಅವಕಾಶವಿಲ್ಲ. ಇರುವ ಸಿಬ್ಬಂದಿ ಬಳಸಿಕೊಂಡು ಸೇವೆ ಒದಗಿಸಲು ಯತ್ನಿಸುತ್ತಿದ್ದೇವೆ' ಎಂದು ನಾಡಗೌಡ ತಿಳಿಸಿದರು.

3 ಸಾಧಕಿಯರಿಗೆ ಮಹಿಳಾ ವಿವಿ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಡಾ.ಎಸ್.ಜಿ.ಸುಶೀಲಮ್ಮ

ಇಂದುಮತಿ ಕಾಟದಾರೆ

ರೇಷ್ಮಾ ಕೌರ್

ವಿಜಯಪುರ: ಡಿಸೆಂಬರ್ 19ರಂದು ನಡೆಯಲಿರುವ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 13 ಮತ್ತು 14ನೇ ಘಟಿಕೋತ್ಸವದಲ್ಲಿ ಮೂವರು ಸಾಧಕಿಯರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡ ಲಾಗುವುದು ಎಂದು ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲ ತಿಳಿಸಿದರು.

ಬೆಂಗಳೂರಿನ ಸುಮಂಗಲಿ ಸೇವಾಶ್ರಮದ ಸಮಾಜ ಸೇವಕಿ ಡಾ.ಎಸ್.ಜಿ.ಸುಶೀಲಮ್ಮ, ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆಯ ಪ್ರಚಾರದಲ್ಲಿ ತೊಡಗಿಕೊಂಡಿರುವ ಗುಜರಾತ್‌ನ ಪುನರುತ್ಥಾನ ವಿದ್ಯಾಪೀಠದ ಕುಲಪತಿ ಇಂದುಮತಿ ಕಾಟದಾರೆ ಹಾಗೂ ಬೀದರ್‌ನ ಗುರುನಾನಕ್ ಸಮೂಹ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷೆ ರೇಷ್ಮಾ ಕೌರ್ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವರು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಜ.1ರೊಳಗೆ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಸಿದ್ಧ

ಬೆಳಗಾವಿ: ಚುನಾವಣಾ ಸಮಿತಿ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮುಂದಿನ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಜನವರಿ 1ರೊಳಗೆ ಸಿದ್ಧಪಡಿಸಲು ನಿರ್ಧರಿಸಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಹೇಳಿದರು.

ನಗರದಲ್ಲಿ ಭಾನುವಾರ ಕಾಂಗ್ರೆಸ್ ಚುನಾವಣಾ ಸಮಿತಿ ಸಭೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಚುನಾವಣೆಗೆ ಸಂಬಂಧಿಸಿದಂತೆ ಮೊದಲ ಸಭೆ ಬೆಳಗಾವಿಯಲ್ಲಿ ನಡೆದಿದೆ. ಎರಡೂವರೆ ತಾಸು ಚರ್ಚಿಸಿ ಒಟ್ಟಾರೆ ತೀರ್ಮಾನಕ್ಕೆ ಬಂದಿದ್ದೇವೆ. ಈವರೆಗೆ ರಾಜ್ಯದ 224 ಕ್ಷೇತ್ರಗಳು ಸೇರಿ 1,350 ಟಿಕೆಟ್ ಆಕಾಂಕ್ಷಿಗಳ ಅರ್ಜಿಗಳು ಬಂದಿವೆ. ಆದರೆ, ಕಾರ್ಯಕರ್ತರ ಅಭಿಪ್ರಾಯ ಹಾಗೂ ಆಯ್ಕೆಯೇ ನಮ್ಮದೂ ಆಗಬೇಕು ಎಂಬ ಕಾರಣಕ್ಕೆ ನಿರ್ಧಾರ ವನ್ನು ಅವರಿಗೇ ಬಿಡುತ್ತೇವೆ' ಎಂದರು.

ಬೆಳಗಾವಿಯಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಚುನಾವಣಾ ಸಮಿತಿ ಸಭೆಯಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ ಹಾಗೂ ಸುರ್ಜೇವಾಲಾ ಅವರು ಚರ್ಚೆಯಲ್ಲಿ ಪಾಲ್ಗೊಂಡರು — ಪ್ರಜಾವಾಣಿ ಚಿತ್ರ

'ಸಲ್ಲಿಕೆಯಾದ ಎಲ್ಲ ಅರ್ಜಿಗಳನ್ನು ಮರಳಿ ಆಯಾ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಕಳುಹಿಸುತ್ತೇವೆ. ಕೆಪಿಸಿಸಿಯ ಐವರು ಕಾರ್ಯಾಧ್ಯಕ್ಷರು, ಜಿಲ್ಲಾ ಮುಖಂಡರು, ಪ್ರತಿಯೊಂದು ಬ್ಲಾಕ್ ಘಟಕದವರೂ ಕುಳಿತು ಚರ್ಚಿಸಬೇಕು. ಒಂದು ಕ್ಷೇತ್ರದಿಂದ ಗರಿಷ್ಠ ಮೂವರ ಹೆಸರನ್ನು ಮಾತ್ರ ಸೂಚಿಸಲು ತಿಳಿಸಲಾಗುವುದು' ಎಂದೂ ಹೇಳಿದರು.

'ಕಾಂಗ್ರೆಸ್‌ಗೆ ಕಾರ್ಯಕರ್ತರೇ ಮೂಲ ಆಧಾರ ಸ್ತಂಭ. ಅವರ ಅಭಿಪ್ರಾಯ ಪಡೆದೇ ಮುನ್ನಡೆಯುತ್ತೇವೆ. ಡಿ. 31ರೊಳಗೆ ಅವರು ಸಭೆ ನಡೆಸಿ, ಜನವರಿ 1ರಂದು ಪಟ್ಟಿ ನೀಡುತ್ತಾರೆ' ಎಂದರು.

'ಪಕ್ಷದ ಅಭ್ಯರ್ಥಿಗಳನ್ನು ಯಾರು ಬೇಕಾದರೂ, ಎಲ್ಲೆಂದರಲ್ಲಿ ಘೋಷಣೆ ಮಾಡಲು ಅವಕಾಶವಿಲ್ಲ. ಹಾಗೊಂದು ವೇಳೆ ಯಾರಾದರೂ ಘೋಷಣೆ ಮಾಡಿದರೆ ಅವರಿಗೆ ನೋಟಿಸ್ ನೀಡುತ್ತೇವೆ' ಎಂದೂ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು. 'ಸುವರ್ಣ ವಿಧಾನಸೌಧದಲ್ಲಿ ಸಾವರ್ಕರ್ ಭಾವಚಿತ್ರ ಹಾಕಿದ ಬಗ್ಗೆ ಗೊತ್ತಿಲ್ಲ. ನಾಳೆ ನೋಡಿ ಮಾತನಾಡುತ್ತೇನೆ' ಎಂದರು.

ಇದಕ್ಕೂ ಮುನ್ನ ವಿಧಾನಸಭೆ ಚುನಾವಣೆ ಅಭ್ಯರ್ಥಿಗಳ ಆಯ್ಕೆಗೆ ಅನುಸರಿಸಬೇಕಾದ ಮಾರ್ಗಸೂಚಿ ರೂಪುರೇಷೆಗಳ ಬಗ್ಗೆ ನಡೆದ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಈಶ್ವರ್ ಖಂಡ್ರೆ, ಸಲೀಮ್ ಅಹ್ಮದ್, ಸತೀಶ ಜಾರಕಿಹೊಳಿ, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಮಾಜಿ ಸಚಿವರಾದ ಎಚ್.ಕೆ. ಪಾಟೀಲ, ಕೆ.ಜೆ. ಜಾರ್ಜ್, ಎಚ್.ಸಿ. ಮಹದೇವಪ್ಪ ಸೇರಿ 41 ಶಾಸಕರು, ಮುಖಂಡರು ಭಾಗವಹಿಸಿದ್ದರು.

ನನಗೆ ಯಾವುದೇ ನೋಟಿಸ್ ಬಂದಿಲ್ಲ: ಶಾಮನೂರು

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನ ಮತ್ತು ಸಂಘಟನೆಗೆ ಕಡಿಮೆ ಕಾಲಾವಕಾಶ ಇದೆ ಎಂಬ ಕಾರಣಕ್ಕೆ ಇದೇ 23ರಿಂದ ದಾವಣಗೆರೆಯಲ್ಲಿ ಆಯೋಜಿಸಲಾಗಿದ್ದ ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾದ 18ನೇ ಮಹಾ ಅಧಿವೇಶನವನ್ನು ಮುಂದೂಡಲಾಗಿದ್ದು, ಫೆ.11ರಿಂದ ನಡೆಯಲಿದೆ. ನನಗೆ ಯಾವುದೇ ನೋಟಿಸ್ ಬಂದಿಲ್ಲ. ಯಾವ ಕೆಂಪಣ್ಣನೂ ಪರಿಚಯವಿಲ್ಲ' ಎಂದು ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿದರು.

ಮಹಾಸಭಾವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವ ಶಾಮನೂರು ಶಿವಶಂಕರಪ್ಪ, ಈಶ್ವರ ಖಂಡ್ರೆ, ಎನ್. ತಿಪ್ಪಣ್ಣ ಅವರನ್ನು ಪದಚ್ಯುತಗೊಳಿಸಬೇಕು. ಲಿಂಗಾಯತ ಪದ ಸೇರಿಸಿದ್ದಕ್ಕೆ ತಡೆ ನೀಡಬೇಕು ಎಂದು ಎಸ್.ಎಸ್. ಕೆಂಪಣ್ಣ ಬೆಂಗಳೂರು ಸಿಟಿ ಸೆಷನ್ಸ್ ನ್ಯಾಯಾಲಯವು ನೋಟಿಸ್ ನೀಡಲು ಆದೇಶಿಸಿದ್ದರ ಬಗ್ಗೆ ಭಾನುವಾರ ಸುದ್ದಿಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು.

ಹಿಂದೆ ಅಖಿಲ ಭಾರತ ವೀರಶೈವ ಮಹಾಸಭಾ ಎಂದು ಮಾತ್ರ ಇತ್ತು. ಸಮಾಜ ಮುಂದುವರಿಯಬೇಕು. ಒಗ್ಗಟ್ಟಿನಿಂದ ಇರಬೇಕು ಎಂಬ ಕಾರಣಕ್ಕಾಗಿ 2020ರಲ್ಲಿ ಮಹಾಸಭೆಯಲ್ಲಿ ನಿರ್ಣಯ ಕೈಗೊಂಡು ಲಿಂಗಾಯತ ಪದವನ್ನು ಸೇರಿಸಿ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಎಂದು ಮಾಡಲಾಗಿದೆ. ಕೇವಲ ಪ್ರಚಾರಕ್ಕಾಗಿ ಏನೇನೋ ಹೇಳುತ್ತಾರೆ' ಎಂದರು.

'ಲಿಂಗಾಯತ ಮಹಾಸಭಾ ಮಾಡಿಕೊಂಡಿರುವ ಜಾಮದಾರ್ ಈ ಮೊದಲು ಎಲ್ಲಿದ್ದರು? ಸಮಾಜಕ್ಕೆ ಅವರ ಕೊಡುಗೆ ಏನು? ಬೆಂಗಳೂರಿನಲ್ಲಿ ನಾವು ಜಮೀನು ಖರೀದಿಸಿಲ್ಲ. ಬಿ.ಡಿ.ಎ.ದಿಂದ ಬಾಪೂಜಿ ಆಸ್ಪತ್ರೆಗೆ ನೀಡಿದ ಜಮೀನು ಅದು. ಅದರ ಬಗ್ಗೆ ಇಲ್ಲಿಯವರೆಗೆ ಯಾಕೆ ಮಾತನಾಡಿಲ್ಲ' ಎಂದು ಅವರು ಪ್ರಶ್ನಿಸಿದರು.

ಪ್ರಜಾವಾಣಿ@75 & ವೀರಲೋಕ ಸಹಯೋಗದಲ್ಲಿ
ಅಮೃತ ಮಹೋತ್ಸವದ ಸಂಭ್ರಮದಲ್ಲಿ....
ಕಾವ್ಯ ಸಂಕ್ರಾಂತಿ 2023
ಕವನ ಸ್ಪರ್ಧೆಯ ಮೊದಲ ಬಹುಮಾನ
₹ 50,000
ಸಂಕ್ರಾಂತಿ ಕವಿತೆ ಸ್ಪರ್ಧೆಯ ಪ್ರವೇಶಗಳಿಗೆ ಇದೋ ಆಹ್ವಾನ
ಕನ್ನಡ ಸಾಹಿತ್ಯ ಲೋಕದಲ್ಲಿ ಅತ್ಯಂತ ದೊಡ್ಡ ಬಹುಮಾನದ ಕವನ ಸ್ಪರ್ಧೆ
ಸ್ಪರ್ಧೆಯ ನಿಯಮಗಳು
- ಸ್ಪರ್ಧೆಗೆ ಕಳುಹಿಸುವ ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ... ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು
- ಕವನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಇಲ್ಲವೆ ಯೂನಿಕೋಡ್‌ನಲ್ಲಿ ಇರಬೇಕು
- ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ-ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು
- ಪ್ರವೇಶಗಳ ಲಕೋಟೆಯ ಮೇಲೆ ಕಾವ್ಯ ಸಂಕ್ರಾಂತಿ ಸ್ಪರ್ಧೆಗಾಗಿ ಎಂದು ಸ್ಪಷ್ಟವಾಗಿ ನಮೂದಿಸಬೇಕು
- 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ.
- ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ
- ಬಹುಮಾನಿತ ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್' ಕಾಯ್ದಿರಿಸಿಕೊಂಡಿದೆ
- ಸಂಪಾದಕರ ತೀರ್ಮಾನವೇ ಅಂತಿಮ

ತೀರ್ಪುಗಾರರ ಮೆಚ್ಚುಗೆ ಪಡೆದ ಇತರ ಮೂರು ಕವಿತೆಗಳಿಗೆ ತಲಾ ₹5,000
ಇ- ಮೇಲ್: sankranthi@prajavani.co.in
ವಿಳಾಸ: ಸಂಪಾದಕರು, ಕಾವ್ಯ ಸಂಕ್ರಾಂತಿ ಸ್ಪರ್ಧೆ ವಿಭಾಗ, 'ಪ್ರಜಾವಾಣಿ', ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001
ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ: ಸಂಕ್ರಾಂತಿ ದಿನ ಜನವರಿ 15, 2023

'ಯಾರೂ ಷರತ್ತು ಹಾಕುವಂತಿಲ್ಲ'

ಹುಬ್ಬಳ್ಳಿ: 'ಪಕ್ಷದ ತೀರ್ಮಾನವೇ ಅಂತಿಮವಾಗಿದ್ದು, ಯಾರೂ ಷರತ್ತು ಹಾಕುವಂತಿಲ್ಲ. ಪಕ್ಷದ ಅಧ್ಯಕ್ಷನಾಗಿದ್ದರೂ ಎಲ್ಲಾ ವಿಷಯವನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾರ್ಯಾಧ್ಯಕ್ಷರು ಸೇರಿದಂತೆ ವಿವಿಧ ಪದಾಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಭಾನುವಾರ, 'ಬಸ್ ಯಾತ್ರೆಗೆ ಸಿದ್ದರಾಮಯ್ಯ ಅವರು ಷರತ್ತು ಹಾಕುತ್ತಾರಂತಲ್ಲ' ಎಂಬ ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

'ಬಸ್ ಯಾತ್ರೆಗೂ ಮುಂಚೆ ಡಿ. 30ರಂದು ಕೃಷ್ಣಾ ನದಿ ನೀರು ಹಂಚಿಕೆ ವಿಚಾರದ ಕುರಿತು ವಿಜಯಪುರದಲ್ಲಿ ಸಭೆ ಹಾಗೂ ಕಾರ್ಯಕ್ರಮ ರೂಪಿಸಲಾಗಿದೆ. ಮಹದಾಯಿ ವಿಚಾರ ಕುರಿತು ಜ. 2ರಂದು ಹುಬ್ಬಳ್ಳಿಯಲ್ಲಿ ಹಾಗೂ ಜ. 8ರಂದು ಎಸ್‌ಸಿ ಮತ್ತು ಎಸ್‌ಟಿ ಸಮುದಾಯಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಚಿತ್ರದುರ್ಗದಲ್ಲಿ ಸಭೆ ನಡೆಸಲಾಗುವುದು' ಎಂದರು.

'ಸಿದ್ದರಾಮಯ್ಯಗೆ ಬಾದಾಮಿ ಜನರಿಂದ ಹೆಲಿಕಾಪ್ಟರ್ ಕೊಡುಗೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಬಾದಾಮಿ ಕ್ಷೇತ್ರದ ಜನರು ಅಲ್ಲಿನ ಶಾಸಕರೂ ಆಗಿರುವ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಹೆಲಿಕಾಪ್ಟರ್ ಕೊಡುಗೆ ನೀಡಲಿದ್ದಾರೆ' ಎಂದು ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ತಿಳಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಅಲ್ಲಿ 60 ವರ್ಷಗಳಲ್ಲಿ ಆಗದಷ್ಟು ಅಭಿವೃದ್ಧಿ ಐದು ವರ್ಷದಲ್ಲಿ ನಡೆದಿದೆ. ಅದರಿಂದಾಗಿ ಸಿದ್ದರಾಮಯ್ಯ ಕ್ಷೇತ್ರದಲ್ಲೇ ಸ್ಪರ್ಧಿಸಬೇಕೆಂದು ಅಲ್ಲಿನ ಜನರು ಬಯಸಿದ್ದಾರೆ. ಶಾಸಕರು 15 ದಿನಕ್ಕೊಮ್ಮೆಯಾದರೂ ಕ್ಷೇತ್ರಕ್ಕೆ ಬರಬೇಕು. ಆದರೆ, ವಯಸ್ಸಿನ ಕಾರಣಕ್ಕೆ ಬರಲಾಗುತ್ತಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಹೀಗಾಗಿ, ಜನರೇ ಹೆಲಿಕಾಪ್ಟರ್ ಕೊಡಿಸಲು ತೀರ್ಮಾನಿಸಿದ್ದಾರೆ. ಇದಕ್ಕಾಗಿ ಹಣ ಸಂಗ್ರಹಿಸುತ್ತಿದ್ದಾರೆ' ಎಂದು ಹೇಳಿದರು.

'ನನ್ನ ಬೆಂಬಲಿಗರು, ಆಪ್ತರಾದ 24 ಮಂದಿಗೆ, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ನೀಡುವಂತೆ ಹೈಕಮಾಂಡ್‌ಗೆ ಮನವಿ ಮಾಡಿದ್ದೇನೆ. ಪಕ್ಷದಲ್ಲಿ ನಾನೂ ಪ್ರಬಲ ನಾಯಕ. ಆದರೆ, ಹೈಕಮಾಂಡ್ ನಿರ್ಧಾರಕ್ಕೆ ಬದ್ಧ' ಎಂದು ತಿಳಿಸಿದರು.

'ನಾನು ಸದ್ಯ ಚಾಮರಾಜಪೇಟೆ ಶಾಸಕ. ಹೈಕಮಾಂಡ್ ಹೇಳಿದರೆ ಮೈಸೂರಿನ ಎನ್.ಆರ್.ಕ್ಷೇತ್ರದಲ್ಲಿ ಸ್ಪರ್ಧೆ ಮಾಡಲೇಬೇಕು' ಎಂದು ಶಾಸಕ ತನ್ವೀರ್ ಸೇಠ್‌ಗೆ ಪರೋಕ್ಷವಾಗಿ ಟಾಂಗ್ ನೀಡಿದರು.

'ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮುಸ್ಲಿಮರ ಮೇಲೆ ಪ್ರೀತಿ ಇದ್ದರೆ ಸಿ.ಎಂ.ಇಬ್ರಾಹಿಂ ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಿ' ಎಂದು ಸವಾಲೆಸೆದ ಜಮೀರ್, 'ಜೆಡಿಎಸ್ 18ರಿಂದ 23 ಸೀಟು ಗೆಲ್ಲಬಹುದು' ಎಂದರು.

ಸದಾಶಿವ ಆಯೋಗದ ವರದಿ ವಿರುದ್ಧ ಪ್ರತಿಭಟನೆಗೆ ಸಹಮತವಿಲ್ಲ: ದಸಂಸ ಸ್ಪಷ್ಟನೆ

ಬೆಂಗಳೂರು: 'ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟವು ಶನಿವಾರ ಕೈಗೊಂಡ ನಿರ್ಣಯಗಳಿಗೂ ನಮಗೂ ಸಂಬಂಧವಿಲ್ಲ' ಎಂದು ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ಸ್ಪಷ್ಟಪಡಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಚಾಲನಾ ಸಮಿತಿಯ ಎನ್. ವೆಂಕಟೇಶ್, ಮಾವಳ್ಳಿ ಶಂಕರ್, ವಿ. ನಾಗರಾಜ್, ಇಂದೂಧರ ಹೊನ್ನಾಪುರ, 'ಒಕ್ಕೂಟದ ಆಹ್ವಾನದ ಮೇರೆಗೆ ಸಭೆಗೆ ಹೋಗಿದ್ದೆವು. ಅಲ್ಲಿ ಒಳ ಮೀಸಲಾತಿ ಕುರಿತ ನಮ್ಮ ಅಭಿಪ್ರಾಯ ಮಂಡಿಸಿದ್ದೇವೆ. ಡಿ. 6ರಂದು ನಾವು ಸಂಘಟಿಸಿದ್ದ ದಲಿತರ ಸಾಂಸ್ಕೃತಿಕ ಪ್ರತಿರೋಧ ಸಮಾವೇಶದಲ್ಲಿ ಒಳ ಮೀಸಲಾತಿ ಪರವಾಗಿ ತೆಗೆದುಕೊಂಡ ನಿರ್ಣಯಕ್ಕೆ ನಾವು ಬದ್ಧರಾಗಿದ್ದೇವೆ. ಹಿಂದುಳಿದ ವರ್ಗಗಳಲ್ಲಿ ಇರುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲೂ ಜನಸಂಖ್ಯೆಗೆ ಅನುಗುಣವಾಗಿ ಒಳಮೀಸಲಾತಿ ಜಾರಿಗೆ ತರಬೇಕು. ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಬಿಡುಗಡೆ ಮಾಡಿ, ಸಾರ್ವಜನಿಕ ಚರ್ಚೆಗೆ ಅವಕಾಶ ಮಾಡಿಕೊಟ್ಟು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು ಎಂಬುದು ನಮ್ಮ ನಿರ್ಣಯವಾಗಿದೆ' ಎಂದಿದ್ದಾರೆ.

'ಶನಿವಾರದ ಸಭೆಯಲ್ಲೂ ನಾವು ಒಳ ಮೀಸಲಾತಿ ಪರವಾಗಿರಲು ಮನವಿ ಮಾಡಿಕೊಂಡೆವು. ಪರಿಶಿಷ್ಟ ಜಾತಿಗಳಲ್ಲಿರುವ 101 ಜಾತಿಗಳು ಒಗ್ಗಟ್ಟಾಗಬೇಕು. ನಮ್ಮನ್ನು ಒಡೆದಾಳುವವರಿಗೆ ಒಗ್ಗಟ್ಟಿನ ಸಂದೇಶ ಕೊಡಬೇಕು. ಆ ಕಾರಣಕ್ಕಾಗಿ ಒಳಮೀಸಲಾತಿಯನ್ನು ಜಾರಿಗೊಳಿಸಲು ಒಕ್ಕೊರಲಿನಿಂದ ಆಗ್ರಹಿಸೋಣ ಎಂದು ಸಲಹೆ ನೀಡಿದೆವು. ಅಲ್ಲಿದ್ದ ಅನೇಕರು ನಮ್ಮ ಸಲಹೆಯನ್ನು ಒಪ್ಪಿದ್ದರು. ಬಳಿಕ ನಾವು ಸಭೆಯಿಂದ ನಿರ್ಗಮಿಸಿದ್ದೆವು. ಹಾಗಾಗಿ, ಅಲ್ಲಿ ತೆಗೆದುಕೊಂಡ ನಿರ್ಣಯಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ. ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟವು ಜ.10 ರಂದು ಪ್ರತಿಭಟನೆ ಹಮ್ಮಿಕೊಂಡಿರುವ ಬಗ್ಗೆ ವರದಿ ಪ್ರಕಟವಾಗಿದೆ. ಈ ಪ್ರತಿಭಟನಾ ನಿರ್ಧಾರ ಅನಗತ್ಯವಾಗಿದ್ದು, ಅದನ್ನು ಕೂಡಲೇ ಕೈ ಬಿಡಬೇಕೆಂದು ನಮ್ಮ ಸಮಿತಿಯು ಒಕ್ಕೂಟದವರಲ್ಲಿ ಮನವಿ ಮಾಡುತ್ತದೆ. ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಅದನ್ನು ಒಂದೆಡೆ ಸೇರಿ ಮಾತುಕತೆ ಮೂಲಕವೇ ಬಗೆಹರಿಸಿಕೊಳ್ಳಬಹುದು ಎಂಬ ಆಶಯವನ್ನು ನಮ್ಮ ಸಮಿತಿ ಹೊಂದಿದೆ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹುಲಿ ಸಾವು; ತಲೆ, ಕಾಲು ಹೊತ್ತೊಯ್ದ ಕಿಡಿಗೇಡಿಗಳು

ಧಾರವಾಡ: ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ವಿಭಾಗದ ಬರ್ಚಿ ಅರಣ್ಯ ವಲಯದಲ್ಲಿ ತಲೆ, ಹಾಗೂ ಕಾಲುಗಳ ಕತ್ತರಿಸಿದ ಸ್ಥಿತಿಯಲ್ಲಿ ಗಂಡು ಹುಲಿ ಶವ ಭಾನುವಾರ ಪತ್ತೆಯಾಗಿದೆ.

'ನಾನಾಕೇಸರೊಡ್ಡಾ ಗ್ರಾಮದ ಬಳಿ ಹುಲಿ ಕಳೇಬರ ಪತ್ತೆಯಾಗಿದ್ದು, ಸುಮಾರು 3 ರಿಂದ 4 ದಿನಗಳ ಹಿಂದೆ ಮೃತಪಟ್ಟಿರುವ ಸಾಧ್ಯತೆ ಇದೆ. ಹುಲಿ ಅಥವಾ ಇತರ ಪ್ರಾಣಿಯೊಂದಿಗಿನ ಕಾದಾಟದಲ್ಲಿ ಮೃತಪಟ್ಟಿರಬಹುದು ಎಂದು ಪಶು ವೈದ್ಯಾಧಿಕಾರಿಗಳು ಪರಿಶೀಲಿಸಿ ದೃಢಪಡಿಸಿದ್ದಾರೆ. ಆದರೆ ಕಿಡಿಗೇಡಿಗಳು ಮೃತ ಹುಲಿಯ ತಲೆ ಹಾಗೂ ನಾಲ್ಕು ಕಾಲುಗಳನ್ನು ಕತ್ತರಿಸಿದ್ದಾರೆ' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಿರ್ದೇಶನ ಹಾಗೂ ವನ್ಯಜೀವಿ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಲಾಗಿದೆ. ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ವಲಯ ಅರಣ್ಯಾಧಿಕಾರಿ ಬಾಲಚಂದ್ರ ತಿಳಿಸಿದರು.

ಸ್ಥಳೀಯರ ಪ್ರಕಾರ, 'ಈ ಹುಲಿ ಇತರೆ ಹುಲಿ ಅಥವಾ ಪ್ರಾಣಿಗಳೊಂದಿಗಿನ ಕಾದಾಟದಲ್ಲಿ ಮೃತಪಟ್ಟಿಲ್ಲ. 3-4 ದಿನಗಳ ಹಿಂದೆಯೇ ಬೇಟೆಗಾರರಿಂದ ಹತ್ಯೆಯಾಗಿದೆ. ಆದರೆ ಅರಣ್ಯಾಧಿಕಾರಿಗಳು ಮುಚ್ಚಿಡುತ್ತಿದ್ದಾರೆ' ಎಂದು ಸಂಶಯ ವ್ಯಕ್ತಪಡಿಸಿದ್ದಾರೆ.

'ಮತ್ತೊಂದು ಪಾಕಿಸ್ತಾನಕ್ಕೆ ಯತ್ನ'

ಮೈಸೂರು: 'ದೇಶದಲ್ಲಿ ಮತ್ತೊಂದು ಪಾಕಿಸ್ತಾನ ಸೃಷ್ಟಿಗೆ ಪ್ರಯತ್ನವಾಗುತ್ತಿದ್ದು, ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲೂ ಅಂತಹ ಕೆಲಸ ನಡೆಯುತ್ತಿದೆ' ಎಂದು ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಆರೋಪಿಸಿದರು.

ಇಲ್ಲಿನ ಬನ್ನಿಮಂಟಪ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ನಗರದ ಶಾಖೆಗಳ ಏಕತ್ರೀಕರಣ ಕಾರ್ಯಕ್ರಮದಲ್ಲಿ ಮಾತನಾಡಿದರು.

'ನರಸಿಂಹರಾಜ ಕ್ಷೇತ್ರದಲ್ಲಿ ಇಂದು ನರಸಿಂಹರಾಜ ಹೋಗಿದ್ದಾನೆ. ಟಿಪ್ಪು ರಾಜನಾಗಿದ್ದಾನೆ. ದೇವಸ್ಥಾನಗಳನ್ನು ನಾಶ ಮಾಡಿದ, ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ, ಹಿಂದೂ ವಿರೋಧಿಯಾಗಿದ್ದ ಟಿಪ್ಪುವನ್ನು ಹುಲಿ ಎಂದು ಕರೆಯುತ್ತಿದ್ದಾರೆ. ಆತನನ್ನು ರಾಜನನ್ನಾಗಿ ಮಾಡಲು ಹೊರಟಿದ್ದಾರೆ. ಇದು ಇಲ್ಲಿಗಷ್ಟೇ ಸೀಮಿತವಾದುದಲ್ಲ. ಇದೊಂದು ಚಿಂತನೆಯಾಗಿದ್ದು, ಇಂತಹ ಕೆಲಸಗಳು ದೇಶದ ಅಲ್ಲಲ್ಲಿ ನಡೆಯುತ್ತಿದೆ. ಮತಾಂತರವೆಂದರೆ ಚಿಂತನೆಯ ಬದಲಾವಣೆ ಮಾಡುವುದೇ ಆಗಿದೆ' ಎಂದು ದೂರಿದರು.

ಯಶಸ್ವಿನಿ ಯೋಜನೆ: ಚಿಕಿತ್ಸಾ ದರ ಹೆಚ್ಚಿಸಲು ಆಗ್ರಹ

ವಿಜಯಪುರ: 'ರಾಜ್ಯ ಸರ್ಕಾರ ಜನವರಿಯಿಂದ ಮರು ಜಾರಿಗೊಳಿಸಲು ಉದ್ದೇಶಿಸಿರುವ ಯಶಸ್ವಿನಿ ಯೋಜನೆಗೆ ನಿಗದಿ ಪಡಿಸಿರುವ ದರದಲ್ಲಿ ಯಾವ ಖಾಸಗಿ ಆಸ್ಪತ್ರೆಯಲ್ಲೂ ಶಸ್ತ್ರ ಚಿಕಿತ್ಸೆ ಮಾಡಲು ಸಾಧ್ಯವಿಲ್ಲ' ಎಂದು ಕರ್ನಾಟಕ ಖಾಸಗಿ ಆಸ್ಪತ್ರೆಗಳ ಸಂಘದ ಮಾಜಿ ಅಧ್ಯಕ್ಷ, ಯಶಸ್ವಿನಿ ಯೋಜನೆ ಮಾಜಿ ಸಂಸ್ಥಾಪಕ ಟ್ರಸ್ಟಿ ಡಾ.ಎಲ್.ಎಚ್.ಬಿದರಿ ತಿಳಿಸಿದರು.

'ಯಶಸ್ವಿನಿ ಯೋಜನೆಯನ್ನು ಮೊದಲಿನಂತೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಹಾಗೂ ಬಿಪಿಎಲ್ ಕುಟುಂಬಗಳಿಗೆ ಉನ್ನತ ಗುಣಮಟ್ಟದ ಚಿಕಿತ್ಸೆ ಒದಗಿಸಲು ವೈಜ್ಞಾನಿಕ ದರ ನಿಗದಿಪಡಿಸಬೇಕು' ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

'ಹಣದುಬ್ಬರ, ಹೆಚ್ಚುತ್ತಿರುವ ವೈದ್ಯಕೀಯ ವೆಚ್ಚ ಯಾವುದನ್ನೂ ಪರಿಗಣಿಸದೇ 2010ರಲ್ಲಿ ಯಶಸ್ವಿನಿ ಟ್ರಸ್ಟ್ ನಿಗದಿಪಡಿಸಿದ್ದ ದರದಲ್ಲೇ ಮರು ಪ್ರಾರಂಭ ಮಾಡುತ್ತಿರುವುದು ಅವೈಜ್ಞಾನಿಕ, ಅಸಮಂಜಸ' ಎಂದರು.

Karnataka Government Secretariat
Vidhana Soudha, Bangalore

No: FD / 05 / BMB / 2022 Dated : 15-12-2022

KARNATAKA GOVERNMENT STOCK (SECURITIES)

1. Aggregate Amount : **Total Rs.4000 crore (Rs. 2000 crore (10 Year Tenure) and Rs.2000 crore (12 Year Tenure)**
2. Method of Issue : By auction, through PDO, RBI, Mumbai (Fort)
3. Date of auction : **December 20, 2022**

Government of Karnataka invites subscription to the above securities. Copies of the Notification and Application forms may be obtained from PDO, RBI, Bangalore. Non - competitive bidding facility has been introduced by RBI to encourage participation of retail investors. The Government stock up to 10% of the notified amount of the sale will be allotted to eligible individuals and institutions. Sample Tender Forms and the revised scheme of Non - competitive bidding facility is available on the website **www.rbi.org.in**

Sd/-
Deputy Secretary (B&R)
Finance Department

DIPR/VCPL/3533/2022-23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು–570 023
ಸಂ./ಕಾಅ/ಪಂ.ರಾ.ಇಂ.ವಿ/ಮೈ/ಇ–ಪ್ರಕ್ಯೂರ್‌ಮೆಂಟ್/ಸ.ಇಂ.

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ ಸಂಖ್ಯೆ. 17/2022–23/ದಿ: 15.12.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಬೆಂಗಳೂರುರವರ ಸಹಯೋಗದೊಂದಿಗೆ, CPWD/ /KPWD/WRDO/PRED and any other Government Organisation ನಲ್ಲಿ ನೊಂದಾಯಿತರಾಗಿರುವ ಅಂದರೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಕಡ್ಡಾಯವಾಗಿ ಎನ್‌ರೋಲ್ ಮಾಡಿರುವ 1ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರ್ ನಮೂನೆ KW-4 ಪದ್ಧತಿಯಂತೆ 2022–23ನೇ ಸಾಲಿನ 5054 ಮಳೆ ಪರಿಹಾರ ಕಾರ್ಯಕ್ರಮ ಯೋಜನೆ ಅನುದಾನದಡಿ ಟೆಂಡರ್ ಆಹ್ವಾನಿಸಲಾಗಿದ್ದು, ಮೈಸೂರು ತಾಲ್ಲೂಕಿನಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಾಗಿದ್ದು, ಸದರಿ ಕಾಮಗಾರಿಗಳಲ್ಲಿ ಸಿ.ಸಿ. ರಸ್ತೆ ಮತ್ತು ಸಿ.ಸಿ. ಚರಂಡಿಗಳ ನಿರ್ಮಾಣ/ಅಭಿವೃದ್ಧಿ ಹಾಗೂ ಡಾಂಬರ್ ರಸ್ತೆ ಮತ್ತು ಇತರೆ ಕಾಮಗಾರಿಗಳಾಗಿರುತ್ತವೆ. ಸದರಿ ಕಾಮಗಾರಿಗಳ ಮೊತ್ತವು ರೂ.500.00 ಲಕ್ಷಗಳಾಗಿದ್ದು, ಒಟ್ಟು 06 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಕಾಮಗಾರಿಗಳ ಇ.ಎಂ.ಡಿ. ಮೊತ್ತವು ರೂ.7,50,000/–ಗಳಿಗೆ ಸಾಮಾನ್ಯ ವರ್ಗಕ್ಕೆ ಕಾಮಗಾರಿಗಳನ್ನು ಮೀಸಲಿರಿಸಿದೆ. ಇದರಂತೆ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿ: 19.12.2022 ರಿಂದ 27.12.2022 ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿ: 26.12.2022, 16.00 ಘಂಟೆಯಾಗಿದ್ದು, ಟೆಂಡರ್ ತೆರೆಯುವ ದಿ: 28.12.2022ರ ಸಂಜೆ 17.00 ಘಂಟೆಯ ನಂತರ ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://eprockarnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು, ಪಂ.ರಾ.ಇಂ.ವಿಭಾಗ, ಮೈಸೂರು
DIPR/DDMYS/MCA/787/2022-23

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
ಮುಖ್ಯ ಅಭಿಯಂತರರ ಕಛೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.	
ಸಂಖ್ಯೆ.: ಬೆಂಜಮಂ/ಮುಅ(ಯೋ)/ಅಮುಅ(ಕೇ.ಉ&ಡಿಸಿಡಬ್ಲ್ಯೂ)/ತಾಂಸ–2/ಸಅ/1104/2022–23	ದಿನಾಂಕ: 17.12.2022
ಮಲ್ಲೇಶ್ವರಂ, ಕೇಂದ್ರ ಉಗ್ರಾಣಕ್ಕೆ 3ನೇ ಪಾಲುದಾರ ಏಜೆನ್ಸಿಯಿಂದ ಪ್ರಮಾಣೀಕರಿಸಿದ ಪರೀಕ್ಷಾ ಪ್ರಮಾಣಪತ್ರದೊಂದಿಗೆ ತಾಪಮಾನ ಮಿತಿ–40°C ನಿಂದ 60°C, ಆಯಾಮದ ಹೊರಗಿನ ಡಯಾ ಶ್ರೇಣಿ 29 ಮಿಮೀ ನಿಂದ 32ಮಿಮೀ ಮೆದುಗೊಳವೆ ತೂಕ ಪ್ರತಿ ಮೀಟರ್‌ಗೆ 420 ಗ್ರಾಂ ನಿಂದ 500 ಗ್ರಾಂ. ಕೆಲಸದ ಒತ್ತಡವು 3000 ಪಿಎಸ್‌ಐ (210 ಬಾರ್) ಗಿಂತ ಕಡಿಮೆಯಾಗಬಾರದು, ಸ್ಫೋಟದ ಒತ್ತಡವು 7500ಪಿಎಸ್‌ಐ (525 ಬಾರ್) ಗಿಂತ ಕಡಿಮೆಯಾಗಬಾರದು, ಕನಿಷ್ಠ ಬೆಂಡ್ ತ್ರಿಜ್ಯ 100ಮಿಮೀ ನಿಂದ 127ಮಿಮೀ, ಪಾಲಿಯೆಥರ್–ಯುರೆಥೇನ್‌ನಿಂದ ಮುಚ್ಚಿದ ಸಿಂಥೆಟಿಕ್ ಫೈಬರ್ ಬಲಪಡಿಸುವ ವಸ್ತುಗಳ ಎರಡು ಬ್ರೈಡ್ಸ್, ಆಂತರಿಕ ಒಳಭಾಗಕ್ಕೆ ಪಾಲಿಯೆಸ್ಟರ್‌ನಿಂದ ನಿರ್ಮಿಸಲಾದ 19ಮಿಮೀ ಆಂತರಿಕ ಡಯಾ ಥರ್ಮೋಪ್ಲಾಸ್ಟಿಕ್ ಒಳಚರಂಡಿ ಮೆದುಗೊಳವೆ ಸರಬರಾಜು ಮಾಡುವುದು.	ರೂ. 1,45,63,560/– / ರೂ. 2,19,000/–
ಟೆಂಡರ್‌ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 02.01.2023 ರಂದು ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 04.01.2023 ರ ಸಂಜೆ 04.00 ಗಂಟೆಗೆ. ಸಹಿ/– ಮುಖ್ಯ ಅಭಿಯಂತರರು (ಯೋಜನೆ)	
ಪ್ರಧಾನ ಮುಖ್ಯ ಅಭಿಯಂತರರ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.	
ಸಂಖ್ಯೆ.: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪೂ)/ಉಮುಅ(ತ್ಯಾನೀನಿ)/5633/2022–23	ದಿನಾಂಕ: 17.12.2022
ಬೆಂಗಳೂರಿನ ಬೆಳ್ಳಂದೂರು ಅಮಾನಿಕೆರೆಯಲ್ಲಿ ಹಾಲಿಯಿರುವ 90ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ವಿನ್ಯಾಸ, ನಿರ್ಮಾಣ, ಉನ್ನತೀಕರಣ ಮತ್ತು ಪುನಃಶ್ಚೇತನ ಕಾಮಗಾರಿ.	ರೂ. 17.83 ಕೋಟಿಗಳು / ರೂ. 21.04 ಲಕ್ಷಗಳು
ಸಂಖ್ಯೆ.: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪೂ)/ಉಮುಅ(ತ್ಯಾನೀನಿ)/5635/2022–23	ದಿನಾಂಕ: 17.12.2022
ಬೆಂಗಳೂರಿನ ಕೆ&ಸಿ ವ್ಯಾಲಿಯಲ್ಲಿ ಹಾಲಿಯಿರುವ 60ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ವಿನ್ಯಾಸ, ನಿರ್ಮಾಣ, ಉನ್ನತೀಕರಣ ಮತ್ತು ಪುನಃಶ್ಚೇತನ ಕಾಮಗಾರಿ.	ರೂ. 12.25 ಕೋಟಿಗಳು / ರೂ. 14.47 ಲಕ್ಷಗಳು
ಟೆಂಡರ್‌ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 18.01.2023 ರಂದು ಸಂಜೆ 5.30 ಗಂಟೆಯವರೆಗೆ, ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 20.01.2023 ರ ಸಂಜೆ 04.00 ಗಂಟೆಗೆ.	
ಸಂಖ್ಯೆ.: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/5648/2022–23	ದಿನಾಂಕ: 17.12.2022
ಬೆಂಗಳೂರಿನ ನಾಯಂಡನಹಳ್ಳಿ ವಿ.ವಿ ವ್ಯಾಲಿಯಲ್ಲಿ ಹಾಲಿಯಿರುವ 180 ಎಂಎಲ್‌ಡಿ ಎಸ್‌ಟಿಪಿಯ ಬದಲಾಗಿ ಬಿಎನ್‌ಆರ್ ವ್ಯವಸ್ಥೆಯೊಂದಿಗೆ ಎಎಸ್‌ಪಿ ಪ್ರಕ್ರಿಯೆಯ ಆಧಾರದ ಮೇಲೆ ಹೊಸ 150 ಎಂಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿ ವಿನ್ಯಾಸ ಮತ್ತು ನಿರ್ಮಾಣ ಮತ್ತು ಐದು (5) ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ.	ರೂ. 192.05 ಕೋಟಿಗಳು / ರೂ. 226.62 ಲಕ್ಷಗಳು
ಸಂಖ್ಯೆ.: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/5646/2022–23	ದಿನಾಂಕ: 17.12.2022
ಟರ್ನ್‌ಕೀ ಒಪ್ಪಂದದ ಮೇಲೆ 1 ವರ್ಷದ ಅವಧಿಗೆ ದಿನದ ಎಲ್ಲಾ ಸಮಯದಲ್ಲಿ ಅಳವಡಿಸಲಾದ ಸಲಕರಣೆಗಳ ಸಣ್ಣ ಮತ್ತು ಪ್ರಮುಖ ರಿಪೇರಿಗಳನ್ನು ಒಳಗೊಂಡಂತೆ ಒಂದು (1) ವರ್ಷದ ದೋಷಗಳ ಹೊಣೆಗಾರಿಕೆ ಅವಧಿಯೊಂದಿಗೆ ರಾಜಕೆನಾಲ್ (ಹಂತ–II) ನಲ್ಲಿ ಹಾಲಿಯಿರುವ 40 ಎಂಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿಯ ಉನ್ನತೀಕರಣ ವಿನ್ಯಾಸ ಮತ್ತು ನಿರ್ಮಾಣ. ಕಾಮಗಾರಿ.	ರೂ. 673.05 ಲಕ್ಷಗಳು / ರೂ. 11.92 ಲಕ್ಷಗಳು
ಟೆಂಡರ್‌ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 17.01.2023 ರಂದು ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 19.01.2023 ರ ಸಂಜೆ 04.00 ಗಂಟೆಗೆ. ಸಹಿ/– ಪ್ರಧಾನ ಮುಖ್ಯ ಅಭಿಯಂತರರು	

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/3587/Zen/2022-23

ಅನುಭವದ ಕಲಿಕೆಯ ವಿಜ್ಞಾನ ಮೇಳ

ವಿಜ್ಞಾನ ಮೇಳದಲ್ಲಿ ಪ್ರಯೋಗಗಳನ್ನು ವಿವರಿಸುತ್ತಿರುವ ವಿದ್ಯಾರ್ಥಿಗಳು

ಎ.ಎಂ.ಸುರೇಶ

> ವಿಜ್ಞಾನ ಮತ್ತು ವೈಜ್ಞಾನಿಕ ಪ್ರಯೋಗಗಳ ಬಗ್ಗೆ ವಿದ್ಯಾರ್ಥಿಗಳನ್ನು ಚಿಂತನಶೀಲರನ್ನಾಗಿ ಮಾಡಿ, ಸ್ವಂತ ಅನುಭವದಿಂದಲೇ ಕಲಿಯುವಂತೆ ಉತ್ತೇಜನಗೊಳಿಸುವಲ್ಲಿ ವಿಜ್ಞಾನ ಮೇಳ ಯಶಸ್ವಿಯಾಯಿತು.

ಬೇರೆ ಬೇರೆ ಬಣ್ಣಗಳು ಮಿಶ್ರಣವಾದಾಗ ಅವುಗಳನ್ನು ಪ್ರತ್ಯೇಕಗೊಳಿಸುವುದು ಹೇಗೆ? ಬಾಳೆಹಣ್ಣಿನಲ್ಲಿ ಡಿಎನ್‌ಎ ಕಂಡು ಹಿಡಿಯುವುದು ಹೇಗೆ? ಆಪ್ಟಿಕಲ್ ಫೈಬರ್ ಮೂಲಕ ಸಾವಿರಾರು ಸಿಗ್ನಲ್‌ಗಳನ್ನು ಕಳುಹಿಸಬಹುದಾ, ಶೆಲ್ ಮೂಲಕ ಮೋಟಾರು ಚಾಲನೆ ಮಾಡಬಹುದಾ...

ಹೀಗೆ ಹಲವು ವೈಜ್ಞಾನಿಕ ವಿಷಯಗಳನ್ನು ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು ವಿವರಿಸುತ್ತಿದ್ದರೆ, ವಿದ್ಯಾರ್ಥಿಗಳು ಕುತೂಹಲದಿಂದ ಆಲಿಸಿದರು. ಅಷ್ಟೇ ಅಲ್ಲದೆ ಸ್ವಲ್ಪ ಸಮಯದ ಬಳಿಕ ಸ್ವತಃ ಪ್ರಯೋಗಗಳಲ್ಲಿ ತೊಡಗಿಕೊಳ್ಳುತ್ತಾ, ಸುತ್ತಲಿದ್ದವರನ್ನೆಲ್ಲ ನಿಬ್ಬೆರಗಾಗಿಸಿದರು.

ಇದು ಕಂಡು ಬಂದಿದ್ದು ಬೆಂಗಳೂರಿನ ಪಿಇಎಸ್ ವಿಶ್ವವಿದ್ಯಾಲಯವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಹಯೋಗದಲ್ಲಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗಾಗಿಯೇ ಮೊದಲ ಬಾರಿಗೆ ಆಯೋಜಿಸಿದ್ದ ಮೂರು ದಿನಗಳ ವಿಜ್ಞಾನ ಮೇಳದಲ್ಲಿ.

ಗಣಿತ, ಭೌತವಿಜ್ಞಾನ, ರಸಾಯನ ವಿಜ್ಞಾನ ಹಾಗೂ ಜೀವ ವಿಜ್ಞಾನಕ್ಕೆ ಸಂಬಂಧಿಸಿದ ಹಲವು ಪ್ರಯೋಗಗಳಿಗೆ ವಿಜ್ಞಾನ ಮೇಳವು ವೇದಿಕೆಯಾಯಿತು. ಬೆಂಗಳೂರು ದಕ್ಷಿಣ ಜಿಲ್ಲೆಯ 100 ಸರ್ಕಾರಿ ಶಾಲೆಗಳ 2,500ಕ್ಕೂ ಅಧಿಕ ವಿದ್ಯಾರ್ಥಿಗಳು ವಿಜ್ಞಾನದ ಮಾದರಿಗಳು, ಪ್ರಯೋಗಗಳಲ್ಲಿ ತೊಡಗುವ ಮೂಲಕ ವೈಜ್ಞಾನಿಕ ಕ್ಷೇತ್ರದಲ್ಲಿನ ಬೆಳವಣಿಗೆಗಳ ಬಗ್ಗೆ ಕುತೂಹಲದಿಂದ ತಿಳಿದುಕೊಂಡರು.

ಹತ್ತೊಂಬತ್ತು ಪ್ರಯೋಗಗಳು

ಶಾಲಾ ಪಠ್ಯಕ್ಕೆ ಪೂರಕವಾದ ಒಟ್ಟು 19 ಪ್ರಯೋಗಗಳಲ್ಲಿ ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಕೋವಿಡ್‌ನಿಂದಾಗಿ 2-3 ವರ್ಷಗಳಿಂದ ಮಕ್ಕಳು ಪ್ರಯೋಗಾಲಯಗಳತ್ತ ಬರುವುದೇ ಕಡಿಮೆಯಾಗಿತ್ತು. ಕೋವಿಡ್ ನಂತರದ ವಾತಾವರಣಕ್ಕೆ ಹೊಂದಿಕೊಳ್ಳುತ್ತಿರುವ ಮಕ್ಕಳನ್ನು ಪ್ರಯೋಗಾಲಯಗಳತ್ತ ಆಕರ್ಷಿಸಿ, ಪ್ರಾಯೋಗಿಕ ಚಟುವಟಿಕೆಗಳು ಹಾಗೂ ಪ್ರಯೋಗ ನಡೆಸಲು ಬೇಕಾದ ಕೌಶಲಗಳ ಬಗ್ಗೆ ಮನವರಿಕೆ ಮಾಡಿಕೊಡಲು ಈ ಮೇಳ ವೇದಿಕೆಯಾಯಿತು.

ನಿತ್ಯ ಜೀವನದಲ್ಲಿ ಯೋಗ, ಧ್ಯಾನದ ಮಹತ್ವವನ್ನು ತಿಳಿಸಿಕೊಡುವ ಉದ್ದೇಶದಿಂದ ಮೇಳದಲ್ಲಿ ಯೋಗಕ್ಕೂ ಅವಕಾಶ ಮಾಡಿಕೊಡಲಾಗಿತ್ತು. ಮನಸ್ಸು ಮತ್ತು ದೇಹ ಸಮತೋಲನದಿಂದ ಇರಬೇಕಾದರೆ ಯೋಗದ ಪಾತ್ರ ಎಷ್ಟು ಪ್ರಮುಖ ಎಂಬುದನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲಾಯಿತು. ವಿಜ್ಞಾನದ ಬೆಳವಣಿಗೆ, ವಿಜ್ಞಾನ ಕ್ಷೇತ್ರಕ್ಕೆ ಭಾರತೀಯರ ಕೊಡುಗೆ, ನೊಬೆಲ್ ಪ್ರಶಸ್ತಿಗಳ ಇತಿಹಾಸ, ಕೈಗಾರಿಕಾ ಕ್ರಾಂತಿ, ಆಧುನಿಕ ವಿಜ್ಞಾನದ ಪ್ರಕಾರಗಳು ಕುರಿತು ವಿಡಿಯೊ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಪ್ರದರ್ಶನದ ನಂತರ ನಡೆದ ಸಂವಾದದಲ್ಲಿ ವಿದ್ಯಾರ್ಥಿಗಳು ಕುತೂಹಲದಿಂದ ಪ್ರಶ್ನೆಗಳನ್ನು ಕೇಳಿ, ಉತ್ತರಗಳನ್ನು ಪಡೆದುಕೊಂಡರು.

ಸಾಮಾನ್ಯ ಜ್ಞಾನ ವಿಸ್ತರಿಸಿದ ಮೇಳ

ಮೇಳವು ವಿಜ್ಞಾನ ವಿಷಯದ ಪ್ರಾಯೋಗಿಕ ಕಲಿಕೆಯ ಜೊತೆಗೆ ಸಾಮಾನ್ಯ ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವಾಯಿತು. ರಸಪ್ರಶ್ನೆ ಸ್ಪರ್ಧೆಯು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಉತ್ತೇಜನ ನೀಡಿತ್ತು. 'ರಸಪ್ರಶ್ನೆ ಸ್ಪರ್ಧೆಯನ್ನು ಆನಂದಿಸಿದ್ದೇನೆ. ಮುಂದಿನ ಓದಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮೇಳದಲ್ಲಿ ಪಡೆದುಕೊಂಡಿದ್ದೇನೆ' ಎಂದು ಆಡುಗೋಡಿಯ ಕರ್ನಾಟಕ ಪಬ್ಲಿಕ್ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಪಿ.ನಯನಾ ತನ್ನ ಅನುಭವ ಹಂಚಿಕೊಂಡರು.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ ಸೂಕ್ತ ಮಾರ್ಗದರ್ಶನ ಮಾಡಿದರೆ, ಅವರಿಗೆ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದೇವೆ. ಪ್ರತಿ ವರ್ಷವೂ ಈ ರೀತಿಯ ಮೇಳ ಆಯೋಜಿಸುವ ಉದ್ದೇಶವಿದೆ ಎನ್ನುತ್ತಾರೆ ಮೇಳದ ಉಸ್ತುವಾರಿಯಾಗಿದ್ದ ಡಾ.ಎಸ್.ರಾಧಾಕೃಷ್ಣ.

> "ವಿಜ್ಞಾನ ಮೇಳವು ಸೃಜನಾತ್ಮಕ ಮತ್ತು ಮಾಹಿತಿಯುಕ್ತವಾಗಿತ್ತು. ವಿಜ್ಞಾನ ವಿಷಯವನ್ನು ಅಧ್ಯಯನ ಮಾಡಲು ಮೇಳವು ಸ್ಫೂರ್ತಿ ನೀಡಿದೆ. ವಿದ್ಯಾರ್ಥಿಗಳು ಹೊಸ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಂಡಿದ್ದಾರೆ."
>
> **ಅನುಪಮಾ, ಸರೋಜಾ,**
> ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ. ಆಡುಗೋಡಿ

> "ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳ ಬಗ್ಗೆ ಕುತೂಹಲ ಮೂಡಿಸುವಲ್ಲಿ ವಿಜ್ಞಾನ ಮೇಳವು ಯಶಸ್ವಿಯಾಗಿದೆ."
>
> **ಕಮಲಾ,**
> ಮುಖ್ಯಶಿಕ್ಷಕಿ, ಗೊಟ್ಟಿಗೆರೆ ಸರ್ಕಾರಿ ಶಾಲೆ

ಗ್ರಾಮೀಣ ಭಾಗದಿಂದ ಬಂದಿರುವ ವಿದ್ಯಾರ್ಥಿಗಳಿಗೆ ಸರ್ಕಾರಿ ಶಾಲೆಗಳಲ್ಲಿ ಇರಬಹುದಾದ ಕೊರತೆಗಳನ್ನು ಹೋಗಲಾಡಿಸಿ, ಸ್ವಂತ ಅನುಭವಗಳಿಂದ ಕಲಿಯಲು ಪ್ರೇರಣೆ ನೀಡುವ ನಿಟ್ಟಿನಲ್ಲಿ ಈ ಮೇಳ ಆಯೋಜಿಸಲಾಗಿತ್ತು. ಜೊತೆಗೆ, ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವವನ್ನು ಜಾಗೃತಗೊಳಿಸುವುದು, ಪ್ರಾಯೋಗಿಕ ಕಲಿಕೆ, ಉನ್ನತ ಶಿಕ್ಷಣ ಹಾಗೂ ಸಾಧನೆಗಳತ್ತ ಪ್ರೇರಣೆ ನೀಡುವುದು ಮೇಳದ ಉದ್ದೇಶವಾಗಿತ್ತು. ನಮ್ಮ ಈ ಎಲ್ಲ ನಿರೀಕ್ಷೆಗೂ ಮೀರಿ ಸ್ಪಂದನೆ ಸಿಕ್ಕಿದೆ ಎನ್ನುತ್ತಾರೆ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಂ.ಆರ್.ದೊರೆಸ್ವಾಮಿ.

ವಿಶ್ವವಿದ್ಯಾಲಯದ ಕುಲಪತಿ ಜೆ.ಸೂರ್ಯಪ್ರಸಾದ್, ಕುಲಸಚಿವ ಕೆ.ಎಸ್. ಶ್ರೀಧರ್ ಸೇರಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರು, ಶಿಕ್ಷಣ ಇಲಾಖೆಯ ಸಹಕಾರದಿಂದ ಮೇಳ ಯಶಸ್ವಿಯಾಗಿ ನಡೆಯಲು ಸಾಧ್ಯವಾಯಿತು ಎಂದು ದೊರೆಸ್ವಾಮಿ ಸಂತಸ ವ್ಯಕ್ತಪಡಿಸಿದರು.

ವಿಜ್ಞಾನ ಮೇಳದಲ್ಲಿ ಪ್ರಯೋಗಗಳನ್ನು ವೀಕ್ಷಿಸುತ್ತಿರುವ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಂ.ಆರ್.ದೊರೆಸ್ವಾಮಿ

ಇಇಇ ಎಂಜಿನಿಯರಿಂಗ್ ಪದವಿ ಹೇಗಿರುತ್ತದೆ ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (ಇಇಇ) ಆಯ್ಕೆ ಮಾಡಿದ್ದೇನೆ. ಇದರ ಬಗ್ಗೆ ಮಾಹಿತಿ ಕೊಡಿ.

ಹೆಸರು, ಊರು ತಿಳಿಸಿಲ್ಲ.

ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಪದವಿಯ ನಂತರ ಎಲೆಕ್ಟ್ರಾನಿಕ್ಸ್ ಎಂಜಿನಿಯರ್, ಎಲೆಕ್ಟ್ರಿಕಲ್ ಎಂಜಿನಿಯರ್, ನೆಟ್‌ವರ್ಕ್ ಎಂಜಿನಿಯರ್, ಸಿಸ್ಟಮ್ ಡೆವಲಪರ್, ಇನ್ಸ್ಟ್ರುಮೆಂಟಲ್ ಎಂಜಿನಿಯರ್ ಇತ್ಯಾದಿ ಹುದ್ದೆಗಳನ್ನು ಟೆಲಿಕಾಮ್, ಐಟಿ, ಪವರ್, ಟ್ರಾನ್ಸ್‌ಪೋರ್ಟ್, ಏರ್‌ಸ್ಪೇಸ್, ಮೆಟಲ್ಸ್ ಇತ್ಯಾದಿ ಕ್ಷೇತ್ರಗಳಲ್ಲಿ ಅರಸಬಹುದು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ:

https://www.sarvgyan.com/courses/engineering/electrical-electronics-engineering

2. ನಾನು ಬಿ.ಎಸ್ಸಿ (ನರ್ಸಿಂಗ್) ಮುಗಿಸಿ ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ಗೆ ನೋಂದಾಯಿಸಿಕೊಂಡಿದ್ದೇನೆ. ಈಗ ಡಿ.ಫಾರ್ಮಾ ಮಾಡುವ ಆಸೆ ಇದೆ. ಡಿ.ಫಾರ್ಮಾ ಮಾಡಿದರೆ ಕರ್ನಾಟಕ ನರ್ಸಿಂಗ್ ಕೌನ್ಸಿಲ್ ನೋಂದಣಿ ರದ್ದಾಗುತ್ತದೆಯೇ?

ಹೆಸರು, ಊರು ತಿಳಿಸಿಲ್ಲ.

ನೀವು ಪರಿಶೀಲಿಸುತ್ತಿರುವ ಎರಡೂ ವೃತ್ತಿಗಳು ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ್ದರೂ ವೃತ್ತಿಯ ಅವಕಾಶಗಳು ಮತ್ತು ಸವಾಲುಗಳು ವಿಭಿನ್ನವಾಗಿವೆ. ಹಾಗಾಗಿ, ನೀವು ವೃತ್ತಿಯೋಜನೆಯನ್ನು ಮಾಡಿದರೆ ಮುಂದಿನ ಹಾದಿ ಸ್ಪಷ್ಟವಾಗುತ್ತದೆ. ನೀವು ಡಿ.ಫಾರ್ಮಾ ಮಾಡಬಹುದು; ನಮಗಿರುವ ಮಾಹಿತಿಯಂತೆ ಡಿ.ಫಾರ್ಮಾ ಮಾಡುವುದರಿಂದ ನರ್ಸಿಂಗ್ ಕೌನ್ಸಿಲ್ ನೋಂದಣಿ ರದ್ದಾಗುವುದಿಲ್ಲ. ವೃತ್ತಿಯೋಜನೆ ಮಾಡುವ ಪ್ರಕ್ರಿಯೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/@ExpertCareerConsultantAuthor

3. ನಾನು ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಮಾಡಿ, ಹೈಡ್ರಾಲಿಕ್ಸ್ ಕ್ಷೇತ್ರದಲ್ಲಿ ಸಹಾಯಕ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. 16 ವರ್ಷದ ಅನುಭವವಿದೆ. ವೃತ್ತಿಗೆ ಅನುಕೂಲವಾಗುವ ಯಾವ ಕೋರ್ಸ್‌ಗಳನ್ನು ಮಾಡಬಹುದು?

ಸಿ.ಎನ್ ವಿನಯ್, ಊರು ತಿಳಿಸಿಲ್ಲ.

ಹೈಡ್ರಾಲಿಕ್ಸ್ ಕ್ಷೇತ್ರದಲ್ಲಿ ಸ್ಮಾರ್ಟ್ ಬಳಕೆದಾರ ಇಂಟರ್‌ಫೇಸ್‌ಗಳು, ಲೋಡ್ ಸೆನ್ಸಿಂಗ್ ವಾಲ್ವ್ ತಂತ್ರಜ್ಞಾನ, ಹೈಬ್ರಿಡ್ ಆಕ್ಟುಯೇಷನ್ ಸಿಸ್ಟಮ್ ಸೇರಿದಂತೆ ನೂತನ ಆವಿಷ್ಕಾರಗಳ ಬಳಕೆಯಾಗುತ್ತಿದೆ. ಹಾಗಾಗಿ, ನಿಮಗಿರುವ ಅನುಭವದ ಜೊತೆಗೆ ನೂತನ ತಂತ್ರಜ್ಞಾನದ ಅರಿವು, ಮಾನವ ಸಂಪನ್ಮೂಲದ ನಿರ್ವಹಣೆ, ಸಂವಹನ ಮತ್ತು ನಾಯಕತ್ವದ ಕೌಶಲಗಳ ನವೀಕರಣ ಮಾಡಿಕೊಳ್ಳುವುದು ಸೂಕ್ತ. ಹಾಗೂ ವೃತ್ತಿಯ ಕರ್ತವ್ಯ, ಜವಾಬ್ದಾರಿಗಳು, ವೃತ್ತಿಯಲ್ಲಿನ ಸವಾಲುಗಳು, ಅವಕಾಶಗಳನ್ನು ಗಮನಿಸಿ, ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಮೌಲ್ಯಮಾಪನ ಮಾಡಿದ ನಂತರ, ಯಾವ ಕೋರ್ಸ್‌ಗಳನ್ನು ಮಾಡಬೇಕು ಎಂದು ತಿಳಿಯುತ್ತದೆ. ಕೋರ್ಸ್‌ಗಳ ಮಾಹಿತಿಗಾಗಿ ಗಮನಿಸಿ:

https://www.udemy.com/topic/hydraulics/

4. ನಾನು ಪದವಿ ಪೂರೈಸಿ, ಈ ವರ್ಷ ಬಿ.ಇಡಿ ಮಾಡಬೇಕೆಂದುಕೊಂಡಿದ್ದೇನೆ. ಜೊತೆಗೆ, ಎಂ.ಎ ಕೂಡ ಮಾಡಬೇಕೆಂದುಕೊಂಡಿದ್ದೇನೆ. ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ, ಎರಡು ಪದವಿಗಳನ್ನು ಒಟ್ಟಿಗೆ ಮಾಡಿದರೆ, ಮುಂದೆ ಸರ್ಕಾರಿ ನೇಮಕಾತಿಗಳ (ಶಿಕ್ಷಕ, ಉಪನ್ಯಾಸಕ ಇತ್ಯಾದಿ) ದಾಖಲಾತಿ ಪರಿಶೀಲನೆಯಲ್ಲಿ ಯಾವುದೇ ತೊಂದರೆ ಆಗುವುದಿಲ್ಲವೇ?

ನಾಗರಾಜ, ಊರು ತಿಳಿಸಿಲ್ಲ.

ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ, ವಿಶ್ವವಿದ್ಯಾಲಯ ಅನುದಾನ ಆಯೋಗದ ನಿಯಮಾವಳಿ ಎರಡು ಪದವಿಗಳನ್ನು ಏಕಕಾಲದಲ್ಲಿ ಮಾಡುವ ಅವಕಾಶವನ್ನು ಕಲ್ಪಿಸಿದೆ. ಹಾಗಾಗಿ, ನಮ್ಮ ಅಭಿಪ್ರಾಯದಂತೆ, ಸರ್ಕಾರಿ ನೇಮಕಾತಿಯ ಪ್ರಕ್ರಿಯೆಯಲ್ಲಿ ತೊಂದರೆಯಾಗುವ ಸಾಧ್ಯತೆಯಿಲ್ಲ.

5. ಬಿ.ಎಸ್ಸಿ ಮುಗಿದು ಎರಡು ವರ್ಷಗಳಾಗಿದೆ. ಮಧ್ಯಂತರದಲ್ಲಿ, ಬೇರೆ ಕೆಲಸ ಮಾಡುತ್ತಿದ್ದು ಒಳ್ಳೆಯ ಕೆಲಸ ಸಿಗಲಿಲ್ಲ ಎಂಬ ಬೇಸರ ಕೂಡ ಇದೆ. ಈಗ ಬಿ.ಇಡಿ ಮಾಡಲು ಇಚ್ಛೆಸಿದ್ದೇನೆ. ಮನೆಯಲ್ಲೇ ಓದುವ ಅವಕಾಶ ಸಿಗುತ್ತದೆಯೇ? ಅದಕ್ಕೆ ಸಿದ್ದತೆ ಹೇಗೆ?

ಊರು, ಹೆಸರು ತಿಳಿಸಿಲ್ಲ.

ಒಳ್ಳೆಯ ಕೆಲಸ ಸಿಗದಿರುವ ಕಾರಣಗಳನ್ನು ಸ್ವಯಂ ಮೌಲ್ಯಮಾಪನದಿಂದ ಅರ್ಥಮಾಡಿಕೊಂಡು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಬಿ.ಇಡಿ ಕೋರ್ಸನ್ನು ದೂರ ಶಿಕ್ಷಣ/ಆನ್‌ಲೈನ್ ಮುಖಾಂತರ ಮಾಡಬಹುದು. ಆದರೆ, ನೀವು ಮಾಡುವ ಕೋರ್ಸ್‌ಗೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಮತ್ತು ರಾಷ್ಟ್ರೀಯ ಅಧ್ಯಾಪಕರ ಶಿಕ್ಷಣ ಪರಿಷತ್ (ಎನ್‌ಸಿಟಿಇ) ಮಾನ್ಯತೆ ಇರಬೇಕು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ:

https://www.ncte.gov.in/website/Index.aspx

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.netನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎಸ್ಸೆಸ್ಸೆಲ್ಸಿ

ಮಾದರಿ ಪ್ರಶ್ನೋತ್ತರ–

22) ಒಂದು ಕ್ರಿಕೆಟ್ ತಂಡದ ತರಬೇತುಗಾರ್ತಿ 3 ಬ್ಯಾಟ್‌ಗಳು ಮತ್ತು 6 ಚೆಂಡುಗಳನ್ನು ರೂ 3900ಕ್ಕೆ ಕೊಳ್ಳುತ್ತಾರೆ. ಬಳಿಕ ಅದೇ ರೀತಿಯ ಇನ್ನೊಂದು ಬ್ಯಾಟ್ ಮತ್ತು ಇನ್ನೂ 3 ಚೆಂಡುಗಳನ್ನು ರೂ 1300ಕ್ಕೆ ಕೊಳ್ಳುತ್ತಾರೆ. ಈ ಸಂದರ್ಭವನ್ನು ಬೀಜ ಗಣಿತೀಯವಾಗಿ ಮತ್ತು ರೇಖಾ ಗಣಿತೀಯವಾಗಿ ಪ್ರತಿನಿಧಿಸಿ

ಪರಿಹಾರ:– ಬ್ಯಾಟ್‌ನ ಬೆಲೆ x ಆಗಿರಲಿ

ಚೆಂಡಿನ ಬೆಲೆ 'Rs y' ಆಗಿರಲಿ

ಬೀಜ ಗಣಿತೀಯವಾಗಿ

$3x+6y = 3900$

ಮತ್ತು $x+3y = 1300$

$3x+6y = 3900$ಗೆ

ಅಥವಾ $x = (3900-6y)/3$

x	300	100	700
y	500	600	300

$x+3y = 1300$ ಗೆ

ಅಥವಾ $x = 1300-3y$

x	400	100	700
y	300	400	200

ರೇಖಾ ಗಣಿತೀಯವಾಗಿ



23. ಮೂರು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 6 ರಿಂದ ಭಾಗವಾಗುತ್ತದೆ ಎಂಬುದನ್ನು ಸಾಧಿಸಿ.

ಪರಿಹಾರ:– n, (n-1) ಮತ್ತು (n-2) ಗಳು ಮೂರು ಅನುಕ್ರಮ ಧನ ಪೂರ್ಣಾಂಕಗಳಾಗಿರಲಿ.

ಅವುಗಳ ಗುಣಲಬ್ಧವು $= n(n-1)(n-2)$

ಯಾವುದೇ ಧನ ಪೂರ್ಣಾಂಕವು ಈ ರೂಪದಲ್ಲಿದ್ದು 6q, 6q + 1, 6q + 2 ಇಲ್ಲಿ q ಒಂದು ಪೂರ್ಣಾಂಕ.

ಇಲ್ಲಿ n(n+1) (n-2) ಸಂಖ್ಯೆಯು 6 ರಿಂದ ಭಾಗಿಸಲ್ಪಡುತ್ತದೆ ಎಂಬುದನ್ನು ತೋರಿಸಬೇಕು.

ಪ್ರಕಾರ 1 : $n = 6q$ ಆಗಿರಲಿ

$\Rightarrow n(n-1)(n-2) = 6q(6q-1)(6q-2)$

$= 12q(6q-1)(3q-1)$ ಇದು 6ರಿಂದ ಭಾಗವಾಗುತ್ತದೆ.

ಪ್ರಕಾರ 2 : $n = 6q + 1$ ಆಗಿರಲಿ

$\Rightarrow n(n-1)(n-2) = (6q+1)(6q+1-1)(6q+1-2)$

$\Rightarrow 6q(6q+1)(6q-1)$ 6ರಿಂದ ಭಾಗಿಸಲ್ಪಡುತ್ತದೆ

ಪ್ರಕಾರ 3: $n = 6q + 2$ ಆಗಿರಲಿ

$\Rightarrow n(n-1)(n-2) = (6q+2)(6q+2-1)(6q+2-2)$

$= (6q)(6q+2)(6q+1)$

$= 6q \times 2(3q+1)(6q+1)$

$= 12q(3q+1)(6q+1)$

∴ n, (n-1) ಮತ್ತು (n-2) ಅನುಕ್ರಮ ಧನಪೂರ್ಣಾಂಕಗಳ ಗುಣಲಬ್ಧವು 6 ರಿಂದ ಭಾಗಿಸಲ್ಪಡುತ್ತದೆ.

24) ಒಂದು ಸಂಸ್ಥೆಯು 2001ನೇ ಇಸವಿಯಲ್ಲಿ 400 ಉದ್ಯೋಗಿಗಳನ್ನು ನೇಮಿಸಿಕೊಂಡಿತು ಮತ್ತು ಪ್ರತಿ ವರ್ಷವು ಉದ್ಯೋಗಿಗಳ ಸಂಖ್ಯೆಯನ್ನು 35 ಹೆಚ್ಚಿಸಿತು. ಯಾವ ವರ್ಷದಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿರುತ್ತದೆ.

ಉತ್ತರ:– ಮೊದಲ ವರ್ಷ (2001)ರಲ್ಲಿ 400 ಜನಗಳನ್ನು ನೇಮಿಸಿತು. ಒಂದೊಂದು ವರ್ಷವು 35 ಉದ್ಯೋಗಿಗಳ ಹೆಚ್ಚಳವಾಗಿದೆ. ಇದು ಸಮಾಂತರ ಶ್ರೇಢಿಯಲ್ಲಿದೆ.

$\therefore 400, 435, \ldots\ldots 785$

$a = 400,\ d = 35 \quad n = ?$

$T_n = a + (n-1)d$

$785 = 400 + (n-1)35$

$785 = 400 + 35n - 35$

$785 = 365 + 35n$

$35n = 785 - 365$

$35n = 420$

$n = \frac{420}{35},\ n = 12$

∴ ವರ್ಷ 2012ರಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿದೆ

25) ABC ಸಮದ್ವಿಬಾಹು ತ್ರಿಭುಜದಲ್ಲಿ $\angle C$ ಯು ಲಂಬಕೋನವಾಗಿದೆ $AB^2 = 2AC^2$ ಎಂದು ಸಾಧಿಸಿ.



ಪರಿಹಾರ:– ABC ಸಮದ್ವಿಬಾಹು ತ್ರಿಭುಜದಲ್ಲಿ C ಯು ಲಂಬಕೋನವಾಗಿದೆ (ದತ್ತ)

ΔACB ದಲ್ಲಿ, $\angle C = 90°$

$AC = BC$ (ಸಮದ್ವಿಬಾಹು ತ್ರಿಭುಜದ ಗುಣ ಲಕ್ಷಣ)

$AB^2 = AC^2 + BC^2$ [ಪೈಥಾಗೋರಸ್ ಪ್ರಮೇಯದಂತೆ]

$= AC^2 + AC^2$ [ಯಾಕೆಂದರೆ, $AC = BC$]

$AB^2 = 2AC^2$

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ವಿದ್ಯಾರ್ಥಿ ವೇತನ ಕೈಪಿಡಿ

ಕೋಟಕ್ ಕನ್ಯಾ ಸ್ಕಾಲರ್‌ಷಿಪ್

ಕೋಟಕ್ ಮಹೀಂದ್ರಾ ಗ್ರೂಪ್ ಕಂಪನಿಗಳ ಸಿಎಸ್‌ಆರ್ (ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ) ಯೋಜನೆಯಡಿಯಲ್ಲಿ, ಕೋಟಕ್ ಎಜುಕೇಶನ್ ಫೌಂಡೇಶನ್ 12ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿನಿಯರಿಗಾಗಿ 'ಕೋಟಕ್ ಕನ್ಯಾ ಸ್ಕಾಲರ್‌ಷಿಪ್-2022' ಕಾರ್ಯಕ್ರಮವನ್ನು ರೂಪಿಸಿದೆ.

ಆರ್ಥಿಕ ದುರ್ಬಲ ಕುಟುಂಬದ ಪ್ರತಿಭಾನ್ವಿತ ವಿದ್ಯಾರ್ಥಿನಿಯರು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಪದವಿ ಕೋರ್ಸ್‌ಗಳನ್ನು ಮುಂದುವರಿಸಲು ನೆರವಾಗುವುದು ಈ ವಿದ್ಯಾರ್ಥಿ ವೇತನ ಕಾರ್ಯಕ್ರಮದ ಉದ್ದೇಶವಾಗಿದೆ.

ಅರ್ಹತೆ: ಅರ್ಜಿದಾರರು 12ನೇ ತರತಿಯ ಪರೀಕ್ಷೆಗಳಲ್ಲಿ ಶೇ 75ಕ್ಕಿಂತ ಹೆಚ್ಚು ಅಂಕ ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 3,20,000 ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಈಗಾಗಲೇ ವೃತ್ತಿಪರ ಕೋರ್ಸ್‌ಗಳಲ್ಲಿ ಮೊದಲನೇ ವರ್ಷದ ಪದವಿ ಕಾರ್ಯಕ್ರಮಕ್ಕೆ ಪ್ರವೇಶ ಪಡೆದ ಪ್ರತಿಭಾವಂತ ವಿದ್ಯಾರ್ಥಿನಿಯರೂ ಅರ್ಜಿ ಸಲ್ಲಿಸಬಹುದು. ಎಂಬಿಬಿಎಸ್, ಬಿ.ಇ(ಆರ್ಕಿಟೆಕ್ಚರ್), ಡಿಸೈನ್, ಇಂಟಿಗ್ರೇಟೆಡ್ ಎಲ್‌ಎಲ್‌ಬಿ ಸೇರಿದಂತೆ ವೃತ್ತಿಪರ ಪದವಿ ಕೋರ್ಸ್‌ಗಳಲ್ಲಿರುವ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು.

ಆರ್ಥಿಕ ನೆರವು: ವಾರ್ಷಿಕ₹ 1.5 ಲಕ್ಷದ ವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನ: 31-12-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು

ಮಾಹಿತಿಗೆ: www.b4s.in/praja/KKGS12

ಮಾದರಿ ಪ್ರಶ್ನೋತ್ತರ

ರಸಾಯನ ವಿಜ್ಞಾನ

ಪಿಯುಸಿ

18) ಬಹು ಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಬರೆಯಿರಿ

1) ಮಣ್ಣಿನ ಸೂಕ್ಷ್ಮಾಣು ಜೀವಿಯಿಂದ ಪಡೆದ 'ಕ್ಲೋರಾಂಫಿನಿಕಾಲ್' ಎಂಬ ಜೀವನಿರೋಧಕ ....ದ ಚಿಕಿತ್ಸೆಗೆ ಅತ್ಯಂತ ಪರಿಣಾಮಕಾರಿಯಾಗಿದೆ

ಎ) ವಿಷಮಶೀತ ಜ್ವರ ಬಿ) ಏಡ್ಸ್

ಸಿ) ಕ್ಯಾನ್ಸರ್ ಡಿ) ನಾಯಿಕೆಮ್ಮು

ಉತ್ತರ:- (ಎ) ವಿಷಮಶೀತ ಜ್ವರ

2) 1873ರಲ್ಲಿ ಕ್ಲೋರಿನೀಕರಣಗೊಂಡ ಪ್ರಪ್ರಥಮ ಸಾವಯವ ಕೀಟನಾಶಕ ಡಿ.ಡಿ.ಟಿಯನ್ನು ತಯಾರಿಸಿದ್ದರೂ. ಅದರ ಪರಿಣಾಮಕಾರಿ ಕೀಟನಾಶಕತೆಯನ್ನು 1939ರಲ್ಲಿ ಸ್ವಿಟ್ಜರ್‌ಲೆಂಡ್‌ನ ಔಷಧಿತಯಾರಿಕಾ ಘಟಕದ ....ಕಂಡುಹಿಡಿದರು.

ಎ) ಗ್ರೆಗರ್ ಮೆಂಡಲ್ ಬಿ) ಸ್ಯಾಮ್ ಕುಕ್

ಸಿ) ಜಾನ್ ಕೆ ಗ್ರೆಗೇರಿಯನ್ , ಡಿ) ಪೌಲ್ ಮುಲ್ಲರ್

ಉತ್ತರ:- ಡಿ) ಪೌಲ್ ಮುಲ್ಲರ್

3) ನಮ್ಮ ದೇಹವು ಅಯೋಡಿನ್ ಯುಕ್ತ 'ಥೈರೋಕ್ಸಿನ್' ಎಂಬ ಹರ್ಮೋನ್‌ನ್ನು ಉತ್ಪತ್ತಿ ಮಾಡುತ್ತದೆ. ಇದರ ಕೊರತೆಯು .... ರೋಗವನ್ನು ಉಂಟು ಮಾಡುತ್ತದೆ.

ಎ) ಕೋವಿಡ್-19 .ಬಿ) ಗಾಯಿಟರ್

ಸಿ) ಮಂಡಿನೋವು ಡಿ) ಹೃದಯ ಕಾಯಿಲೆ

ಉತ್ತರ:- (ಬಿ) ಗಾಯಿಟರ್

4) ಒಂದೇ ಬಗೆಯ ಹ್ಯಾಲೋಜನ್‌ನ್ನು ಹೊಂದಿರುವ ಡೈ ಹ್ಯಾಲೋ ಸಂಯುಕ್ತಗಳನ್ನು ....ಗಳು (ಹ್ಯಾಲೋಜನ್ ಪರಮಾಣುಗಳು ಒಂದೇ ಕಾರ್ಬನ್‌ಗೆ ಬಂಧಿಸಿರುವ) ಮತ್ತು 'ವಿಸಿನಲ್ ಹ್ಯಾಲೈಡ್‌ಗಳು' (ಹ್ಯಾಲೋಜನ್ ಪರಮಾಣುಗಳು ಅಕ್ಕ ಪಕ್ಕದ ಕಾರ್ಬನ್‌ನೊಂದಿಗಿರುವ) ಎಂದು ವರ್ಗೀಕರಿಸಿದೆ.

ಎ) 'ಜೆಮಿನಲ್ ಹ್ಯಾಲೈಡ್' ಬಿ) ನೇಸಲ್ ಹ್ಯಾಲೈಡ್

ಸಿ) 'ಕೋರೋಕ್ವಿನ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ- (ಎ) 'ಜೆಮಿನಲ್ ಹ್ಯಾಲೈಡ್'

5) ಸಂಶ್ಲೇಷಿತ ಹ್ಯಾಲೋಜನ್ ಸಂಯುಕ್ತಗಳಾದ ....ನನ್ನು ಮಲೇರಿರಿಯಾದ ಚಿಕಿತ್ಸೆಯಲ್ಲಿಯೂ ಬಳಸುತ್ತಾರೆ

,ಎ) 'ಕೋರೋಕ್ವಿನ್' ಬಿ) ಆಕ್ಸಿಫಿರೊನ್

ಸಿ) 'ಹ್ಯಾಲೋಥೇನ್' ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) 'ಕೋರೋಕ್ವಿನ್'

19) ಯಾವುದನ್ನು ``ಸಾವಯವ ಲೋಹೀಯ ಸಂಯುಕ್ತಗಳು" ಎನ್ನುವರು?

ಉತ್ತರ:- ಬಹುತೇಕ ಸಾವಯವ ಕ್ಲೋರೈಡ್, ಬ್ರೋಮೈಡ್ ಮತ್ತು ಅಯೋಡೈಡ್‌ಗಳು ಕೆಲವು ಲೋಹಗಳೊಂದಿಗೆ ವರ್ತಿಸಿ ಕಾರ್ಬನ್- ಲೋಹೀಯ ಬಂಧಗಳಿರುವ ಸಂಯುಕ್ತಗಳನ್ನು ಉಂಟುಮಾಡುತ್ತವೆ. ಅವುಗಳನ್ನು "ಸಾವಯವ ಲೋಹೀಯ ಸಂಯುಕ್ತಗಳು" ಎನ್ನುವರು. ಹೆಚ್ಚಿನ ಮಾಹಿತಿ ಸಾವಯವ ಲೋಹೀಯ ಸಂಯುಕ್ತಗಳ ಪ್ರಮುಖ ವಿಧವಾದ ಆಲ್ಕೈಲ್ ಮೆಗ್ನೇಷಿಯಂ ಹ್ಯಾಲೈಡ್ (RMgX)ಅನ್ನು 1900ರಲ್ಲಿ ವಿಕ್ಟರ್ ಗ್ರಿಗ್ನಾರ್ಡ್ ಕಂಡು ಹಿಡಿದರು. ಅವುಗಳನ್ನು ಗ್ರಿಗ್ನಾರ್ಡ್ ಕಾರಕಗಳು ಎಂದು ಹೆಸರಿಸುತ್ತಾರೆ.

ಈ ಕಾರಕಗಳನ್ನು ಹ್ಯಾಲೋ ಆಲ್ಕೇನ್‌ಗಳು ಮೆಗ್ನೇಷಿಯಂ ಲೋಹದೊಂದಿಗೆ ಶುಷ್ಕ ಈಥರ್‌ನಲ್ಲಿ ವರ್ತಿಸಿ ಪಡೆಯುತ್ತಾರೆ.

20) ಯಾವ ರಾಸಾಯನಿಕ ಕ್ರಿಯೆಯನ್ನು ವುರ್ಟ್ಸ್ (wurtz) ಕ್ರಿಯೆ ಎನ್ನುವರು?

ಉತ್ತರ:- ಅಲ್ಕೈಲ್ ಹ್ಯಾಲೈಡ್‌ಗಳು ಶುಷ್ಕ ಈಥರ್‌ನಲ್ಲಿ ಸೋಡಿಯಂನೊಂದಿಗೆ ವರ್ತಿಸಿ, ಹ್ಯಾಲೈಡ್‌ಗಳಲ್ಲಿರುವ ಎರಡರಷ್ಟು ಸಂಖ್ಯೆಯ ಕಾರ್ಬನ್ಪ ರಮಾಣುಗಳುಳ್ಳ ಹೈಡ್ರೋಕಾರ್ಬನ್‌ಗಳನ್ನು ಉಂಟುಮಾಡುತ್ತದೆ. ಈ ರಾಸಾಯನಿಕ ಕ್ರಿಯೆಯನ್ನು ವುರ್ಟ್ಸ್ (wurtzz) ಕ್ರಿಯೆ ಎನ್ನುವರು.

ನಿಮಗಿದು ಗೊತ್ತಿರಲಿ

- ರಸಾಯನಶಾಸ್ತ್ರದ ಮೊದಲ ನೊಬೆಲ್ ಪಾರಿತೋಷಕವನ್ನು 1901ರಲ್ಲಿ ದ್ರಾವಣದ ಕುರಿತು ಮಾಡಿದಸಂಶೋಧನೆಗೆ ಜಕೋಬಸ್ ಹೆಂಡ್ರಿಯಸ್ ವಾಂಟ್ ಹಾಫ್ (1852- 1911) ನೀಡಲಾಯಿತು.

21) ವುರ್ಟ್ಸ ಫಿಟ್ಟಿಗ್ ರಾಸಾಯನಿಕ ಕ್ರಿಯೆ ಬಗ್ಗೆ ಬರೆಯಿರಿ

ಉತ್ತರ:- ಆಲ್ಕೈಲ್ ಮತ್ತು ಆರೈಲ್ ಹ್ಯಾಲೈಡುಗಳ ಒಂದು ಮಿಶ್ರಣವನ್ನು ಶುಷ್ಕ ಈಥರ್‌ನಲ್ಲಿ ಸೋಡಿಯಂನೊಂದಿಗೆ ವರ್ತಿಸಿದಾಗ ಆಲ್ಕೈಲ್ ಆರೀನ್‌ಗಳನ್ನು ಉಂಟುಮಾಡುತ್ತದೆ. ಇದನ್ನು ವುರ್ಟ್ಸ ಫಿಟ್ಟಿಗ್ ಕ್ರಿಯೆ ಎನ್ನುವರು.

22) ಯಾವುದನ್ನು "ಬಹುಹ್ಯಾಲೋಜನ್ ಸಂಯುಕ್ತಗಳು" ಎನ್ನುವರು?.

ಉತ್ತರ:- ಒಂದಕ್ಕಿಂತ ಹೆಚ್ಚು ಹ್ಯಾಲೋಜನ್ ಪರಮಾಣುಗಳನ್ನು ಹೊಂದಿರುವ ಕಾರ್ಬನ್‌ಸಂಯುಕ್ತಗಳನ್ನು "ಬಹುಹ್ಯಾಲೋಜನ್ ಸಂಯುಕ್ತಗಳು" ಎನ್ನುವರು ಇವುಗಳಲ್ಲಿ ಹೆಚ್ಚುನವು ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಉಪಯುಕ್ತವಾಗಿವೆ.

23) ಡೈಕ್ಲೊರೋ ಮಿಥೇನ್ (ಮಿಥಲೀನ್ ಕ್ಲೋರೈಡ್) ಎಲ್ಲೆಲ್ಲಿ ಬಳಸುತ್ತಾರೆ?

ಉತ್ತರ:- ಬಣ್ಣವನ್ನು ತೆಗೆಯಲು ವ್ಯಾಪಕವಾಗಿ ಡೈಕ್ಲೊರೋ ಮಿಥೇನ್‌ನ್ನು ದ್ರಾವಕವಾಗಿ ಉಪಯೋಗಿಸುತ್ತಾರೆ. ಏರೋಸೋಲ್‌ಗಳಲ್ಲಿ ನೋದನಾಕಾರಿಯಾಗಿ,ಡ್ರಗ್ಸ್ ತಯಾರಿಕೆಯಲ್ಲಿ ಪ್ರಕ್ರಿಯಾ ದ್ರಾವಕವಾಗಿ ಉಪಯೊಗಿಸುತ್ತಾರೆ. ಇದನ್ನು ಲೋಹಗಳನ್ನು ಸ್ವಚ್ಛಗೊಳಿಸುವ ದ್ರಾವಕವಾಗಿ ಬಳಸುತ್ತಾರೆ. .

ಪ್ರಜಾವಾಣಿ ನೋಡಿಯೊ

ಪಿಯುಸಿ ಗಣಿತ ವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಸ್ವದೇಶಿ ನಿರ್ಮಿತ ಕ್ಷಿಪಣಿ ನಾಶಕ ಯುದ್ಧನೌಕೆಯ ಬಲ

'ಐಎನ್‌ಎಸ್ ಮೊರ್ಮುಗಾವೋ' ಸಮರ್ಪಣೆ

ಸ್ವದೇಶಿ ನಿರ್ಮಿತ ಕ್ಷಿಪಣಿ ನಾಶಕ ಯುದ್ಧನೌಕೆ 'ಐಎನ್‌ಎಸ್ ಮೊರ್ಮುಗಾವೋ' ಭಾರತದ ನೌಕಾಪಡೆಗೆ ಭಾನುವಾರ ಸೇರ್ಪಡೆಯಾಗಿದೆ. 'ಪ್ರಾಜೆಕ್ಟ್ 15–ಬಿ' ಅಡಿಯಲ್ಲಿ, ಭಾರತೀಯ ನೌಕಾಪಡೆಯ ವಾರ್‌ಶಿಪ್ ಡಿಸೈನ್ ಬ್ಯೂರೊ ವಿನ್ಯಾಸ ಮಾಡಿರುವ ಕ್ಷಿಪಣಿನಾಶಕ ಯುದ್ಧನೌಕೆಗಳನ್ನು ನಿರ್ಮಿಸಲಾಗುತ್ತಿದೆ. ಈ ನೌಕೆಗಳು ಹೊಸ ವಿನ್ಯಾಸದ ಸುಧಾರಿತ ನಿಗಾ ವ್ಯವಸ್ಥೆ, ಸಮುದ್ರಯಾನ, ಗುಪ್ತ ವ್ಯವಸ್ಥೆ ಹೊಂದಿವೆ. ರಕ್ಷಣಾ ಕಾರ್ಯಾಚರಣೆ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸಲಾಗಿದ್ದು, ಶತ್ರುಪಡೆಗಳು ಈ ನೌಕೆಯನ್ನು ಪತ್ತೆಹಚ್ಚುವುದು ಸುಲಭವಲ್ಲ.

ಬಲಿಷ್ಠ ಬತ್ತಳಿಕೆ
- ಭೂಮಿಯಿಂದ ಭೂಮಿಗೆ ಉಡಾಯಿಸುವ ಬ್ರಹ್ಮೋಸ್ ಕ್ಷಿಪಣಿ ಅಳವಡಿಕೆ
- ದೀರ್ಘವ್ಯಾಪ್ತಿಯ, ಭೂಮಿಯಿಂದ ಆಗಸಕ್ಕೆ ಉಡಾಯಿಸುವ ಬರಾಕ್–8 ಕ್ಷಿಪಣಿ ಅಳವಡಿಕೆ

ಗೋವಾ–ನೌಕಾಪಡೆ ನಂಟು
ಗೋವಾ ವಿಮೋಚನೆಯಲ್ಲಿ ಮಹತ್ವದ ಪಾತ್ರವಹಿಸಿದ್ದ ನೌಕಾಪಡೆ ಹಾಗೂ ಗೋವಾ ಜನತೆ ನಡುವಿನ ನಂಟು ಸೂಚಿಸಲು ರಾಜ್ಯದ ಪ್ರಮುಖ ಬಂದರಿನ ಹೆಸರನ್ನು ನೌಕೆಗೆ ಇಡಲಾಗಿದೆ

ಸೇನಾ ಸಾಮರ್ಥ್ಯಗಳಿಗೆ ಬೇಡಿಕೆ ಹೆಚ್ಚುತ್ತಿದ್ದು, ಭಾರತವನ್ನು ಹಡಗು ನಿರ್ಮಾಣ ಕೇಂದ್ರವನ್ನಾಗಿ ಮಾಡಲಿದ್ದೇವೆ
ರಾಜನಾಥ್ ಸಿಂಗ್, ರಕ್ಷಣಾ ಸಚಿವ

7,300 ಟನ್ ತೂಕ | **17.4** ಮೀಟರ್ ಅಗಲ | **163** ಮೀಟರ್ ಉದ್ದ

- ಇದು ಪ್ರಾಜೆಕ್ಟ್15–ಬಿಯ (ವಿಶಾಖಪಟ್ಟಣಂ ಸರಣಿ) 2ನೇ ನೌಕೆ
- ಮುಂಬೈನ ಮಡಗಾಂವ್ ಹಡಗುಕಟ್ಟೆಯಲ್ಲಿ ತಯಾರು
- ಸ್ಥಳೀಯವಾಗಿ ಶೇ 75ರಷ್ಟು ನಿರ್ಮಾಣ; ಆತ್ಮನಿರ್ಭರದತ್ತ ಹೆಜ್ಜೆ

ಐಎನ್‌ಎಸ್ ಮೊರ್ಮುಗಾವೋ' ಆಧಾರ: ಪಿಟಿಐ

ಸಂಸತ್ ಚಳಿಗಾಲದ ಅಧಿವೇಶನ • ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳೇ ವಿಪಕ್ಷಗಳ ಅಸ್ತ್ರಗಳು

ಸರ್ಕಾರ ಇಕ್ಕಟ್ಟಿಗೆ ಸಿಲುಕಿಸಲು ಸಜ್ಜು

ಪ್ರಜಾವಾಣಿ ವಾರ್ತೆ

ನವದೆಹಲಿ: ಅಗತ್ಯ ವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ ಸೇರಿದಂತೆ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ರಾಜ್ಯಸಭೆಯಲ್ಲಿ ಕೇಂದ್ರ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಸಜ್ಜಾಗಿವೆ.

ಪ್ರಸಕ್ತ ಚಳಿಗಾಲದ ಅಧಿವೇಶನದ ಅಂಗವಾಗಿ ಸೋಮವಾರದಿಂದ ಎರಡು ದಿನ ಧನವಿನಿಯೋಗ ಮಸೂದೆ ಮೇಲೆ ಚರ್ಚೆ ನಡೆಯಲಿದೆ, ಈ ವೇಳೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಮುಗಿಬೀಳಲು ವಿಪಕ್ಷಗಳ ನಾಯಕರು ನಿರ್ಧರಿಸಿದ್ದಾರೆ.

ಸರ್ಕಾರವು, ಕ್ರಿಸ್‌ಮಸ್‌ಗೂ ಮುನ್ನವೇ ಅಧಿವೇಶನವನ್ನು ಮೊಟಕುಗೊಳಿಸುವ ಸಾಧ್ಯತೆ ಇದೆ. ಈ ಕಾರಣಕ್ಕೆ, ಸಂಸತ್‌ನ ಎರಡೂ ಸದನಗಳಲ್ಲಿ ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಿ, ಚರ್ಚೆ ನಡೆಸಲು ಸಮಯವೇ ಸಿಗುವುದಿಲ್ಲ. ಹೀಗಾಗಿ, ವಿಪಕ್ಷಗಳು ಈ ಎರಡು ದಿನಗಳ ಕಾಲ ಆಕ್ರಮಣಕಾರಿ ವಿಧಾನಕ್ಕೆ ಮೊರೆ ಹೋಗುವ ಸಾಧ್ಯತೆಗಳೇ ಹೆಚ್ಚು ಎಂದು ಮೂಲಗಳು ಹೇಳಿವೆ.

ಕಳೆದ ವಾರ ನಡೆದ ಕಲಾಪಗಳಲ್ಲಿ, ಚೀನಾ–ಭಾರತ ಸೈನಿಕರ ನಡುವಿನ ಸಂಘರ್ಷವೇ ಪ್ರತಿಧ್ವನಿಸಿತ್ತು. ಇದರಿಂದಾಗಿ, ಅಗತ್ಯ ವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ಆಹಾರ ಭದ್ರತೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆಗೆ ಅವಕಾಶವೇ ಸಿಕ್ಕಿರಲಿಲ್ಲ.

ಧನವಿನಿಯೋಗ ಮಸೂದೆ ಮೇಲಿನ ಚರ್ಚೆಗೆ ಸಂಬಂಧಿಸಿ ತಮ್ಮ ಕಾರ್ಯತಂತ್ರ ಹೇಗಿರಬೇಕು ಎಂಬ ಬಗ್ಗೆ ವಿರೋಧ ಪಕ್ಷಗಳ ನಡುವೆ ಈಗಾಗಲೇ ಔಪಚಾರಿಕ ಸಮಾಲೋಚನೆಗಳು ನಡೆದಿವೆ.

'ವಿರೋಧ ಪಕ್ಷಗಳು, ಅದರಲ್ಲೂ ನಮ್ಮ ಪಕ್ಷವು ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಯಲ್ಲದೇ, ನರೇಗಾದ ಅಸಮರ್ಪಕ ಅನುಷ್ಠಾನವನ್ನು ಪ್ರಸ್ತಾಪಿಸಲಿವೆ' ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಸಚೇತಕರಾಗಿರುವ ನಾಸಿರ್ ಹುಸೇನ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಚೀನಾ ಆಕ್ರಮಣ: ಪ್ರಧಾನಿ ಮೌನಕ್ಕೆ ಕಾಂಗ್ರೆಸ್ ತರಾಟೆ

ನವದೆಹಲಿ: ಗಡಿಯಲ್ಲಿ ಪದೇಪದೇ ಸಂಘರ್ಷ ನಡೆಸುತ್ತಿರುವ ಚೀನಾ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಮೌನ ಮುರಿಯಬೇಕು ಎಂದು ಕಾಂಗ್ರೆಸ್ ಭಾನುವಾರ ಆಗ್ರಹಿಸಿದೆ. ಅಲ್ಲದೆ, 'ಚೀನಾದ ಆಕ್ರಮಣ ಕುರಿತ ಚರ್ಚೆಯಿಂದ ಪಲಾಯನ ಮಾಡುತ್ತಿರುವ ದೇಶದ ಮೊದಲ ಪ್ರಧಾನಿ ಮೋದಿ' ಎಂದೂ ಟೀಕಿಸಿದೆ.

ಈ ವಿಷಯಕ್ಕೆ ಸಂಬಂಧಿಸಿ, 'ಚೀನ್ ಪರ್ ಚುಪಿ ತೋಡೋ, ಭಾರತ್ ಜೋಡೋ' (ಚೀನಾ ಕುರಿತು ಮೌನ ಮುರಿಯಿರಿ, ಭಾರತ ಒಗ್ಗೂಡಿಸಿ) ಎಂಬ ಹೊಸ ಘೋಷವಾಕ್ಯವನ್ನೂ ಕಾಂಗ್ರೆಸ್ ಹುಟ್ಟುಹಾಕಿದೆ.

'ಚೀನಾ ವಿಷಯದ ಕುರಿತು ಸಂಸದರು ಎತ್ತುವ ಪ್ರಶ್ನೆಗಳಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಾಗಲಿ ಅಥವಾ ವಿದೇಶಾಂಗ ಸಚಿವ ಎಸ್.ಜೈಶಂಕರ್ ಉತ್ತರಿಸಬಾರದು. ಈ ಕುರಿತು ಮೋದಿ ಅವರೇ ಉತ್ತರಿಸಬೇಕು' ಎಂಬುದು ಕಾಂಗ್ರೆಸ್‌ನ ಆಗ್ರಹ. 'ವೀರ ಸೇನಾ, ಕಾಯರ್ ರಾಜಾ' (ವೀರ ಸೇನೆ, ಹೇಡಿ ರಾಜ) ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಟೀಕಿಸಿದ್ದಾರೆ.

ಮಹಾರಾಷ್ಟ್ರ ಸಿಎಂ ಶಿಂದೆ, ಡಿಸಿಎಂ ಫಡಣವೀಸ್ ಹೇಳಿಕೆ • ಇಂದಿನಿಂದ ನಾಗ್ಪುರದಲ್ಲಿ ಅಧಿವೇಶನ

'ಪ್ರಚೋದನೆ: ಗುಪ್ತಚರ ವರದಿ ಬಹಿರಂಗ'

ಪ್ರಜಾವಾಣಿ ವಾರ್ತೆ

ಮುಂಬೈ: 'ಗಡಿ ವಿವಾದ ಹಿನ್ನೆಲೆಯಲ್ಲಿ, ನೆರೆಯ ರಾಜ್ಯಗಳಿಗೆ ಸೇರ್ಪಡೆಗೊಳಿಸಬೇಕು ಎಂಬ ಬೇಡಿಕೆ ಮುಂದಿಡುವಂತೆ ಕೆಲ ಗ್ರಾಮಗಳ ಜನರಿಗೆ ಪ್ರಚೋದನೆ ನೀಡುತ್ತಿದ್ದವರ ಬಗ್ಗೆ ತನ್ನ ಬಳಿ ಗುಪ್ತಚರ ಇಲಾಖೆ ನೀಡಿರುವ ಮಾಹಿತಿ ಇದೆ' ಎಂದು ಮಹಾರಾಷ್ಟ್ರ ಸರ್ಕಾರ ಹೇಳಿದೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ಗುಪ್ತಚರ ಇಲಾಖೆಯ ಈ ವರದಿಯನ್ನು ಶೀಘ್ರವೇ ಬಹಿರಂಗ ಮಾಡುತ್ತೇವೆ' ಎಂದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ನಡೆದ ಸಭೆಯು ಕರ್ನಾಟಕ ಮತ್ತು ಮಹಾರಾಷ್ಟ್ರಗಳ ನಡುವಿನ ಗಡಿ ವಿವಾದವನ್ನು ಬಗೆಹರಿಸುವ ನಿಟ್ಟಿನಲ್ಲಿನ ಪ್ರಮುಖ ಹೆಜ್ಜೆಯಾಗಿದೆ' ಎಂದರು.

'ಕರ್ನಾಟಕದಲ್ಲಿರುವ ಮರಾಠಿ ಭಾಷಿಕರ ಬೆನ್ನಿಗೆ ರಾಜ್ಯ ಸರ್ಕಾರ ದೃಢವಾಗಿ ನಿಲ್ಲಲಿದೆ' ಎಂದು ಶಿಂದೆ ಹೇಳಿದರು.

'ಗಡಿ ವಿವಾದಕ್ಕೆ ಸಂಬಂಧಿಸಿ ಹರಿದಾಡಿರುವ ಟ್ವೀಟ್‌ಗಳು ತಾವು ಮಾಡಿದ್ದಲ್ಲ ಎಂಬುದಾಗಿ ಶಾ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಮುಖ್ಯಮಂತ್ರಿ ಬೊಮ್ಮಾಯಿ ಸ್ಪಷ್ಟವಾಗಿ ಹೇಳಿದರು' ಎಂದು ಪ್ರಶ್ನೆಯೊಂದಕ್ಕೆ ಶಿಂದೆ ಉತ್ತರಿಸಿದರು.

ನಾಗ್ಪುರದಲ್ಲಿ ಸೋಮವಾರ ವಿಧಾನ ಮಂಡಲದ ಅಧಿವೇಶನ ಆರಂಭವಾಗಲಿದೆ. ಗಡಿ ವಿವಾದ ಸೇರಿದಂತೆ ಹಲವು ವಿಷಯಗಳನ್ನು ಮುಂದಿಟ್ಟುಕೊಂಡು ಮಹಾ ವಿಕಾಸ್ ಆಘಾಡಿ (ಎಂವಿಎ) ಮೈತ್ರಿಕೂಟ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಶಿಂದೆ ಹಾಗೂ ಫಡಣವೀಸ್ ಹೇಳಿಕೆಗಳಿಗೆ ಮಹತ್ವ ಬಂದಿದೆ.

'ಎಂಇಎಸ್ ಪುಂಡಾಟಿಕೆ ನಿಯಂತ್ರಿಸುವುದು ಗೊತ್ತಿದೆ'

ಹುಬ್ಬಳ್ಳಿ: 'ಎಂಇಎಸ್ ಕಳೆದ ಐವತ್ತು ವರ್ಷಗಳಿಂದ ಪುಂಡಾಟಿಕೆಯಲ್ಲಿ ತೊಡಗಿದ್ದು, ಅದನ್ನು ಹೇಗೆ ನಿಯಂತ್ರಿಸಬೇಕು ಎಂಬುದು ಸರ್ಕಾರಕ್ಕೆ ಗೊತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಂಇಎಸ್ ಪುಂಡಾಟಿಕೆಯನ್ನು ಸರ್ಕಾರ ಹದ್ದುಬಸ್ತಿನಲ್ಲಿಡಲಿದೆ' ಎಂದರು.

ಧೈರ್ಯಶೀಲ ಮಾನೆ ಬೆಳಗಾವಿ ಪ್ರವೇಶ ನಿಷೇಧ

ಬೆಳಗಾವಿ: ಮಹಾರಾಷ್ಟ್ರ ಗಡಿ ಸಲಹಾ ಸಮಿತಿ ಅಧ್ಯಕ್ಷ, ಸಂಸದ ಧೈರ್ಯಶೀಲ ಮಾನೆ ಅವರು ಜಿಲ್ಲೆ ಪ್ರವೇಶಿಸದಂತೆ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಭಾನುವಾರ ನಿಷೇಧಾಜ್ಞೆ ಹೊರಡಿಸಿದ್ದಾರೆ.

ಡಿ.19ರಿಂದ ಬೆಳಗಾವಿಯಲ್ಲಿ ವಿಧಾನ ಮಂಡಲ ಅಧಿವೇಶನ ನಡೆಯಲಿದೆ. ಇದೇ ದಿನ ಮಧ್ಯವರ್ತಿ ಮಹಾರಾಷ್ಟ್ರ ಏಕೀಕರಣ ಸಮಿತಿಯು ಮಹಾ ಮೇಳಾವ್ ಆಯೋಜಿಸಿದೆ. ಈ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು, ಜನರ ಆಸ್ತಿ–ಪಾಸ್ತಿ–ಪ್ರಾಣ ಹಾನಿ ತಪ್ಪಿಸುವ ಉದ್ದೇಶದಿಂದ ಸಿಆರ್‌ಪಿಸಿ ಕಲಂ 144 (3) ಅನ್ವಯ ನಿಷೇಧ ಹೇರಿದ್ದಾರೆ.

ಡಿ.6ರಂದು ಕೂಡ ಧೈರ್ಯಶೀಲ ಮಾನೆ, ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರಾದ ಚಂದ್ರಕಾಂತ ಪಾಟೀಲ, ರಾಜೇಸಾಬ್ ದೇಸಾಯಿ ಅವರ ಪ್ರವೇಶ ನಿಷೇಧಿಸಲಾಗಿತ್ತು.

ಮೇಳಾವ್ ಮಾಡಿಯೇ ಸಿದ್ಧ: 'ಮರಾಠಿಗರ ಮಹಾ ಮೇಳಾವ್ ವಿಫಲಗೊಳಿಸಲು ಜಿಲ್ಲಾಡಳಿತ ಪ್ರಯತ್ನಿಸುತ್ತಿದೆ. ಮಹಾರಾಷ್ಟ್ರದಿಂದ ಯಾರೂ ಬರದಂತೆ ತಡೆಯುತ್ತಿದೆ. ಏನೇ ಕಸರತ್ತು ಮಾಡಿದರೂ ಸಮಾವೇಶ ಮಾಡುತ್ತೇವೆ. ನಮ್ಮ ಹಕ್ಕಿಗೆ ಹೋರಾಡುವುದು ತಪ್ಪಲ್ಲ' ಎಂದು ಎಂಇಎಸ್ ಮುಖಂಡರು ಪ್ರತಿಕ್ರಿಯೆ ನೀಡಿದ್ದಾರೆ.

ಅಧಿವೇಶನ: ಗಡಿ ವಿವಾದ, ಕೋಶಿಯಾರಿ ಹೇಳಿಕೆ ಚರ್ಚೆ?

ಮುಂಬೈ(ಪಿಟಿಐ) : ಸೋಮವಾರದಿಂದ (ಡಿ. 19) ನಾಗ್ಪುರದಲ್ಲಿ ಆರಂಭವಾಗಲಿರುವ ಮಹಾರಾಷ್ಟ್ರ ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ಶಿವಾಜಿ ಮಹಾರಾಜರ ಕುರಿತು ರಾಜ್ಯಪಾಲ ಬಿ.ಎಸ್. ಕೋಶಿಯಾರಿ ಅವರ ಹೇಳಿಕೆ ಹಾಗೂ ಕರ್ನಾಟಕ–ಮಹಾರಾಷ್ಟ್ರದ ಗಡಿವಿವಾದವು ಪ್ರಾಬಲ್ಯ ಸಾಧಿಸುವ ನಿರೀಕ್ಷೆ ಇದೆ.

ಫಾಕ್ಸ್‌ಕಾನ್‌ನಂಥ ಮೆಗಾ ಯೋಜನೆಗಳು ಗುಜರಾತ್‌ಗೆ ಸ್ಥಳಾಂತರವಾಗಿದ್ದರ ಕುರಿತು ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಸರ್ಕಾರವನ್ನು ವಿಪಕ್ಷಗಳು ಇಕ್ಕಟ್ಟಿಗೆ ಸಿಲುಕಿಸುವ ನಿರೀಕ್ಷೆ ಇದೆ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಶಿವಾಜಿ ಮಹಾರಾಜರು 'ಹಿಂದಿನ ವೀರ' ಎಂದು ಕೋಶಿಯಾರಿ ಅವರು ನೀಡಿದ್ದ ಹೇಳಿಕೆಯು ಟೀಕೆಗೆ ಕಾರಣವಾಗಿತ್ತು. ಇದರ ನಡುವೆಯೇ ಬಿಜೆಪಿಯ ವಕ್ತಾರ ಸುಧಾಂಶು ತ್ರಿವೇದಿ ಅವರ 'ಮರಾಠರ ರಾಜ, ಮೊಘಲ್ ದೊರೆಗಳಿಂದ ಕ್ಷಮೆಯನ್ನು ಕೇಳಿದ್ದ' ಎನ್ನುವ ಹೇಳಿಕೆಯೂ ವಿವಾದಕ್ಕೀಡಾಗಿತ್ತು. ಈ ಹೇಳಿಕೆಗಳನ್ನು ವಿರೋಧಿಸಿ ಮಹಾ ವಿಕಾಸ್ ಅಘಾಡಿ (ಎಂವಿಎ), ಶಿವಸೇನಾ (ಉದ್ಧವ್ ಠಾಕ್ರೆ ಬಣ), ಎನ್‌ಸಿಪಿ, ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಒಟ್ಟಾಗಿ ಪ್ರತಿಭಟನೆ ನಡೆಸಿವೆ.

ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿವಿವಾದವು ಮುನ್ನೆಲೆಗೆ ಬಂದಿದ್ದು, ಗಡಿ ವಿವಾದಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಚಳಿಗಾಲದ ಅಧಿವೇಶನದಲ್ಲಿ ಅಂಗೀಕರಿಸಲಾಗುವುದು ಎಂದು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ. ಅದಕ್ಕೂ ಮುನ್ನ ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ನಡೆಸಿರುವ ಮಾತುಕತೆಯನ್ನು ಸಾರ್ವಜನಿಕಗೊಳಿಸಬೇಕು ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಅಜಿತ್ ಪವಾರ್ ಒತ್ತಾಯಿಸಿದ್ದಾರೆ.

ಚಳಿಗಾಲದ ಅಧಿವೇಶನವು ಡಿ. 30ರ ವರೆಗೆ ನಡೆಯಲಿದ್ದು, 11 ಮಸೂದೆಗಳು ಮಂಡನೆಯಾಗುವ ನಿರೀಕ್ಷೆ ಇದೆ.

ಸಂಸತ್ತಿನಲ್ಲಿ ಪರಿಹಾರ ಕಂಡುಕೊಳ್ಳಲು ಸಲಹೆ

ಮುಂಬೈ: 'ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ, ಸಂಸತ್ತಿನಲ್ಲಿ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಬೇಕು' ಎಂದು ಶಿವಸೇನಾ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಸಲಹೆ ನೀಡಿದ್ದಾರೆ.

ಪಕ್ಷದ ಮುಖವಾಣಿ 'ಸಾಮ್ನಾ'ದಲ್ಲಿ ಪ್ರಕಟವಾಗಿರುವ ತಮ್ಮ 'ರೋಖ್‌ಠೋಕ್' ಲೇಖನದಲ್ಲಿ 'ಶಾಸಕಾಂಗವು ಯಾವುದೇ ನಿರ್ಧಾರ ತೆಗೆದುಕೊಳ್ಳದ್ದರಿಂದ ಈ ಪ್ರಕರಣವು ನ್ಯಾಯಾಂಗದ ಮೆಟ್ಟಿಲೇರಿದೆ. ಈ ಪ್ರಕರಣದ ಬಗ್ಗೆ ಸುಪ್ರೀಂಕೋರ್ಟ್ ಸಂಸತ್ತಿಗೆ ನಿರ್ದೇಶನ ನೀಡುತ್ತದೆ ಎಂದು ನಿರೀಕ್ಷಿಸುವುದರ ಬದಲು, ಸಂಸತ್ತೇ ಈ ಬಗ್ಗೆ ಪರಿಹಾರ ಕಂಡುಕೊಳ್ಳುವುದರಲ್ಲಿ ಹಾನಿ ಏನಿದೆ' ಎಂದು ರಾವುತ್ ಪ್ರಶ್ನಿಸಿದ್ದಾರೆ.

ಅಲ್ಲದೇ ಪ್ರಧಾನಿ ನರೇಂದ್ರ ಮೋದಿಯವರನ್ನೂ ತರಾಟೆಗೆ ತೆಗೆದುಕೊಂಡಿರುವ ರಾವುತ್, 'ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಮೋದಿ ನಿರ್ಲಕ್ಷ್ಯ ತೋರಿದ್ದಾರೆ. ಆದರೆ ರಷ್ಯಾ–ಉಕ್ರೇನ್ ಮಧ್ಯೆ ನಡೆಯುತ್ತಿರುವ ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸುತ್ತಾರೆ. ಇದು ಒಳ್ಳೆಯ ರಾಜಕಾರಣಿಯ ಲಕ್ಷಣವಲ್ಲ' ಎಂದು ಹೇಳಿದ್ದಾರೆ.

ವಿಪಕ್ಷಗಳದ್ದು ಒಡೆದಾಳುವ ನೀತಿ: ಮೋದಿ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮುಂದಿನ ವರ್ಷ ಚುನಾವಣೆಯ ನಡೆಯಲಿರುವ ಮೇಘಾಲಯ ಹಾಗೂ ತ್ರಿಪುರಾದಲ್ಲಿ ₹6,800 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಚಾಲನೆ ನೀಡಿದರು. ಪ್ರತಿಪಕ್ಷಗಳು ಒಡೆದಾಳುವ (ಡಿವೈಡ್) ನೀತಿ ಅನುಸರಿಸುತ್ತಿವೆ ಎಂದು ಆಗಾಗ್ಗೆ ಆರೋಪಿಸುವ ಮೋದಿ ಅವರು ಅದೇ ಧಾಟಿಯಲ್ಲಿ ಮಾತನಾಡಿದ್ದು, ಈಶಾನ್ಯ ರಾಜ್ಯಗಳ ಬಗ್ಗೆ ಪಕ್ಷ ಇಟ್ಟಿರುವ ಧೋರಣೆಯನ್ನು ಹೇಳಿದ್ದಾರೆ.

ಶಿಲ್ಲಾಂಗ್‌ನಲ್ಲಿ ಈಶಾನ್ಯ ಮಂಡಳಿಯ ಸುವರ್ಣ ಮಹೋತ್ಸವದಲ್ಲಿ ಪ್ರಧಾನಿ ಮೋದಿ ಮತ್ತು ಗೃಹಸಚಿವ ಅಮಿತ್ ಶಾ ಭಾನುವಾರ ಭಾಗಿಯಾಗಿದ್ದರು –ಪಿಟಿಐ ಚಿತ್ರ

'ವಿಭಿನ್ನ ಸಮುದಾಯ ಅಥವಾ ವಿಭಿನ್ನ ಪ್ರದೇಶಗಳೇ ಇರಲಿ, ಎಲ್ಲ ರೀತಿಯ ವಿಭಜನೆಗಳನ್ನು ನಾವು ತೆಗೆದುಹಾಕುತ್ತೇವೆ. ಈಶಾನ್ಯದಲ್ಲಿ ಅಭಿವೃದ್ಧಿಯ ಕಾರಿಡಾರ್ ನಿರ್ಮಿಸಲು ಒತ್ತು ನೀಡುತ್ತೇವೆಯೇ ವಿನಾ ವಿವಾದದ ಗಡಿಗಳನ್ನಲ್ಲ' ಎಂದರು.

'ಈಶಾನ್ಯ ಗಡಿಯ ಗ್ರಾಮಗಳಲ್ಲಿ ಉತ್ತಮ ಸೌಲಭ್ಯಗಳನ್ನು ದೊರಕಿಸುವ 'ವೈಬ್ರಂಟ್ ವಿಲೇಜ್ ಪ್ರೋಗ್ರಾಂ' ಅನ್ನು ಕೇಂದ್ರ ಶೀಘ್ರಗತಿಯಲ್ಲಿ ಜಾರಿ ಮಾಡುತ್ತಿದೆ. ಗಡಿ ಭಾಗದಲ್ಲಿ ಹೊಸ ರಸ್ತೆಗಳು, ಸೇತುವೆಗಳು, ಸುರಂಗ ಮಾರ್ಗಗಳು, ರೈಲು ಮಾರ್ಗಗಳು, ವಿಮಾನ ನಿಲ್ದಾಣಗಳನ್ನು ಧೈರ್ಯದಿಂದ ನಿರ್ಮಿಸುತ್ತಿದ್ದೇವೆ. ನಿರ್ಜನವಾಗಿದ್ದ ಗಡಿಗ್ರಾಮಗಳಿಗೆ ಜೀವಕಳೆ ಬಂದಿದೆ ಎಂದು ಪ್ರಧಾನಿ ಹೇಳಿದರು.

ಪೊಲೀಸರು 'ನೈತಿಕ ಪೊಲೀಸ್‌ಗಿರಿ' ಮಾಡಬೇಕಿಲ್ಲ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಪೊಲೀಸ್ ಅಧಿಕಾರಿಗಳು 'ನೈತಿಕ ಪೊಲೀಸ್‌ಗಿರಿ' ನಡೆಸಬೇಕಿಲ್ಲ. ಅಲ್ಲದೇ, ಭೌತಿಕವಾಗಿ ಅಥವಾ ವಸ್ತುರೂಪದಲ್ಲಿ ನೆರವು ಕೇಳುವಂತಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಪ್ರಕರಣವೊಂದಕ್ಕೆ ಸಂಬಂಧಿಸಿ ಸಿಐಎಸ್‌ಎಫ್ ಕಾನ್‌ಸ್ಟೆಬಲ್ ಸಂತೋಷ ಕುಮಾರ್ ಪಾಂಡೆ ಎಂಬಾತನನ್ನು ಸೇವೆಯಿಂದ ವಜಾಗೊಳಿಸಿ ಶಿಸ್ತು ಪ್ರಾಧಿಕಾರ ನೀಡಿದ್ದ ಆದೇಶವನ್ನು ಎತ್ತಿ ಹಿಡಿದಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಜೆ.ಕೆ.ಮಾಹೇಶ್ವರಿ ಅವರಿದ್ದ ಪೀಠ, 'ಸಂತೋಷಕುಮಾರ್ ಪಾಂಡೆಯನ್ನು, ಪುನಃ ಸೇವೆಯಲ್ಲಿ ಮುಂದುವರಿಸಬೇಕು' ಎಂಬುದಾಗಿ ಗುಜರಾತ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ರದ್ದುಗೊಳಿಸಿದೆ.

ವಿವರ: ಕೇಂದ್ರೀಯ ಕೈಗಾರಿಕೆ ಭದ್ರತಾ ಪಡೆಯಲ್ಲಿ (ಸಿಐಎಸ್ ಎಫ್) ಕಾನ್‌ಸ್ಟೆಬಲ್ ಆಗಿದ್ದ ಪಾಂಡೆ, ಗುಜರಾತ್‌ನ ವಡೋದರಾದ ಐಪಿಸಿಎಲ್ ಟೌನ್‌ಶಿಪ್‌ನಲ್ಲಿ ಕರ್ತವ್ಯದಲ್ಲಿದ್ದರು.

2001ರ ಅಕ್ಟೋಬರ್ 26ರ ತಡರಾತ್ರಿ ಮಹೇಶ್ ಬಿ.ಚೌಧರಿ ಎಂಬ ಯುವಕ ತನ್ನ ಗೆಳತಿಯೊಂದಿಗೆ ಬೈಕ್‌ನಲ್ಲಿ ಈ ಟೌನ್‌ಶಿಪ್‌ನಲ್ಲಿ ಹೊರಟಿದ್ದರು. ಆಗ ಕರ್ತವ್ಯದಲ್ಲಿದ್ದ ಪಾಂಡೆ ತಮ್ಮ ಬಳಿ ಬರುತ್ತಿದ್ದಂತೆಯೇ ಚೌಧರಿ ಬೈಕ್ ನಿಲ್ಲಿಸಿದ್ದರು.

'ಯುವಕ–ಯುವತಿಯನ್ನು ಪ್ರಶ್ನಿಸಿದ್ದ ಪಾಂಡೆ, ಪರಿಸ್ಥಿತಿಯ ಲಾಭ ಪಡೆಯಲು ಮುಂದಾದರು. ನಿನ್ನ ಗೆಳತಿಯೊಂದಿಗೆ ಕೆಲ ಸಮಯ ಕಳೆಯುವುದಾಗಿ ಚೌಧರಿಗೆ ಹೇಳಿದ್ದರು. ಚೌಧರಿ ಪ್ರತಿಭಟಿಸಿದ್ದರಿಂದ, ಬೇರೆ ಏನಾದರೂ ವಸ್ತು ನೀಡುವಂತೆ ಪಾಂಡೆ ಪಟ್ಟು ಹಿಡಿದಿದ್ದರು. ಆಗ ಚೌಧರಿ ತನ್ನ ವಾಚು ನೀಡಿದ್ದರು' ಎಂದು ಚಾರ್ಜ್‌ಶೀಟ್‌ನಲ್ಲಿ ವಿವರಿಸಲಾಗಿದೆ.

ನಂತರ, ಚೌಧರಿ ದೂರು ನೀಡಿದ್ದರು. ತನಿಖೆ ನಡೆದು, ಪಾಂಡೆಯನ್ನು ಸೇವೆಯಿಂದ ವಜಾ ಮಾಡಲಾಗಿತ್ತು. ಇದನ್ನು ಪಾಂಡೆ, ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ತಮಿಳ್ ಸೆಲ್ವಿಗೆ 'ಶ್ರೇಷ್ಠ ಅನುವಾದಕ ಪ್ರಶಸ್ತಿ'

ಬೆಂಗಳೂರು: ತಮಿಳುನಾಡು ಸರ್ಕಾರದ 'ಶ್ರೇಷ್ಠ ಅನುವಾದಕರು ಪ್ರಶಸ್ತಿ'ಗೆ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ಪ್ರೊ.ತಮಿಳ್ ಸೆಲ್ವಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 2 ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ತಮಿಳ್ ಸೆಲ್ವಿ ಅವರು ಕನ್ನಡ ಹಾಗೂ ತಮಿಳು ಸಾಹಿತ್ಯ ಲೋಕಕ್ಕೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 'ಶ್ರೀಲಂಕಾದ ತಮಿಳು ಕವಿತೆಗಳು', ಡಾ. ಕಾರ್ಲೋಸ್ ಅವರ 'ಇವರು ಕಥೆಯಾದವರು', ಅಬ್ದುಲ್ ರಹಮಾನ್ ಅವರ 'ಆಲಾಪನೆ', ಕನಿಮೊಳಿ ಅವರ 'ಬಸಿರ ವಾಸನೆ'

ತಮಿಳ್ ಸೆಲ್ವಿ

ಮೊದಲಾದ ಕೃತಿಗಳನ್ನು ತಮಿಳಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ವೀರಪ್ಪ ಮೊಯಿಲಿ ಅವರ 'ಶ್ರೀರಾಮಾಯಣ ಮಹಾನ್ವೇಷಣಂ', 'ಅಕ್ಕಮಹಾದೇವಿ ವಚನಗಳು', 'ಅತ್ತಿಮಬ್ಬೆ' ಮೊದಲಾದ ಕೃತಿಗಳನ್ನು ಕನ್ನಡದಿಂದ ತಮಿಳಿಗೆ ಅನುವಾದಿಸಿದ್ದಾರೆ.

ಇದೇ 21ರಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ತಮಿಳು ಅಭಿವೃದ್ಧಿ ಪ್ರಾಧಿಕಾರ ಪ್ರಕಟಣೆ ತಿಳಿಸಿದೆ.

'ಅಧಿವೇಶನದಲ್ಲೇ ಉತ್ತರ ಕೊಡ್ತೇವೆ ಬನ್ನಿ'

ಒಂದನೇ ಪುಟದಿಂದ...

'ಬೆಂಗಳೂರಿನ ವಿಶ್ವೇಶ್ವರಯ್ಯ ರೈಲು ನಿಲ್ದಾಣವನ್ನು ವಿಶ್ವದರ್ಜೆ ಮಟ್ಟದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಅದೇ ಮಾದರಿಯಲ್ಲಿ ಕರ್ನಾಟಕದ 48 ರೈಲು ನಿಲ್ದಾಣಗಳನ್ನು ಮೊದಲ ಹಂತದಲ್ಲಿ ಅಭಿವೃದ್ಧಿಪಡಿಸಲಾಗುವುದು. 2ನೇ ಹಂತದಲ್ಲಿ 50 ನಿಲ್ದಾಣಗಳನ್ನು ಅಭಿವೃದ್ಧಿಪಡಿಸುತ್ತೇವೆ' ಎಂದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮಾತನಾಡಿ, 'ರಾಜ್ಯದಲ್ಲಿ 140ಕ್ಕೂ ಹೆಚ್ಚು ಸ್ಥಾನ ಗೆಲ್ಲುತ್ತೇವೆ. ಬಳಿಕ ಕಾಂಗ್ರೆಸ್ ದೂಳೀಪಟವಾಗಲಿದೆ. ಕಾಂಗ್ರೆಸ್‌ನಲ್ಲಿ ಇಬ್ಬರು ಮುಖ್ಯಮಂತ್ರಿ ಆಗುತ್ತೇವೆಂದು ಕನಸು ಕಾಣುತ್ತಿದ್ದಾರೆ. ಪರಿಶಿಷ್ಟ ಜಾತಿ, ಪಂಗಡಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಿಸಿದ ಮೇಲೆ ಅವರ ಒಲವು ಬಿಜೆಪಿ ಕಡೆಯಿದೆ. ಬೆಳಗಾವಿ ಅಧಿವೇಶನದಲ್ಲಿ ಉತ್ತರ ನೀಡುತ್ತೇವೆ, ಪ್ರತಿಪಕ್ಷಗಳು ಬರಲಿ' ಎಂದು ಸವಾಲು ಹಾಕಿದರು.

ಬೆಂಗಳೂರಿನಲ್ಲಿ ಭಾನುವಾರ ಬಿಜೆಪಿ ಆಯೋಜಿಸಿದ್ದ ಶಕ್ತಿ ಸಂಗಮ ಸಮಾವೇಶದಲ್ಲಿ (ಎಡದಿಂದ) ಸಂಸದರಾದ ಪಿ.ಸಿ.ಮೋಹನ್ ಹಾಗೂ ಡಿ.ವಿ.ಸದಾನಂದಗೌಡ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಕೇಂದ್ರ ರೈಲ್ವೆ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಸಚಿವ ಅಶ್ವಿನಿ ವೈಷ್ಣವ್, ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮತ್ತು ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಂ.ಬಿ.ಭಾನುಪ್ರಕಾಶ್ ಕಾರ್ಯಕರ್ತರ ಕಡೆಗೆ ಕೈಬೀಸಿದರು – ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಬಿಜೆಪಿ ದುಡಿಯುವ ವರ್ಗವನ್ನು ಗುರುತಿಸಿದೆ. ವಿವಿಧ ಸಮುದಾಯದ ಪರಿಣಿತರ ಜ್ಞಾನ ಬಳಕೆ ಮಾಡಿಕೊಳ್ಳುತ್ತಿದ್ದೇವೆ. ಚುನಾವಣೆಗೋಸ್ಕರವೇ ಹಲವು ಪಕ್ಷಗಳಿವೆ. ಅವುಗಳಿಗಿಂತ ಬಿಜೆಪಿ ವಿಭಿನ್ನವಾದ ಪಕ್ಷ. ರೈತರ ಉತ್ಪನ್ನ ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇವೆ' ಎಂದು ಹೇಳಿದರು.

ಅನುದಾನ ಹಂಚಿಕೆ: ಮುಗಿಯದ ಗೊಂದಲ

ಒಂದನೇ ಪುಟದಿಂದ...

ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಜೂನ್ 8ರಂದು ನಡೆದ ಸಭೆಯಲ್ಲಿ ರಾಜ್ಯದಲ್ಲಿ ಶಿಕ್ಷಣ, ಆರೋಗ್ಯ ಮತ್ತು ಅಪೌಷ್ಟಿಕತೆ ನಿವಾರಣೆಯ ಮಹತ್ವಾಕಾಂಕ್ಷಿ ತಾಲ್ಲೂಕುಗಳನ್ನು ಗುರುತಿಸಿ ಯೋಜನೆ ರೂಪಿಸಿ ಅನುದಾನ ಬಳಕೆಯ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿತ್ತು. ಅದರಂತೆ ಶಿಕ್ಷಣದಲ್ಲಿ ಹಿಂದುಳಿದ 93 (ನಂಜುಂಡಪ್ಪ ವರದಿಯ ಹೊರಗಿನ 40), ಆರೋಗ್ಯದಲ್ಲಿ ಹಿಂದುಳಿದ 100 (ನಂಜುಂಡಪ್ಪ ವರದಿಯ ಹೊರಗಿನ 15), ಅಪೌಷ್ಟಿಕತೆ ನಿವಾರಣೆಗೆ 102 (ನಂಜುಂಡಪ್ಪ ವರದಿಯ ಹೊರಗಿನ 13) ಮಹತ್ವಾಕಾಂಕ್ಷಿ ತಾಲ್ಲೂಕುಗಳನ್ನು ಗುರುತಿಸಲಾಗಿತ್ತು. ಈ ಮಹತ್ವಾಕಾಂಕ್ಷಿ ತಾಲ್ಲೂಕು ಅಭಿವೃದ್ಧಿಗೆ ಆರೋಗ್ಯ ಇಲಾಖೆಯಲ್ಲಿ ₹ 124.08 ಕೋಟಿಯ ಮತ್ತು ಮಹಿಳಾ ಮತ್ತು ಕಲ್ಯಾಣ ಇಲಾಖೆಯಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ₹ 75 ಕೋಟಿಯ ಕಾಮಗಾರಿಗೆ ಅನುಮೋದನೆ ನೀಡಲಾಗಿತ್ತು.

> ಎಸ್‌ಡಿಪಿಯಡಿ ಹಣ ಬಿಡುಗಡೆಗೆ ನಿರ್ಧರಿಸಲಾಗಿದೆ. ಆದರೆ, ಎಸ್‌ಡಿಪಿಯೊ, ಮಹತ್ವಾಕಾಂಕ್ಷಿ ತಾಲ್ಲೂಕೊ ಎನ್ನುವುದನ್ನು ಮುಂದೆ ತೀರ್ಮಾನಿಸಲಾಗುವುದು
> **ಐ.ಎಸ್.ಎನ್.ಪ್ರಸಾದ್,** ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ

> ಹಿಂದುಳಿದ ತಾಲ್ಲೂಕುಗಳಿಗೆ ಎಸ್‌ಡಿಪಿ ಅನುದಾನ ಬಳಸಲಾಗುವುದು. ಮಹತ್ವಾಕಾಂಕ್ಷಿ ತಾಲ್ಲೂಕುಗಳಿಗೆ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವ ಸಲ್ಲಿಸಲಾಗಿದೆ.
> **ಮುನಿರತ್ನ,** ಯೋಜನೆ ಮತ್ತು ಸಾಂಖ್ಯಿಕ ಸಚಿವ

ಆದರೆ, ನ.3ರಂದು ನಡೆದ ವಿಧಾನ ಮಂಡಲದ ಅಂದಾಜು ಸಮಿತಿ ಸಭೆಯಲ್ಲಿ ನಂಜುಂಡಪ್ಪ ವರದಿಯಲ್ಲಿರುವ ತಾಲ್ಲೂಕುಗಳ ಪರಿಮಿತಿಯಲ್ಲಿಯೇ ಮಹತ್ವಾಕಾಂಕ್ಷಿ ತಾಲ್ಲೂಕುಗಳನ್ನು ಆಯ್ಕೆ ಮಾಡಬೇಕು. ಯಾವುದೇ ಕಾರಣಕ್ಕೂ ಹೊರಗಿನ ತಾಲ್ಲೂಕುಗಳಿಗೆ ಈ ಹಣ ವೆಚ್ಚ ಮಾಡಬಾರದು ಎಂದು ಸೂಚಿಸಲಾಗಿದೆ ಎಂದು ಸಮಿತಿಯ ಸದಸ್ಯರೊಬ್ಬರು ತಿಳಿಸಿದರು. ಈ ಬಗ್ಗೆ ಪ್ರತಿಕ್ರಿಯೆಗೆ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಕರೆ ಮಾಡಿದರೂ ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಸಂಕ್ಷಿಪ್ತ ಸುದ್ದಿ

'ಹಿಮಾಚಲ ಕಾಂಗ್ರೆಸ್‌ನಲ್ಲಿ ಒಳಜಗಳ ಇಲ್ಲ'

ನವದೆಹಲಿ (ಪಿಟಿಐ): ಹಿಮಾಚಲ ಕಾಂಗ್ರೆಸ್‌ನಲ್ಲಿ ಒಳಜಗಳಗಳು ಇಲ್ಲ. ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದ್ದ ಕಾರಣ ಸ್ವಲ್ಪ ಮಟ್ಟಿನ ತಿಕ್ಕಾಟಗಳು ನಡೆದವು ಎಂದು ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖ್ಖು ಸ್ಪಷ್ಟನೆ ನೀಡಿದ್ದಾರೆ.

ಪಕ್ಷದಲ್ಲಿ ಕೆಲ ಸಂಗತಿಗಳು ಸರಿ ಇರದಿದ್ದರೆ ರಾಜಸ್ಥಾನ ಮಾದರಿ ಸಂದರ್ಭ ಎದುರಾಗಿರುತ್ತಿತ್ತು ಎಂದು ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಕಾಂಗ್ರೆಸ್‌ನ ಯಾವ ಶಾಸಕರೂ ಬಿಜೆಪಿಗೆ ಪಕ್ಷಾಂತರ ಮಾಡುವುದಿಲ್ಲ ಎಂದು ಅವರು ತಿಳಿಸಿದರು.

ಪುರೋಹಿತ್ ಕುರಿತ ಪುಸ್ತಕ ಬಿಡುಗಡೆ

ಪುಣೆ (ಪಿಟಿಐ): ಮಾಲೆಗಾಂವ್ ಸ್ಫೋಟ ಪ್ರಕರಣದ ಆರೋಪಿ ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ್ ಅವರ ಕುರಿತ ಪುಸ್ತಕವನ್ನು ಭಾರಿ ವಿರೋಧದ ಮಧ್ಯೆಯೇ ಇಲ್ಲಿನ ಎಸ್.ಪಿ ಕಾಲೇಜಿನಲ್ಲಿ ಭಾನುವಾರ ಬಿಡುಗಡೆ ಮಾಡಲಾಯಿತು.

'ಲೆಫ್ಟಿನೆಂಟ್ ಕರ್ನಲ್ ಪುರೋಹಿತ್– ದಿ ಮ್ಯಾನ್ ಬಿಟ್ರೇಯ್ಡ್' ಎಂಬ ಪುಸ್ತಕವನ್ನು ಸ್ಮಿತಾ ಮಿಶ್ರಾ ಅವರು ಬರೆದಿದ್ದಾರೆ. ಈ ನಡುವೆ ಕೆಲ ಸ್ಥಳೀಯ ಸಂಘಟನೆಗಳು, ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ ಆರೋಪಿ ಕುರಿತ ಪುಸ್ತಕ ಬಿಡುಗಡೆ ಸರಿಯಲ್ಲ ಎಂದು ಪ್ರತಿಭಟಿಸಿದವು.

ಭಾರತದ ಸರ್‌ಗಂ ಮಿಸೆಸ್ ವರ್ಲ್ಡ್

ಸರ್‌ಗಂ ಕೌಶಲ್

ನವದೆಹಲಿ: ಭಾರತದ ಸರ್‌ಗಂ ಕೌಶಲ್ ಅವರು 2022ನೇ ಸಾಲಿನ ಮಿಸೆಸ್ ವರ್ಲ್ಡ್ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

63 ದೇಶಗಳ ಸ್ಪರ್ಧಿಗಳು ಇದರಲ್ಲಿ ಭಾಗವಹಿಸಿದ್ದು, 21 ವರ್ಷಗಳ ಬಳಿಕ ಭಾರತದ ಸ್ಪರ್ಧಿಯೊಬ್ಬರು ಈ ಸ್ಪರ್ಧೆಯಲ್ಲಿ ಗೆದ್ದಿದ್ದಾರೆ.

ಅಮೆರಿಕದ ವೆಸ್ಟ್‌ಗೇಟ್ ಲಾಸ್ ವೇಗಾಸ್ ರೆಸಾರ್ಟ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ 2021ನೇ ಸಾಲಿನ ವಿಜೇತೆ ಶೈಲಿನ್ ಫೋರ್ಡ್ ಅವರು ಸರ್‌ಗಂ ಅವರಿಗೆ ಕಿರೀಟ ತೊಡಿಸಿದರು.

ಮಿಸೆಸ್ ಪಾಲಿನೇಷ್ಯಾ ಅವರು ಮೊದಲ ರನ್ನರ್ ಅಪ್ ಹಾಗೂ ಮಿಸೆಸ್ ಕೆನಡಾ ಎರಡನೇ ರನ್ನರ್ ಅಪ್ ಆಗಿ ಆಯ್ಕೆಯಾಗಿದ್ದಾರೆ.

ತೆಲಂಗಾಣ ಕಾಂಗ್ರೆಸ್: 13 ಮಂದಿ ರಾಜೀನಾಮೆ

ಹೈದರಾಬಾದ್ (ಪಿಟಿಐ): ತೆಲಂಗಾಣ ಕಾಂಗ್ರೆಸ್‌ನ ಒಳಜಗಳಗಳು ತಾರಕಕ್ಕೇರಿವೆ. 'ಬೇರೆ ಪಕ್ಷದಿಂದ 'ವಲಸೆ' ಬಂದವರಿಗೇ ಪಕ್ಷದೊಳಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತಿದೆ' ಎಂದ ಪಕ್ಷದ ಹಿರಿಯ ಮುಖಂಡರ ಹೇಳಿಕೆಯನ್ನು ಖಂಡಿಸಿ 13 ಮಂದಿ ಸದಸ್ಯರು ರಾಜೀನಾಮೆ ನೀಡಿದ್ದಾರೆ.

ಬಿಷ್ಣೋಯ್ ಸಹಚರ ಶೂಟರ್ ಬಂಧನ

ನವದೆಹಲಿ (ಪಿಟಿಐ): ಕುಖ್ಯಾತ ಪಾತಕಿ ಲಾರೆನ್ಸ್ ಬಿಷ್ಣೋಯ್– ಕಾಲಾ ಜತೇದಿ ಗುಂಪಿನ ಸಹಚರ ಎನ್ನಲಾದ ಶಂಕಿತ ಶೂಟರ್ ಒಬ್ಬನನ್ನು ನಜಾಫಗಢ ಕಪಾಶೇರಾದಲ್ಲಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಹರಿಯಾಣದ ಗುರುಗ್ರಾಮದ ಅರುಣ್ ರಾಣಾ ಅಲಿಯಾಸ್ ಧಿಲ್ಲು ಬಂಧಿತ ಆರೋಪಿ. ಈತನಿಂದ ಒಂದು ಪಿಸ್ತೂಲ್ ಮತ್ತು ಐದು ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ದೆಹಲಿ ಮತ್ತು ಹರಿಯಾಣದಲ್ಲಿ ಹಲವು ಪ್ರಕರಣಗಳಲ್ಲಿ ಈತ ಬೇಕಾಗಿದ್ದ.

ಫೋನ್‌ನಲ್ಲಿ ಮಾತನಾಡಿದ್ದಕ್ಕೆ ಮಲಮಗಳ ಹತ್ಯೆ

ಹೈದರಾಬಾದ್: ಫೋನ್‌ನಲ್ಲಿ ನಿರಂತರ ಮಾತನಾಡುತ್ತಾಳೆಂದು ಮಲತಂದೆಯೊಬ್ಬ 17 ವರ್ಷದ ಬಾಲಕಿಯನ್ನು ಹತ್ಯೆ ಮಾಡಿರುವುದಾಗಿ ಪೊಲೀಸರು ಭಾನುವಾರ ಹೇಳಿದ್ದಾರೆ.

'ಬಾಲಕಿಗೆ ಮಲತಂದೆ ಥಳಿಸಿದ್ದಾನೆ. ತಡೆಯಲು ಯತ್ನಿಸಿದಾಗ ಆಕೆಯನ್ನು ಕೋಣೆಯೊಳಗೆ ಎಳೆದೊಯ್ದು ಹಲ್ಲೆ ನಡೆಸಿದ್ದಾನೆ' ಎಂದು ಬಾಲಕಿಯ ಸೋದರಿ ಆರೋಪಿಸಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ.

ಚೀನಾ ಉತ್ಪನ್ನ ಬಹಿಷ್ಕರಿಸಿ: ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿ ಭಾರತ–ಚೀನಾ ನಡುವಿನ ಸಂಘರ್ಷಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರ ನರೇಂದ್ರ ಮೋದಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಪಕ್ಷದ ರಾಷ್ಟ್ರೀಯ ಮಂಡಳಿ ಸಭೆ ಉದ್ದೇಶಿಸಿ ಮಾತನಾಡಿದ ಕೇಜ್ರಿವಾಲ್, ಗಡಿಯಲ್ಲಿ ಚೀನಾದ ಆಕ್ರಮಣ ಹೆಚ್ಚುತ್ತಿರುವಾಗ, ಕೇಂದ್ರ ಸರ್ಕಾರ ಎಲ್ಲವೂ ಸರಿಯಾಗಿದೆ ಎಂದು ಹೇಳುತ್ತಿದೆ.

'ನಮ್ಮ ಸೈನಿಕರ ಬಗ್ಗೆ ನಿಮಗೆ ಗೌರವವಿಲ್ಲವೇ? ಸ್ವಲ್ಪ ಧೈರ್ಯ ತೋರಿಸಿ. ಭಾರತ ಆಮದು ನಿಲ್ಲಿಸಿದರೆ ಚೀನಾಕ್ಕೆ ಬುದ್ಧಿ ಬರುತ್ತದೆ' ಎಂದು ಕೇಜ್ರಿವಾಲ್ ಹೇಳಿದರು. ಅಲ್ಲದೆ ಚೀನಾ ಉತ್ಪನ್ನಗಳನ್ನು ಬಹಿಷ್ಕರಿಸುವಂತೆ ಅವರು ರಾಷ್ಟ್ರಕ್ಕೆ ಮನವಿ ಮಾಡಿದರು.

ಹೆಚ್ಚುತ್ತಿರುವ ಹಣದುಬ್ಬರ ಮತ್ತು ನಿರುದ್ಯೋಗದ ಬಗ್ಗೆ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಕೇಜ್ರಿವಾಲ್, ಬಿಜೆಪಿ ಸರ್ಕಾರ ಕೆಲಸ ಮಾಡಲು ಬಿಡದ ಕಾರಣ ಕೈಗಾರಿಕೋದ್ಯಮಿಗಳು ಭಾರತ ತೊರೆಯುತ್ತಿದ್ದಾರೆ ಎಂದರು.

ಎಎಪಿ ಸ್ಥಾಪನೆಯಾದ 10 ವರ್ಷಗಳಲ್ಲಿ ರಾಷ್ಟ್ರೀಯ ಪಕ್ಷವಾಗುವ ಏಕೈಕ ಪಕ್ಷ ಎಂದು ಪ್ರತಿಪಾದಿಸಿದ ಕೇಜ್ರಿವಾಲ್, 'ನಾವು 2027 ರಲ್ಲಿ ಗುಜರಾತ್‌ನಲ್ಲಿ ಸರ್ಕಾರ ರಚಿಸುತ್ತೇವೆ' ಎಂದರು.

ಜಾರ್ಖಂಡ್: ಪತ್ನಿ ಕೊಂದು ದೇಹ ಕತ್ತರಿಸಿದ ಪತಿ ಸೆರೆ

ಸಾಹಿಬ್‌ಗಂಜ್, ಜಾರ್ಖಂಡ್ (ಪಿಟಿಐ): ದೆಹಲಿಯ ಶ್ರದ್ಧಾ ವಾಲಕರ್ ಹತ್ಯೆ ಹೋಲುವ ಮತ್ತೊಂದು ಪ್ರಕರಣ ಜಾರ್ಖಂಡ್‌ನಲ್ಲಿ ನಡೆದಿದೆ. ಪತ್ನಿ ಕೊಂದು ದೇಹವನ್ನು ಹಲವು ತುಂಡುಗಳಾಗಿ ಕತ್ತರಿಸಿ, ಜಿಲ್ಲೆಯ ವಿವಿಧೆಡೆ ಬಿಸಾಡಿದ್ದ ಆರೋಪಿ ದಿಲ್ದಾರ್ ಅನ್ಸಾರಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಜಿಲ್ಲೆಯ ಬೋರಿಯಾ ಪ್ರದೇಶದಲ್ಲಿ ಸಂತ್ರಸ್ತೆಯ ದೇಹದ ಭಾಗಗಳನ್ನು ನಾಯಿಗಳು ಎಳೆದೊಯ್ಯುತ್ತಿದ್ದನ್ನು ಗಮನಿಸಿದ ಸ್ಥಳೀಯ ನಿವಾಸಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದು, ಜಿಲ್ಲೆಯ ವಿವಿಧ ಪ್ರದೇಶಗಳಿಂದ ದೇಹದ ಕನಿಷ್ಠ 13 ಭಾಗಗಳನ್ನು ವಶಪಡಿಸಿಕೊಳ್ಳಲಾಗಿದೆ. ಕೊಲೆಯಾದವರು ದೊಂಡಾ ಪಹಾರ್ ನಿವಾಸಿ 22 ವರ್ಷದ ಮಹಿಳೆ. ಈಕೆ ದಿಲ್ದಾರ್‌ನ ಎರಡನೇ ಪತ್ನಿ ಎಂದು ತಿಳಿದು ಬಂದಿದೆ' ಎಂದು ಬೋರಿಯೊ ಪೊಲೀಸ್ ಠಾಣೆ ಅಧಿಕಾರಿ ಜಗನ್ನಾಥ್ ಪಾನ್ ಅವರು ತಿಳಿಸಿದ್ದಾರೆ.

'ಸಂತ್ರಸ್ತೆಯ ದೇಹದ ಕೆಲವು ಭಾಗಗಳು ಜಿಲ್ಲೆಯ ಪಾಳುಬಿದ್ದ ಮನೆಯಲ್ಲಿ ಪತ್ತೆಯಾಗಿವೆ. ತನಿಖೆ ನಂತರ ಹೆಚ್ಚಿನ ವಿವರ ಲಭ್ಯವಾಗಲಿದೆ' ಎಂದು ಸಾಹಿಬ್‌ಗಂಜ್ ಉಪ ವಿಭಾಗದ ಪೊಲೀಸ್ ಅಧಿಕಾರಿ ರಾಜೇಂದ್ರ ಕುಮಾರ್ ದುಬೆ ತಿಳಿಸಿದರು.

'ಕಿತ್ತೂರು ಕರ್ನಾಟಕ'ಕ್ಕಾಗಿ ಕಿತ್ತಾಟ

ಒಂದನೇ ಪುಟದಿಂದ...

ಬೆಂಗಳೂರು ಕೇಂದ್ರಿತ ಆಡಳಿತವು ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕವನ್ನು ಕಡೆಗಣಿಸುತ್ತಲೇ ಬರುತ್ತಿದೆ ಎಂಬ ಆಪಾದನೆ ಯಾವುದೇ ಪಕ್ಷಗಳು ಅಧಿಕಾರದಲ್ಲಿದ್ದಾಗ ಬರುತ್ತಲೇ ಇದೆ. ಹೀಗಾಗಿ, ಎಲ್ಲ ಪಕ್ಷದ ರಾಜಕಾರಣಿಗಳು ಒಂದೇ ಕಡೆ ಸಿಗುವ ಇಂತಹ ಸುಸಂದರ್ಭವನ್ನು ಪ್ರತಿಭಟನಾಕಾರರು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ.

'ಪ್ರತಿಭಟನೆಗಾಗಿ 61 ಸಂಘಟನೆಗಳು ಅನುಮತಿ ಕೇಳಿವೆ' ಎಂದು ಬೆಳಗಾವಿ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಹೇಳಿದ್ದಾರೆ. ಹೀಗಾಗಿ, ಪ್ರತಿಭಟನೆ ಬಿಸಿ ಸಹ ಸದನವನ್ನು ಕಾಡಲಿರುವುದು ದಿಟ.

ಕಬ್ಬು ಬೆಳೆಗಾರರ ಒಂದು ಗುಂಪನ್ನು ಸಂಧಾನದ ಮೂಲಕ ಸಂತೈಸುವ ಕೆಲಸವನ್ನು ಸರ್ಕಾರ ಮಾಡಿದೆ. ಆದರೆ, ಮತ್ತೊಂದು ಗುಂಪು ಹೋರಾಟವನ್ನು ತೀವ್ರಗೊಳಿಸುವ ಸಾಧ್ಯತೆ ಇದೆ. ಚುನಾವಣೆ ಎದುರಿಗಿರುವ ಹೊತ್ತಿನೊಳಗೆ ಮೀಸಲಾತಿಯ ಬೇಡಿಕೆಯನ್ನು ವಿವಿಧ ಸಮುದಾಯಗಳು ಮುಂದಿಟ್ಟಿವೆ. ಅಧಿವೇಶನದೊಳಗೆ ಅಥವಾ ವಿಧಾನಸಭೆ ಘೋಷಣೆಯಾಗುವುದಕ್ಕೆ ಮುನ್ನ ಮೀಸಲಾತಿ ಹೆಚ್ಚಳ, ಪಟ್ಟಿಯಲ್ಲಿ ಬದಲಾವಣೆ, ಹೊಸ ಸೇರ್ಪಡೆ ಮಾಡಬೇಕೆಂಬ ಬೇಡಿಕೆಯು ತೀವ್ರಗೊಳ್ಳುತ್ತಲೇ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದ ಬಳಿಕ ಒಳಮೀಸಲಾತಿ ಬೇಡಿಕೆ ಹೋರಾಟದ ಸ್ವರೂಪಕ್ಕೆ ತಿರುಗಿದೆ. ಒಳಮೀಸಲಾತಿ ನೀಡುವ ಬಗ್ಗೆ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಸೌಲಭ್ಯ ವಂಚಿತ ಸಮುದಾಯ ಆಗ್ರಹ ಮಾಡುತ್ತಿದ್ದರೆ, ನ್ಯಾ. ಸದಾಶಿವ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿ ಮಾಡುವುದು ಬೇಡ ಎಂದು ಪರಿಶಿಷ್ಟ ಜಾತಿ ಪಟ್ಟಿಯೊಳಗಿರುವ ಪ್ರಬಲ ಜಾತಿಗಳು ಪ್ರತಿಪಾದಿಸುತ್ತಿವೆ. ಮೀಸಲಾತಿ ಹೆಚ್ಚಳವನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದ ಸರ್ಕಾರ, ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡಿಸಲು ಮುಂದಾಗಿದೆ.

ಅದರ ಜತೆಗೆ, ಲಿಂಗಾಯತ ಪಂಚಮ ಸಾಲಿ ಸಮುದಾಯವನ್ನು 2ಎಗೆ ಸೇರಿಸುವ ಘೋಷಣೆ ಮಾಡಬೇಕು ಎಂದು ಈ ಪ್ರದೇಶದಲ್ಲಿ ರಾಜಕೀಯವಾಗಿ ಪ್ರಬಲವಾಗಿರುವ ಸಮುದಾಯ ಪಟ್ಟು ಹಿಡಿದು ಕೂತಿದ್ದು ಗಡುವು ಕೊಟ್ಟಿದೆ. ಇದಕ್ಕೆ, 2ಎ ಪಟ್ಟಿಯಲ್ಲಿರುವ ವಿವಿಧ ಜಾತಿಗಳು ಇದಕ್ಕೆ ವಿರೋಧ ವ್ಯಕ್ತಪಡಿಸಿವೆ. ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಒಕ್ಕಲಿಗ ಸಮುದಾಯ ಹಕ್ಕೊತ್ತಾಯ ಮಂಡಿಸಿದೆ.

ಇದಲ್ಲದೇ, ಮಳೆಹಾನಿಗೆ ಪರಿಹಾರ, ಕೇಂದ್ರ ಸರ್ಕಾರದ ತಾರತಮ್ಯ ಧೋರಣೆಯನ್ನು ಮುಂದಿಟ್ಟುಕೊಂಡು ಈ ಭಾಗದ ಜನರ ಗಮನ ಸೆಳೆಯುವ ಬಗ್ಗೆ ಕಾಂಗ್ರೆಸ್ ತಯಾರಿ ನಡೆಸಿದೆ. ಜತೆಗೆ, ಕಾಮಗಾರಿಗಳಲ್ಲಿನ ಭ್ರಷ್ಟಾಚಾರ, ಪಿಎಸ್‌ಐ ಅಕ್ರಮದ ಬಗ್ಗೆ ಕಾಂಗ್ರೆಸ್ ಪಕ್ಷ 'ಪೇಸಿಎಂ' ಅಭಿಯಾನ ನಡೆಸುತ್ತಿದ್ದು, ಇದು ಸಹ ಚರ್ಚೆಗೆ ಬರುವ ಸಾಧ್ಯತೆ ಇದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರದ್ದಾಗಿ ಕಾಣುವುದಿಲ್ಲ.

-ಮಹಾತ್ಮ ಗಾಂಧಿ

ಅಂತರಧರ್ಮೀಯ ವಿವಾಹ ದಂಪತಿ ಮೇಲೆ ಕಣ್ಗಾವಲು ಸರಿಯಲ್ಲ

ಭಿನ್ನ ಧರ್ಮಗಳಿಗೆ ಸೇರಿದ ಜನರು ಮದುವೆಯಾದರೆ ಅವರ ಮೇಲೆ ಕಣ್ಗಾವಲು ಇರಿಸುವುದಕ್ಕೆ ಸಮಿತಿಯೊಂದನ್ನು ರಚಿಸುವ ಮಹಾರಾಷ್ಟ್ರ ಸರ್ಕಾರದ ನಿರ್ಧಾರವು ತಪ್ಪು ಮತ್ತು ಪೌರರ ಹಕ್ಕುಗಳ ಉಲ್ಲಂಘನೆ. ಅಂತರಧರ್ಮೀಯ ಮತ್ತು ಅಂತರ್ಜಾತಿ ಈ ಎರಡೂ ಬಗೆಯ ಮದುವೆಗಳ ಮೇಲೆ ಕಣ್ಗಾವಲು ಇರಿಸಲು ಸರ್ಕಾರವು ಮೊದಲು ನಿರ್ಧರಿಸಿತ್ತು. ಬಳಿಕ, ಅಂತರ್ಜಾತಿ ಮದುವೆಗಳನ್ನು ಕೈಬಿಡಲಾಯಿತು. ಅಂತರ್ಜಾತಿ ಮದುವೆಗಳನ್ನು ಪ್ರೋತ್ಸಾಹಿಸಬೇಕು ಎನ್ನುವುದು ಸರ್ಕಾರದ ನೀತಿಯೇ ಆಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದ ಬಳಿಕ ಈ ನಿರ್ಧಾರಕ್ಕೆ ಬರಲಾಯಿತು. ಆದರೆ, ಸಮಿತಿಯ ಮೂಲ ಯೋಜನೆಯನ್ನು ಗಮನಿಸಿದರೆ ಅಂತರ್ಜಾತಿ ಮತ್ತು ಅಂತರಧರ್ಮೀಯ ಮದುವೆಗಳ ವಿಚಾರದಲ್ಲಿ ಸರ್ಕಾರದ ಯೋಚನೆ ಹೇಗಿದೆ ಎಂಬುದು ತಿಳಿಯುತ್ತದೆ. ಅಂತರಧರ್ಮೀಯ ಮದುವೆ ಆದ ಜೋಡಿಯ ಮಾಹಿತಿ ಕಲೆ ಹಾಕುವುದು ಮತ್ತು ಮಹಿಳೆಯು ತನ್ನ ತವರು ಮನೆಯನ್ನು ತೊರೆದು ಬಂದಿದ್ದರೆ ಆ ಕುಟುಂಬದ ಬಗ್ಗೆಯೂ ಮಾಹಿತಿ ಸಂಗ್ರಹಿಸುವುದು ಸಮಿತಿಯ ಹೊಣೆಗಾರಿಕೆಯಾಗಿದೆ. ಮಹಿಳೆಯರಿಗಾಗಿ ಜಿಲ್ಲಾ ಮಟ್ಟದಲ್ಲಿ ಇರುವ ಕಾರ್ಯಕ್ರಮಗಳ ಉಸ್ತವಾರಿಯನ್ನೂ 13 ಸದಸ್ಯರ ಈ ಸಮಿತಿಯು ನೋಡಿಕೊಳ್ಳಲಿದೆ. ಸರ್ಕಾರ ಮತ್ತು ಸರ್ಕಾರೇತರ ಕ್ಷೇತ್ರಗಳ ಪ್ರತಿನಿಧಿಗಳು ಸಮಿತಿಯಲ್ಲಿ ಇರಲಿದ್ದಾರೆ. ಇದು, ಆಪ್ತಸಮಾಲೋಚನೆ ಪಡೆದುಕೊಳ್ಳಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಮಹಿಳೆಯರು ಮತ್ತು ಅವರ ಕುಟುಂಬಗಳಿಗಾಗಿ ಇರುವ ವೇದಿಕೆಯಾಗಿದೆ.

ಸರ್ಕಾರ ನೇಮಿಸಿದ ಸಮಿತಿಯು ಮದುವೆಯಾದ ಜೋಡಿಯ ಮೇಲೆ ಕಣ್ಣಿಟ್ಟರೆ ಅದು ಜನರ ಖಾಸಗಿತನದ ಹಕ್ಕಿನ ಉಲ್ಲಂಘನೆ. ದಂಪತಿಯ ಬದುಕಿನ ಮೇಲೆ ನಿಗಾ ಇರಿಸುವುದು ಸರ್ಕಾರದ ಕೆಲಸ ಅಲ್ಲ

ಮಹಿಳೆಯರ ಅಭಿವೃದ್ಧಿಯನ್ನು ನೋಡಿಕೊಳ್ಳುವುದು ಸಮಿತಿಯ ಉದ್ದೇಶ ಎಂದು ಹೇಳಲಾಗಿದ್ದರೂ ವಾಸ್ತವದಲ್ಲಿ ಅದಕ್ಕೆ ವ್ಯತಿರಿಕ್ತವಾದ ಉದ್ದೇಶವನ್ನು ಹೊಂದಿದೆ. ಮುಂಬೈ ನಿವಾಸಿ ಶ್ರದ್ಧಾ ವಾಲಕರ್ ಅವರನ್ನು ಅವರ ಸಹಜೀವನದ ಸಂಗಾತಿ ಆಫ್ತಾಬ್ ಪೂನಾವಾಲಾ ದೆಹಲಿಯಲ್ಲಿ ಕೊಲೆ ಮಾಡಿದ ಪ್ರಕರಣವು ಸರ್ಕಾರವು ಸಮಿತಿ ರಚಿಸುವ ನಿರ್ಧಾರ ತೆಗೆದುಕೊಳ್ಳಲು ಕಾರಣ. ಆದರೆ ಅವರ ಸಂಬಂಧದಲ್ಲಿ ಧರ್ಮ ಎಂದೂ ಪ್ರವೇಶಿಸಿರಲಿಲ್ಲ. ಹಾಗಾಗಿಯೇ, ಈ ಕೊಲೆಯನ್ನು ಧರ್ಮದ ದೃಷ್ಟಿಯಿಂದ ನೋಡುವುದು ತಪ್ಪು. ತಮ್ಮದೇ ಜಾತಿ ಅಥವಾ ಧರ್ಮದ ಸಂಗಾತಿಯಿಂದ ಕೊಲೆಯಾದ ಮಹಿಳೆಯರ ಸಂಖ್ಯೆ ಸಾವಿರಾರು. ಎಲ್ಲ ದಂಪತಿ ಮೇಲೆ ಸಮಿತಿಯು ಏಕೆ ಕಣ್ಗಾವಲು ಇರಿಸುವುದಿಲ್ಲ? ಅಂತರಧರ್ಮೀಯ ಮದುವೆಯಾದ ಮಹಿಳೆಯರು ಭಾರಿ ಅಪಾಯದಲ್ಲಿದ್ದಾರೆ ಎಂಬುದನ್ನು ತೋರಿಸುವ ಯಾವುದೇ ದತ್ತಾಂಶ ನಮ್ಮಲ್ಲಿ ಇಲ್ಲ. ಶ್ರದ್ಧಾ ವಾಲಕರ್ ಕೊಲೆಗೀಡಾದ ಆರು ತಿಂಗಳ ಬಳಿಕ ಆ ವಿಚಾರ ಅವರ ಹೆತ್ತವರಿಗೆ ತಿಳಿಯಿತು ಎಂದು ಸಚಿವ ಮಂಗಲ್ ಲೋಧಾ ಹೇಳಿದ್ದಾರೆ. ದಂಪತಿಯು ಒಂದೇ ಧರ್ಮದವರಾಗಿದ್ದರೆ ಇಂತಹುದು ನಡೆಯುವುದು ಸಾಧ್ಯವಿರಲಿಲ್ಲವೇ?

ದಂಪತಿಯ ಬದುಕಿನ ಮೇಲೆ ನಿಗಾ ಇರಿಸುವುದು ಸರ್ಕಾರದ ಕೆಲಸ ಅಲ್ಲ. ಅಷ್ಟೇ ಅಲ್ಲ, ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪುಗಳ ಮೇಲೆ ನಿಗಾ ಇರಿಸುವುದನ್ನೂ ಸರ್ಕಾರ ಮಾಡಬಾರದು. ಜನರು ಮದುವೆ ಅಥವಾ ಬೇರಾವುದೇ ರೀತಿಯ ಸಂಬಂಧವನ್ನು ಇರಿಸಿಕೊಳ್ಳುವ ನಿರ್ಧಾರವನ್ನು ಸ್ವಇಚ್ಛೆಯ ಮೂಲಕವೇ ತೆಗೆದುಕೊಳ್ಳುತ್ತಾರೆ. ಇದನ್ನು ಕಾನೂನು ಮಾನ್ಯ ಮಾಡಿದೆ. ಸರ್ಕಾರ ನೇಮಿಸಿದ ಸಮಿತಿಯು ಮದುವೆಯಾದ ಜೋಡಿಯ ಮೇಲೆ ಕಣ್ಣಿಟ್ಟರೆ ಅದು ಜನರ ಖಾಸಗಿತನದ ಹಕ್ಕಿನ ಉಲ್ಲಂಘನೆ. ಮಹಾರಾಷ್ಟ್ರ ಸರ್ಕಾರದ ನಿರ್ಧಾರವು ಅಂತರಧರ್ಮೀಯ ಮದುವೆ ಅಥವಾ ಸಂಬಂಧವನ್ನು ನಿರುತ್ಸಾಹಗೊಳಿಸುವ ಉದ್ದೇಶ ಹೊಂದಿದೆ. ಜೊತೆಗೆ, ಹೀಗೆ ಮದುವೆ ಆದವರಿಗೆ ಕಿರುಕುಳ ಕೊಡುವ ಗುರಿಯನ್ನೂ ಹೊಂದಿದೆ. 'ಲವ್ ಜಿಹಾದ್' ನಡೆಯುತ್ತಿದೆ ಎಂಬ ಬಡಬಡಿಕೆಯಲ್ಲದೆ ಇದು ಬೇರೇನೂ ಅಲ್ಲ. ಜನರ ಸಂಬಂಧಗಳನ್ನು ಪರಿಶೀಲಿಸುವ ಕೆಲಸಕ್ಕೆ ಮುಂದಾದರೆ ಸರ್ಕಾರವು ಜಾತಿ ಪಂಚಾಯಿತಿಯ ಮಟ್ಟಕ್ಕೆ ಇಳಿದಂತಾಗುತ್ತದೆ. ಅಂತರಧರ್ಮೀಯ ಮದುವೆ ಮತ್ತು ಭಿನ್ನ ಸಮುದಾಯಗಳ ಜನರು ಹೆಚ್ಚು ಹೆಚ್ಚು ಬೆರೆಯುವುದನ್ನು ಸ್ವಾಗತಿಸುವುದು ಮತ್ತು ಪ್ರೋತ್ಸಾಹಿಸುವುದು ಸರ್ಕಾರದ ನಿಜವಾದ ಹೊಣೆಗಾರಿಕೆ.

ದಿನದ ಟ್ವೀಟ್

ವಿಪರ್ಯಾಸ

ಹಿರಿಯ ರಾಜಕಾರಣಿಗಳಾದ ಶ್ರೀನಿವಾಸ್ ಪ್ರಸಾದ್ ಮತ್ತು ವಿಶ್ವನಾಥ್ ತಮ್ಮ ವಾಗ್ವಾದದ ನಡುವೆ ತೇಲಿಬಿಟ್ಟಿರುವ ಪ್ರಮುಖ ಅಂಶವೆಂದರೆ ಚುನಾವಣೆಗಾಗಿ ಮಾಡಿರುವ ಕೋಟಿ ಕೋಟಿ ವೆಚ್ಚ. ಇದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತಹ ಸಂಗತಿ. ಆದರೂ ಚುನಾವಣಾ ಆಯೋಗವು ಪ್ರತೀ ಬಾರಿ ಫ್ರೀ ಎಂಡ್ ಫೇರ್ ಎಲೆಕ್ಷನ್ ನಡೆದಿದೆ ಎಂದು ಜಂಬಪಡುತ್ತದೆ. ವಿಪರ್ಯಾಸ!

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ಚೀನಾ ಸೈನಿಕರ ವಿರುದ್ಧ ಹೋರಾಡುವ ಸಂದರ್ಭದಲ್ಲಿ ಭಾರತದ ಸೈನಿಕರು ಪ್ರಾಣವನ್ನು ಪಣಕ್ಕೆ ಒಡ್ಡುತ್ತಾರೆ. ಆದರೆ, ಮೋದಿ ನೇತೃತ್ವದ ಸರ್ಕಾರವು ಚೀನಾವನ್ನು ಶಿಕ್ಷಿಸುವ ಬದಲು ಆ ದೇಶಕ್ಕೆ ಬಹುಮಾನ ನೀಡುತ್ತಿದೆ. ಆ ದೇಶದಿಂದ ಹೆಚ್ಚು ಹೆಚ್ಚು ಆಮದಿಗೆ ಸರ್ಕಾರವು ಅವಕಾಶ ನೀಡಿದೆ. ಚೀನಾದ ಉತ್ಪನ್ನಗಳು ಅಗ್ಗ ಎಂದು ಅವರು ಹೇಳುತ್ತಿದ್ದಾರೆ. ಚೀನಾ ಉತ್ಪನ್ನಗಳು ಅಗ್ಗವಾಗಿದ್ದರೂ ನಮಗೆ ಬೇಡ. ದುಪ್ಪಟ್ಟು ಖರ್ಚಾದರೂ ಭಾರತದಲ್ಲಿ ತಯಾರಾದ ಉತ್ಪನ್ನ ಖರೀದಿಸಲು ಸಿದ್ಧರಿದ್ದೇವೆ.

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 19-12-1997

• **ಸಿಬಿಐ ಮೇಲೆ ಕೇಂದ್ರ ನಿಯಂತ್ರಣ ರದ್ದು**

ನವದೆಹಲಿ, ಡಿ. 18 (ಪಿಟಿಐ, ಯುಎನ್‌ಐ)– ಸರ್ಕಾರದ ಉನ್ನತ ಮಟ್ಟದಲ್ಲಿ ನಡೆಯುವ ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಇಂದು ಸಿಬಿಐಗೆ ಮುಕ್ತ ಅವಕಾಶ ನೀಡಿದೆ.

ಸಿಬಿಐ, ಜಾರಿ ನಿರ್ದೇಶನಾಲಯ ಮತ್ತು ಇತರ ಬೇಹುಗಾರಿಕೆ ಸಂಸ್ಥೆಗಳ ಪುನರ್ ಸಂಘಟನೆ ಕುರಿತಂತೆ ಇಂದು ಐತಿಹಾಸಿಕ ತೀರ್ಪು ನೀಡಿದ ಸುಪ್ರೀಂ ಕೋರ್ಟ್, ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಮೇಲ್ಮಟ್ಟದ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಲು ಸಿಬಿಐಗೆ ಸರ್ಕಾರದ ಅನುಮತಿ ಅಗತ್ಯ ಎಂದು ಹೇಳಿದೆ.

• **ರಾಹುಲ್, ಪ್ರಿಯಾಂಕಾಗೆ ಕೇಸರಿ ಆಹ್ವಾನ**

ಭುವನೇಶ್ವರ, ಡಿ. 18– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಯುವಕರಿಗೆ ಕಾಂಗ್ರೆಸ್ ಶೇ 20ರಷ್ಟು ಕ್ಷೇತ್ರಗಳನ್ನು ಮೀಸಲಿಡಲಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಇಂದು ಪ್ರಕಟಿಸಿದರು.

ಇಲ್ಲಿ ಬೃಹತ್ ರ‍್ಯಾಲಿಯೊಂದನ್ನು ಉದ್ದೇಶಿಸಿ ಮಾತನಾಡಿ ಕಾಂಗ್ರೆಸ್‌ನ ಚುನಾವಣಾ ಪ್ರಚಾರ ಆರಂಭಿಸಿದ ಕೇಸರಿ, ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವಂತೆ ರಾಜೀವ್ ಗಾಂಧಿ ಅವರ ಪುತ್ರ ರಾಹುಲ್ ಗಾಂಧಿ ಹಾಗೂ ಪುತ್ರಿ ಪ್ರಿಯಾಂಕಾ ಗಾಂಧಿ ಅವರನ್ನು ಆಹ್ವಾನಿಸಿದರು.

ನಂತರ ಪತ್ರಿಕಾಗೋಷ್ಠಿಯಲ್ಲೂ ಅದನ್ನೇ ಪುನರುಚ್ಚರಿಸಿದ ಕೇಸರಿ, ರಾಷ್ಟ್ರದ ಭವಿಷ್ಯ ಯುವಕರ ಕೈಯಲ್ಲಿರುವುದರಿಂದ ಪಕ್ಷದ ಕಾರ್ಯವನ್ನು ಯುವಕರ ರ‍್ಯಾಲಿಯಿಂದಲೇ ಆರಂಭಿಸುತ್ತಿರುವುದಾಗಿ ಹೇಳಿದರು.

ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಅವರು ಸೋನಿಯಾ ಗಾಂಧಿ ಅವರನ್ನೂ ಆಹ್ವಾನಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 19-12-1972

• **ಕೆ.ಎಚ್. ರಂಗನಾಥ್ ಎಂಪಿಸಿಸಿ ಅಧ್ಯಕ್ಷ: ಒಮ್ಮತದ ಆಯ್ಕೆ**

ಬೆಂಗಳೂರು, ಡಿ. 18– ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು 'ಶ್ರೀ ಕೆ.ಎಚ್. ರಂಗನಾಥ್ ಅವರನ್ನು' ಎಂದು ಹೇಳುತ್ತಿದ್ದಂತೆಯೇ ಎಂಪಿಸಿಸಿ ಸದಸ್ಯರು ಜಯಕಾರ– ಕರತಾಡನ ಮಾಡಿ ಶ್ರೀ ರಂಗನಾಥ್ ಅವರನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮತ್ತೆ ಒಮ್ಮತದಿಂದ ಪುನರ್ ಆಯ್ಕೆ ಮಾಡಿದರು.

ಈ ಒಮ್ಮತದ ಮನೋಭಾವವನ್ನು ಅನುಸರಿಸಿ ಸದಸ್ಯರು ಉಳಿದ ಅಧಿಕಾರ ವರ್ಗ, ಕಾರ್ಯ ಸಮಿತಿ ಸದಸ್ಯರು ಹಾಗೂ ಎಐಸಿಸಿ ಸದಸ್ಯರನ್ನು ಆರಿಸುವ ಅಧಿಕಾರವನ್ನೂ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿಗಳಿಗೆ ವಹಿಸಿದರು.

• **ಅಪೋಲೊ ನೌಕೆ ಇಂದು ಧರೆಗೆ**

ಹಾಸ್ಟನ್, ಡಿ. 18– ಅಪೋಲೊ– 17 ನೌಕೆ ಯಶಸ್ವಿ ಚಂದ್ರಯಾತ್ರೆ ಮುಗಿಸಿ ಮಂಗಳವಾರ ರಾತ್ರಿ (ಭಾರತೀಯ ಕಾಲಮಾನ ರೀತ್ಯ) ಒಂದು ಗಂಟೆ ಹೊತ್ತಿಗೆ ಭೂಗ್ರಹದ ಮೇಲೆ ಇಳಿಯಲಿದೆ. ಯಾನ ಮುಗಿಸುವ ಕಡೆಯ ಗಳಿಗೆಯ ಸಿದ್ಧತೆಗಳನ್ನು ಚಂದ್ರಯಾತ್ರಿಗಳು ಮುಗಿಸಿದ್ದಾರೆ.

ಮಾನವನ ಕಡೆಯ ಯಾನದ ಕಡೆಯ ಕಾರ್ಯಕ್ರಮವಾಗಿ ಚಂದ್ರಯಾತ್ರಿ ರೊನಾಲ್ಡ್ ಇವಾನ್ಸ್ ಅವರು ಬಾಹ್ಯಾಕಾಶದಲ್ಲಿ 44 ನಿಮಿಷಗಳ ತೇಲು ನಡಿಗೆ ನಡೆಸಿದರು.

ಬಹುತೇಕರ ಶಿಕ್ಷಣಕ್ಕೆ ಕನಿಷ್ಠ ಅನುದಾನ, ಕೆಲವೇ ಸಂಸ್ಥೆಗಳ ತುಷ್ಟೀಕರಣ

ಗುರುಕುಲ ಶಿಕ್ಷಣ ಈಗಲೂ ಇದೆ!

ವಿಶ್ಲೇಷಣೆ

ಎಂ. ಚಂದ್ರ ಪೂಜಾರಿ

'ಪ್ರಾಚೀನ ಭಾರತದಲ್ಲಿದ್ದ ಗುರುಕುಲ ಶಿಕ್ಷಣ ಪದ್ಧತಿ ಉತ್ತಮವಾಗಿತ್ತು, ಅದು ಮೊಘಲರು ಮತ್ತು ಬ್ರಿಟಿಷರ ದಾಳಿಯಿಂದ ನಾಶವಾಯಿತು. ಒಂದು ವೇಳೆ ಇಂದು ಈ ಪದ್ಧತಿ ಇರುತ್ತಿದ್ದರೆ ಶಿಕ್ಷಣ ಕ್ಷೇತ್ರದಲ್ಲಿ ನಾವಿಂದು ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿತ್ತು' ಎಂಬಂಥ, ಗುರುಕುಲ ಶಿಕ್ಷಣ ಪದ್ಧತಿಯ ಸಕಾರಾತ್ಮಕ ಗುಣಗಳನ್ನು ಬಣ್ಣಿಸುವ ಬರಹ, ಭಾಷಣಗಳು ಹೇರಳವಾಗಿವೆ. ನನ್ನ ಈ ಲೇಖನದ ಉದ್ದೇಶವು ಅಂದಿನ ಗುರುಕುಲ ಶಿಕ್ಷಣ ಪದ್ಧತಿ ಕುರಿತು ಚರ್ಚಿಸುವುದಲ್ಲ. ಅದರ ಲಕ್ಷಣಗಳುಳ್ಳ ಶಿಕ್ಷಣ ಪದ್ಧತಿ ನಾಶವಾಗಿಲ್ಲ ಮತ್ತು ಇಂದೂ ಚಾಲ್ತಿಯಲ್ಲಿದೆ ಎಂದು ಹೇಳುವುದು.

ಶಿಕ್ಷಣವು ಸಂಪೂರ್ಣವಾಗಿ ರಾಜಾಶ್ರಯದಲ್ಲಿ ನಡೆಯುವುದು, ಸಮಾಜದ ಸಣ್ಣ ಗುಂಪಿಗೆ (ಕ್ಷತ್ರಿಯರು ಮತ್ತು ಬ್ರಾಹ್ಮಣರಿಗೆ ಮಾತ್ರ) ಪ್ರವೇಶ ಇರುವುದು, ಪೂರ್ಣ ಸ್ವಾಯತ್ತತೆ ಹೊಂದಿರುವುದು- ಇವೆಲ್ಲ ಅಂದಿನ ಗುರುಕುಲ ಶಿಕ್ಷಣ ಪದ್ಧತಿಯ ಮುಖ್ಯ ಲಕ್ಷಣಗಳು. ಮೊಘಲರು ಮತ್ತು ಬ್ರಿಟಿಷರ ದಾಳಿಯಿಂದ ಇಲ್ಲಿನ ಕ್ಷತ್ರಿಯರು ಮೂಲೆಗುಂಪಾದರು. ಆದರೆ ಬ್ರಾಹ್ಮಣರು, ವೈಶ್ಯರಂತಹ ಪ್ರಬಲ ವರ್ಗಗಳ ಶಿಕ್ಷಿತರಿಗೆ ಬಾಧಕ ಎದುರಾಗಲಿಲ್ಲ. ಅದಕ್ಕೆ ಕಾರಣ, ಸ್ಥಳೀಯರನ್ನು ಅರ್ಥ ಮಾಡಿಕೊಳ್ಳದೆ ಆಡಳಿತ ನಡೆಸುವುದು ಮೊಘಲರು ಮತ್ತು ಬ್ರಿಟಿಷರಿಗೆ ಅಸಾಧ್ಯವಾಗಿತ್ತು ಮತ್ತು ಸ್ಥಳೀಯರನ್ನು ಅರ್ಥಮಾಡಿಕೊಳ್ಳಲು ಆಗ ಶಿಕ್ಷಿತರಾಗಿದ್ದವರನ್ನು ಹತ್ತಿರ ಸೇರಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಹೀಗೆ ಪ್ರಾಪ್ತವಾದ ಅಧಿಕಾರದ ಸಾಮೀಪ್ಯವು ಈ ವರ್ಗಗಳ ಶಿಕ್ಷಣ ಹಾಗೂ ಇತರ ಸವಲತ್ತುಗಳ ಮುಂದುವರಿಕೆಗೆ ಕಾರಣವಾಗಿರಬಹುದು.

ವಿಜ್ಞಾನ ಮತ್ತು ತಂತ್ರಜ್ಞಾನದ ಬಲದಿಂದಲೇ ಬ್ರಿಟಿಷರು ನಮ್ಮ ಮೇಲೆ ಆಳ್ವಿಕೆ ನಡೆಸಿದ್ದು. ಬಲಾಢ್ಯ ಸ್ವತಂತ್ರ ಭಾರತ ನಿರ್ಮಾಣಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಅನಿವಾರ್ಯ ಎನ್ನುವ ಚರ್ಚೆ ಸ್ವಾತಂತ್ರ್ಯ ಹೋರಾಟದ ಭಾಗವಾಗಿತ್ತು. ಈ ಎಲ್ಲದರ ಫಲವಾಗಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ಆರಂಭವಾದವು. 50-60ರ ದಶಕದಲ್ಲಿ ವಿದೇಶಿ ನೆರವಿನಿಂದ ನಾಲ್ಕು ಐಐಟಿಗಳು ಸ್ಥಾಪನೆಗೊಂಡವು. ನಂತರದ ದಿನಗಳಲ್ಲಿ 19 ಐಐಟಿ, 29 ಎನ್‌ಐಟಿ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ), 8 ಐಐಎಸ್‌ಇಆರ್ (ಇಂಡಿಯನ್ ಇನ್‌ಸ್ಟಿಟ್ಯೂಟ್ಸ್ ಆಫ್ ಸೈನ್ಸ್ ಎಜುಕೇಶನ್ ಆ್ಯಂಡ್ ರಿಸರ್ಚ್), 20 ಐಐಎಂ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್), 7 ಎಐಐಎಂಎಸ್ (ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್), 25 ಐಐಐಟಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿ), 3 ಎನ್‌ಐಡಿಗಳನ್ನು (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್) ಭಾರತ ಸರ್ಕಾರ ಆರಂಭಿಸಿದೆ. ಇವನ್ನು ಇನ್‌ಸ್ಟಿಟ್ಯೂಟ್ಸ್ ಆಫ್ ನ್ಯಾಷನಲ್ ಇಂಪಾರ್ಟೆನ್ಸ್ ಎಂದು ಪರಿಗಣಿಸಲಾಗಿದೆ. ಅಂದರೆ ನಮ್ಮ ದೇಶ ಕಟ್ಟುವ ಕೆಲಸದಲ್ಲಿ ಪ್ರಮುಖ ಪಾತ್ರ ವಹಿಸುವ ಸಂಸ್ಥೆಗಳು ಎನ್ನುವ ಅರ್ಥ.

ಇಂಥ ಸಂಸ್ಥೆಗಳು ಸ್ಥಳೀಯ ರಾಜಕೀಯದ ಪ್ರಭಾವಕ್ಕೆ ಒಳಗಾಗಬಾರದು ಎಂಬ ಕಾರಣಕ್ಕೆ ನೆಹರೂ ಅವರ ಕಾಲದಿಂದಲೇ ಇವು ಪ್ರಧಾನಮಂತ್ರಿಯವರ ನೇರ ಉಸ್ತುವಾರಿಯಲ್ಲಿವೆ. ಈ ಸಂಸ್ಥೆಗಳಲ್ಲಿ ಮೀಸಲಾತಿ ನೀಡಲು ನೆಹರೂ ವಿಶೇಷ ಆಸಕ್ತಿ ತೋರಿಸಲಿಲ್ಲ. ಅವರ ಪ್ರಕಾರ, ಇಲ್ಲಿ ಸಂಖ್ಯೆಗಿಂತ ಗುಣಮಟ್ಟ ಮುಖ್ಯವಾಗಬೇಕು. ಗುಣಮಟ್ಟದ ದೃಷ್ಟಿಯಿಂದ ನೋಡಿದರೆ, ಹಿಂದಿನಿಂದಲೇ ಶಿಕ್ಷಣ ಪಡೆಯುತ್ತಿದ್ದವರು ಇಲ್ಲಿರಲು ಯೋಗ್ಯರು ಎನ್ನುವ ನಿಲುವನ್ನು ನೆಹರೂ ಕೂಡ ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ. ಹೀಗೆ, ಒಂದು ಸಣ್ಣ ವರ್ಗದ ಚಾರಿತ್ರಿಕ ಅನುಕೂಲವು ನಂತರದ ದಿನಗಳಲ್ಲಿ 'ಮೆರಿಟ್' ಆಗಿ ಪರಿವರ್ತನೆಗೊಂಡಿದೆ. ಇದೇ ಕಾರಣದಿಂದ, 2006ರಲ್ಲಿ ಸೆಂಟ್ರಲ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ (ರಿಸರ್ವೇಷನ್ ಇನ್ ಅಡ್ಮಿಷನ್) ಆ್ಯಕ್ಟ್ ಬರುವತನಕ ಈ ಸಂಸ್ಥೆಗಳಲ್ಲಿ ಮೀಸಲಾತಿ ಇರಲಿಲ್ಲ.

2006ರ ಕಾಯ್ದೆಯ ಅನ್ವಯ, ಪರಿಶಿಷ್ಟ ಜಾತಿಗೆ (ಎಸ್‌ಸಿ) ಶೇ 15, ಪರಿಶಿಷ್ಟ ವರ್ಗಕ್ಕೆ (ಎಸ್‌ಟಿ) ಶೇ 7.5 ಮತ್ತು ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶೇ 27ರಷ್ಟು ಸೀಟುಗಳು ಮೀಸಲಿವೆ. ಈ ಕಾಯ್ದೆಯ ವಿರುದ್ಧ ಬಹಳಷ್ಟು ಬೀದಿ ಹೋರಾಟಗಳು, ಕೋರ್ಟ್ ಕಟ್ಟಲೆಗಳು ನಡೆದು, ಇದು ಅನುಷ್ಠಾನಗೊಳ್ಳಲು ಹೆಚ್ಚುಕಡಿಮೆ ನಾಲ್ಕು ವರ್ಷ ತೆಗೆದುಕೊಂಡಿದೆ. ಕಾಯ್ದೆ ಜಾರಿಗೊಂಡ ಹಲವು ವರ್ಷಗಳ ನಂತರವೂ ಈ ವರ್ಗದ ಪಿಎಚ್‌.ಡಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ. ಕೇಂದ್ರ ಶಿಕ್ಷಣ ಸಚಿವಾಲಯದ ಅಂಕಿಅಂಶದ ಪ್ರಕಾರ, 2016-20ರಲ್ಲಿ ಬೆಂಗಳೂರಿನ ಐಐಎಸ್‌ಸಿಯಲ್ಲಿ ಶೇ 2.1ರಷ್ಟು ಎಸ್‌ಟಿ, ಶೇ 9ರಷ್ಟು ಎಸ್‌ಸಿ ಮತ್ತು ಶೇ 8ರಷ್ಟು ಒಬಿಸಿ ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆಯಲು ಸಾಧ್ಯವಾಗಿದೆ. 17 ಐಐಟಿಗಳಲ್ಲಿ ಶೇ 1.7ರಷ್ಟು ಎಸ್‌ಟಿ, ಶೇ 9ರಷ್ಟು ಎಸ್‌ಸಿ ಮತ್ತು ಶೇ 27ರಷ್ಟು ಒಬಿಸಿ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಇತರ ಸಂಸ್ಥೆಗಳಲ್ಲೂ ಮೀಸಲಾತಿ ಸ್ಥಿತಿ ಇದಕ್ಕಿಂತ ಉತ್ತಮವಾಗಿಲ್ಲ.

2019ರವರೆಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಮಾತ್ರ ಮೀಸಲಾತಿ ಅನ್ವಯವಾಗುತ್ತಿತ್ತು. ಅದು ಕೂಡ ಸರಿಯಾಗಿ ಅನುಷ್ಠಾನಗೊಂಡಿಲ್ಲ. ಸಚಿವಾಲಯದ 2019ರ ಅಂಕಿಅಂಶದ ಪ್ರಕಾರ, ಐಐಟಿಗಳಲ್ಲಿ ಬೋಧಕ ಸಿಬ್ಬಂದಿಯ ಶೇ 91ರಷ್ಟು ಮತ್ತು ಐಐಎಂಗಳಲ್ಲಿ ಶೇ 94ರಷ್ಟು ಜನರಲ್ ಕೆಟಗರಿಯಿಂದ ಬಂದರೆ, ಮೀಸಲಾತಿಯಿಂದ ಐಐಟಿಯಲ್ಲಿ ಶೇ 9 ಮತ್ತು ಐಐಎಂಗಳಲ್ಲಿ ಶೇ 6ರಷ್ಟು ಬೋಧಕ ಸಿಬ್ಬಂದಿ ಬಂದಿದ್ದಾರೆ. ಇದೇ ಕಾರಣದಿಂದ, 2019ರಲ್ಲಿ ಕೇಂದ್ರ ಸರ್ಕಾರವು ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕೆಂದು ಈ ಸಂಸ್ಥೆಗಳಿಗೆ ಆದೇಶಿಸಿದೆ. ಜೊತೆಗೆ ಸಹಾಯಕ ಪ್ರಾಧ್ಯಾಪಕರಿಗೆ ಸೀಮಿತವಾಗಿದ್ದ ಮೀಸಲಾತಿಯನ್ನು ಪ್ರೊಫೆಸರ್ ಹುದ್ದೆಗಳಿಗೂ ವಿಸ್ತರಿಸಿದೆ.

ಮೀಸಲಾತಿ ಮಾತ್ರವಲ್ಲ, ಒಟ್ಟಾರೆ ಈ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವವರ ಸಂಖ್ಯೆಯೂ ತೀರಾ ಕಡಿಮೆ ಇದೆ. 2019ರ ವೇಳೆಗೆ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಲ್ಲಿ ಶೇ 72ರಷ್ಟು ಸ್ಟೇಟ್ ಯೂನಿವರ್ಸಿಟಿಗಳಲ್ಲಿ, ಶೇ 8.8ರಷ್ಟು ಸೆಂಟ್ರಲ್ ಯೂನಿವರ್ಸಿಟಿಗಳಲ್ಲಿ, ಶೇ 3.4ರಷ್ಟು ಮಂದಿ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದರೆ, ಇನ್‌ಸ್ಟಿಟ್ಯೂಷನ್ಸ್ ಆಫ್ ನ್ಯಾಷನಲ್ ಇಂಪಾರ್ಟೆನ್ಸ್ ಸಂಸ್ಥೆಗಳಲ್ಲಿ ಶೇ 3.6ರಷ್ಟು ವಿದ್ಯಾರ್ಥಿಗಳು ಮಾತ್ರ ಶಿಕ್ಷಣ ಪಡೆಯುತ್ತಿದ್ದರು. ಹಾಗೆಂದು ಈ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ನೀಡುವ ಅನುದಾನ ಕಡಿಮೆ ಇಲ್ಲ.

2022-23ರ ಕೇಂದ್ರ ಬಜೆಟ್‌ನಲ್ಲಿ ₹ 40,828 ಕೋಟಿಯನ್ನು ಉನ್ನತ ಶಿಕ್ಷಣಕ್ಕಾಗಿ ತೆಗೆದಿರಿಸಲಾಗಿದೆ. ಇದರಲ್ಲಿ ಶೇ 44ರಷ್ಟನ್ನು ಇನ್‌ಸ್ಟಿಟ್ಯೂಷನ್ಸ್ ಆಫ್ ನ್ಯಾಷನಲ್ ಇಂಪಾರ್ಟೆನ್ಸ್ ವ್ಯಾಪ್ತಿಯ ಸಂಸ್ಥೆಗಳಿಗೆ ನೀಡಿದರೆ, ಸ್ಟೇಟ್ ಯೂನಿವರ್ಸಿಟಿಗಳಿಗೆ ಶೇ 17ರಷ್ಟು ಮತ್ತು ಸೆಂಟ್ರಲ್ ಯೂನಿವರ್ಸಿಟಿಗಳಿಗೆ ಶೇ 24ರಷ್ಟು ಮೊತ್ತವನ್ನು ನೀಡಲಾಗಿದೆ. ಕೆಲವು ವರ್ಷಗಳ ಹಿಂದೆ ಕೆಲವು ಐಐಟಿ, ಐಐಎಸ್‌ಸಿ, ವಿಶ್ವವಿದ್ಯಾಲಯಗಳನ್ನು ಇನ್‌ಸ್ಟಿಟ್ಯೂಷನ್ಸ್ ಆಫ್ ಎಮಿನೆನ್ಸ್ ಎಂದು ಪ್ರಕಟಿಸಿ, ಅವುಗಳಿಗೆ 5 ವರ್ಷಗಳ ಅವಧಿಗೆ ತಲಾ ₹ 1,000 ಕೋಟಿ ಅನುದಾನ ಘೋಷಿಸಲಾಗಿದೆ.

ಹೀಗೆ ಇಂದಿನ ಗುರುಕುಲ ಶಿಕ್ಷಣ ಪದ್ಧತಿಯ ಪರಿಣಾಮಗಳು ಇಂತಿವೆ: ಒಂದು, ಬಹುತೇಕರಿಗೆ ಗುಣಮಟ್ಟದ ಶಿಕ್ಷಣ ನಿರಾಕರಣೆ. ಎರಡು, ನ್ಯಾಷನಲ್ ಇಂಪಾರ್ಟೆನ್ಸ್ ಹೆಸರಿನಲ್ಲಿ ಬೆರಳೆಣಿಕೆಯಷ್ಟು ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು. ಮೂರು, ಚಾರಿತ್ರಿಕ ಅನುಕೂಲವನ್ನೇ ಮೆರಿಟ್ ಎಂದು ಪರಿಗಣಿಸುವುದು ಮತ್ತು ನಾಲ್ಕು, ಎಲ್ಲರ ತೆರಿಗೆ ಹಣದಲ್ಲಿ ಒಂದು ಸಣ್ಣ ಗುಂಪು ಗುಣಮಟ್ಟದ ಶಿಕ್ಷಣ ಪಡೆದು ವಿದೇಶಗಳಲ್ಲಿ ಸೇವೆ ಸಲ್ಲಿಸುವುದು.

ಬಹುತೇಕರ ಶಿಕ್ಷಣದ ಮೇಲೆ ಹೆಚ್ಚು ಅನುದಾನ ವಿನಿಯೋಗಿಸದೆ ಕೆಲವೇ ಸಂಸ್ಥೆಗಳನ್ನು ತುಷ್ಟೀಕರಿಸಿ, ಅಲ್ಲಿ ಓದಿದವರನ್ನು ಮೆರಿಟೋರಿಯಸ್ ಎಂದು ಘೋಷಿಸುವುದಕ್ಕೂ, ಬಡವರೇ ತುಂಬಿರುವ ದೇಶದಲ್ಲಿ ಕೋಟಿಗಟ್ಟಲೆ ಹಣ ಸುರಿದು ನಡೆಯುವ ಚುನಾವಣೆಗಳಲ್ಲಿ ಕೆಲವರನ್ನು ಜನಪ್ರತಿನಿಧಿಗಳು ಎಂದು ಘೋಷಿಸುವುದಕ್ಕೂ ಏನಾದರೂ ವ್ಯತ್ಯಾಸ ಇದೆಯೇ?

ಚುರುಮುರಿ

ಬದುಕೇ ಹೊಂಡಾಗುಂಡಿ!

• ಸುಮಂಗಲಾ

'ಏ ನೋಡಿಲ್ಲಿ, 2024ರ ಅಂತ್ಯದ ಹೊತ್ತಿಗೆ ನಮ್ಮ ರಸ್ತೆಗಳನ್ನ ಅಮೆರಿಕದ ರಸ್ತೆಗಳ ಗುಣಮಟ್ಟಕ್ಕೆ ಸಮ ಮಾಡತೀವಿ ಅಂತ ನಮ್ ಗಡ್ಕರಿ ಮಾಮಾ ಹೇಳ್ಯಾನ' ಬೆಕ್ಕಣ್ಣ ಪೇಪರು ಹಿಡಿದು ಭಯಂಕರ ಖುಷಿಯಲ್ಲಿ ವದರಿತು.

'ಸದ್ಯ, ಹೇಮಾಮಾಲಿನಿ ಕೆನ್ನೆ ಹಂಗೆ ಮಾಡ್ತೀನಿ ಅಂತೆಲ್ಲ ಹೇಳಿಲ್ಲವಲ್ಲ. ಅದ್ಸರಿ, ಅಮೆರಿಕದ ರಸ್ತೆಗಳ ಗುಣಮಟ್ಟಕ್ಕೆ ಸಮ ಅಂದ್ರೇನರ್ಥ? ಅಲ್ಲೂ ಹೊಂಡಾಗುಂಡಿ ಇರತಾವು, ನಮಗಿಂತ ಸ್ವಲ್ಪ ಕಡಿಮೆ ಇರಬೌದು ಅಷ್ಟೇ. ಹಿಂಗಾಗಿ ಹೊಂಡಾಗುಂಡಿ ಕಡಿಮೆ ಮಾಡತೀವಿ ಅಂದಿರಬೇಕಲೇ' ಎಂದೆ.

'ಮೊಸರನ್ನದಾಗೆ ಕಲ್ಲು ಹುಡುಕಿದಂಗೆ ಮಾತಾಡಬ್ಯಾಡ. ಗಡ್ಕರಿ ಮಾಮಾ ಭರವಸೆ ಕೊಟ್ಟಾನಂದ್ರ ಆಗೇ ಆಗತೈತಿ' ಬೆಕ್ಕಣ್ಣ ವಾದಿಸಿತು.

'ನಮ್ಮ ರಸ್ತೆಗಳು ಅಂತ ಹೇಳಿದ್ದರಾಗೆ ಕರುನಾಡಿನ, ಬೆಂಗಳೂರಿನ ರಸ್ತೆಗಳನ್ನು ಹೊರತುಪಡಿಸಿ ಅಂದಿರಬೇಕು. ನೋಡಿಲ್ಲಿ, ನಮ್ಮ ಬಿಬಿಎಂಪಿ ಆಯುಕ್ತರು ಹೇಳ್ಯಾರೆ... ರಸ್ತೆ ಗುಂಡಿಗಳು ನಿರಂತರ, ಜಗತ್ತಿನಾಗೆ ಯಾವ ನಗರದ ರಸ್ತೆವಳಗ ಹೊಂಡಾಗುಂಡಿಗಳು ಇಲ್ಲ ಅಂತ ನನಗ ತೋರಿಸಿ ಅಂತ'.

'ಸರಿಯಾಗೇ ಹೇಳ್ಯಾರ ಅವರು... ಸಾವಿಲ್ಲದ ಮನೆ ಯಾವುದೈತಿ? ಹಂಗೇ ಹೊಂಡಗುಂಡಿಗಳಿಲ್ಲದ ನಗರ ಈ ಜಗತ್ತು ಮಾತ್ರವಲ್ಲ, ಮ್ಯಾಗೆ ಇಂದ್ರಲೋಕದೊಳಗೂ ಇರಲಿಕ್ಕಿಲ್ಲ. ರಸ್ತೆಗಳಿರೋವರೆಗೆ ಹೊಂಡಾಗುಂಡಿಗಳು ಇರತಾವು, ಅವು ಇರೋವರೆಗೆ ರಿಪೇರಿ ಹೆಸರಲ್ಲಿ ಗುತ್ತಿಗೆದಾರರು, ಅಧಿಕಾರಿಗಳು ಸುಖಿನೋಭವಂತು!' ಬೆಕ್ಕಣ್ಣ ಹೆಪ್ಪ ಗುಟ್ಟಿತು.

'ಹಂಗೆ ನಿರಂತರವಾಗಿರೋ ಸಮಸ್ಯೆಗಳು ಭಾಳ ಅದಾವಲೇ. ಗಡಿ ತಂಟೆ ನಿರಂತರ...' ಎಂದು ಪೇಪರಿನಲ್ಲಿ 'ಇಪ್ಪತ್ತೈದು ವರ್ಷಗಳ ಹಿಂದೆ' ಕಾಲಂನಲ್ಲಿ ಬಂದಿದ್ದ ಕರ್ನಾಟಕ-ಮಹಾರಾಷ್ಟ್ರದ ಗಡಿ ತಂಟೆ ಸುದ್ದಿ ತೋರಿಸಿದೆ.

'25 ವರ್ಷಗಳ ನಂತರ ಅಂತ ಪೇಪರಿನವರು ಭವಿಷ್ಯದ ಸುದ್ದಿ ಬರೆದರೂ ಹೊಂಡಾಗುಂಡಿ ರಸ್ತೆ, ಗಡಿ ತಂಟೆ, ಬೆಲೆಯೇರಿಕೆ, ಭ್ರಷ್ಟಾಚಾರ... ಇಂತಹ ನಿರಂತರ ಸಮಸ್ಯೆಗಳು ಇದ್ದೇ ಇರತಾವೇಳು' ಎಂದು ನನ್ನನ್ನು ಸಮಾಧಾನಿಸಿದ ಬೆಕ್ಕಣ್ಣ 'ಒಟ್ಟಾರೆ ಶ್ರೀಸಾಮಾನ್ಯರ ಬದುಕೇ ಹೊಂಡಾಗುಂಡಿ' ಎಂದು ಷರಾ ಬರೆಯಿತು!

ಚರ್ಚೆ

ಉರ್ದು: ಮಾಧ್ಯಮ- ಭಾಷೆಯ ಪ್ರಶ್ನೆ

ಉರ್ದುವನ್ನು ಮಾಧ್ಯಮವಾಗಿ ಸ್ವೀಕರಿಸುವುದಕ್ಕಿಂತ ಒಂದು ಭಾಷೆಯಾಗಿ ಕಲಿಯುವುದರಲ್ಲಿ ಮುಸ್ಲಿಮರ ಹಿತ ಇದೆ

• ಡಾ. ಸರ್ಫ್ರಾಜ್ ಚಂದ್ರಗುತ್ತಿ

ಉರ್ದು ಮಾಧ್ಯಮದಲ್ಲಿ ಕಲಿಯುತ್ತಿರುವ ಮಕ್ಕಳ ಶೈಕ್ಷಣಿಕ ಹಿನ್ನಡೆಯ ಕುರಿತಾದ ಮಲ್ಲಿಕಾರ್ಜುನ ಹೆಗ್ಗಳಗಿ ಹಾಗೂ ಎಂ.ಅಬ್ದುಲ್ ರೆಹಮಾನ್ ಪಾಷ ಅವರ ಅಭಿಪ್ರಾಯಗಳು (ಸಂಗತ, ಡಿ. 13 ಮತ್ತು 15) ಸಕಾಲಿಕವಾಗಿವೆ. ಉತ್ತರ ಕರ್ನಾಟಕದ ವಿಜಯಪುರ, ಬೀದರ್, ಕಲಬುರಗಿ ಜಿಲ್ಲೆಗಳಲ್ಲಿ ಮಾತ್ರ ಬೆರಳೆಣಿಕೆಯಷ್ಟು ಮುಸ್ಲಿಮೇತರರು ಪ್ರಾಥಮಿಕ ಹಂತದ ಶಾಲಾ ಶಿಕ್ಷಣದಲ್ಲಿ ಉರ್ದುವನ್ನು ಕಲಿಯುತ್ತಿದ್ದಾರೆ. ಇನ್ನುಳಿದಂತೆ, ಉರ್ದು ಶಾಲೆಗಳೆಂದರೆ ಅವು ಮುಸ್ಲಿಂ ಸಮುದಾಯದ ಮಕ್ಕಳಷ್ಟೇ ವಿದ್ಯಾಭ್ಯಾಸ ಮಾಡುವ ತಾಣಗಳಾಗಿವೆ.

ಕಾಲೇಜಿಗೆ ಬಂದಾಗ ಈ ಮಕ್ಕಳು ಕಲಿಕಾ ಮಾಧ್ಯಮದ ವಿಷಯವಾಗಿ ದಿಕ್ಕು ತಪ್ಪುತ್ತಾರೆ. ಕಾಲೇಜು ಹಂತದಲ್ಲಿ ಉರ್ದು ಮಾಧ್ಯಮದ ಬದಲು ಕನ್ನಡ ಇಲ್ಲವೆ ಇಂಗ್ಲಿಷನ್ನು ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯ ಆಗುತ್ತದೆ. ಇದಕ್ಕೆ ಹೊಂದಿಕೊಳ್ಳುವುದು ಕಷ್ಟವಾಗಿ, ಸಹಜವಾಗಿ ಅವರು ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಮುಸ್ಲಿಂ ಮಕ್ಕಳ ಶೈಕ್ಷಣಿಕ ಹಿಂದುಳಿದಿರುವಿಕೆಗೆ ಉರ್ದು ಮಾಧ್ಯಮ ಕೂಡಾ ಒಂದು ಕಾರಣವಾಗಿದೆ.

ಉರ್ದು ಮುಸ್ಲಿಮರ ಭಾಷೆ, ಧಾರ್ಮಿಕ ಭಾಷೆ ಎಂಬ ತಪ್ಪುಕಲ್ಪನೆಯನ್ನು ಬಿತ್ತಲಾಗಿದೆ. ಕರ್ನಾಟಕದ ಮುಸ್ಲಿಮರು ಈ ಮಾತನ್ನು ಸಂಪೂರ್ಣವಾಗಿ ನಂಬಿಬಿಟ್ಟಿದ್ದಾರೆ. ಉರ್ದು ಕರ್ನಾಟಕದಲ್ಲಿ ಹುಟ್ಟಿಬೆಳೆದ ಒಂದು ಸುಮಧುರ ಭಾಷೆ. ಇದನ್ನು ಹಿಂದೂ ಮುಸ್ಲಿಮರಾದಿಯಾಗಿ ಅನೇಕರು ಕಟ್ಟಿ ಬೆಳೆಸಿದ್ದಾರೆ. ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್, ಧರ್ಮಸಿಂಗ್ ಅವರಂತಹ ನಾಯಕರು ಉರ್ದುವಿನಲ್ಲಿ ಸೊಗಸಾಗಿ ಮಾತನಾಡುತ್ತಿದ್ದರು. ರಾಜೇಂದ್ರ ಸಿಂಗ್ ಬೇಡಿ, ಪ್ರೇಮ್‌ಚಂದ್ ಉರ್ದು ಸಾಹಿತ್ಯವನ್ನು ಬೆಳೆಸಿದ್ದಾರೆ. ಕನ್ನಡದ ಶಾಂತರಸ, ಪಂಚಾಕ್ಷರಿ ಹಿರೇಮಠ, ದೇವೇಂದ್ರಕುಮಾರ್ ಹಕಾರಿ... ಉರ್ದುವಿನಲ್ಲಿ ಸಾಹಿತ್ಯ ರಚಿಸಿದ್ದಾರೆ. ಹೀಗಿರುವಾಗ, ಉರ್ದು ಮುಸ್ಲಿಮರ ಭಾಷೆ ಎಂಬ ಮಾತಿಗೆ ಅರ್ಥ ಇದೆಯೇ?

ದಖನಿ ಉರ್ದು ಎಂದು ಕರೆಯಲಾಗುವ ಇಲ್ಲಿನ ಉರ್ದು ಹುಟ್ಟಿದ್ದು ನಮ್ಮ ರಾಜ್ಯದ ವಿಜಯಪುರ, ಬೀದರ್, ಕಲಬುರಗಿ ಹಾಗೂ ಮಹಾರಾಷ್ಟ್ರದ ಗಡಿಭಾಗದಲ್ಲಿ. ವಿಜಯಪುರದ ಆದಿಲ್‌ಶಾಹಿಗಳ ಕಾಲದಲ್ಲಿನ ಪರ್ಷಿಯನ್ನರು ಸ್ಥಳೀಯ ಸೈನಿಕರೊಂದಿಗೆ ಒಡನಾಡುವಾಗ ಹುಟ್ಟಿಕೊಂಡ ಭಾಷೆಯಿದು. ಉರ್ದು ಎಂಬುದಕ್ಕೆ 'ಸೈನಿಕ ಶಿಬಿರ' ಎಂಬ ಅರ್ಥವಿರುವುದನ್ನು ಗಮನಿಸಬಹುದು.

ಹಿಂದ್ವಿ ಎಂದು ಕರೆಯಲಾಗುವ ಇನ್ನೊಂದು ಬಗೆಯ ಉರ್ದು ಈಗಿನ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹುಟ್ಟಿತು. ಸರಿಸುಮಾರು ಇದೇ ಹೊತ್ತಿನಲ್ಲಿ ಭಾರತದಲ್ಲಿ ಹಿಂದಿ ಭಾಷೆ ಹುಟ್ಟಿತು ಎನ್ನಲಾಗಿದೆ. ಈ ಎರಡೂ ಸೋದರ ಭಾಷೆಗಳಾಗಿವೆ. ಹಿಂದಿ ತನ್ನ ಭಾಷಿಕ ಶರೀರಕ್ಕಾಗಿ ದೇವನಾಗರಿ ಲಿಪಿಯನ್ನೂ ಉರ್ದು ಪರ್ಷಿಯನ್ ಲಿಪಿಯನ್ನೂ ಅನುಸರಿಸಿದವು. ಹಿಂದಿಯಲ್ಲಿ ಸಂಸ್ಕೃತ ಮೂಲದ ಪದಗಳು ಹಾಗೂ ಉರ್ದುವಿನಲ್ಲಿ ಪರ್ಷಿಯನ್ ಪದಬಳಕೆಯು ಸಹಜವಾಗಿ ಸ್ವೀಕೃತವಾದವು. ಉರ್ದು, ಹಿಂದಿ ಮಾತ್ರವಲ್ಲದೆ ಈ ದೇಶದ ನೆಲದಲ್ಲಿ ಸಾವಿರಾರು ಭಾಷೆಗಳು ಹುಟ್ಟಿ ವಿಕಾಸಗೊಂಡಿವೆ. ಲೋಹಿಯಾ ಅಭಿಪ್ರಾಯಪಟ್ಟಿರುವಂತೆ ಇವುಗಳು ಜಾತ್ಯತೀತ ಸ್ವರೂಪವನ್ನು ಹೊಂದಿದ್ದು ಅತ್ಯಂತ ಸಮೃದ್ಧ ಭಾಷೆಗಳಾಗಿವೆ. ಉತ್ತರ ಕರ್ನಾಟಕದ ಮಣ್ಣಿನಲ್ಲಿ ಹುಟ್ಟಿದ ಉರ್ದುವನ್ನು ವಿಶೇಷವಾಗಿ ಮುಸ್ಲಿಮರಲ್ಲಿ ಸುನ್ನಿ ಸಮಾಜದವರು ಬಹುವಾಗಿ ಹಚ್ಚಿಕೊಂಡಿದ್ದಾರೆ. ಉಳಿದಂತೆ ಮಲಬಾರಿ, ಬ್ಯಾರಿ, ಪಿಂಜಾರ, ಶಿಯಾ ಸಮುದಾಯದವರು ಕನ್ನಡವನ್ನು ಶೈಕ್ಷಣಿಕ ಭಾಷೆಯಾಗಿ ಅನುಸರಿಸುತ್ತಿರುವುದನ್ನು ಗಮನಿಸಬೇಕು.

ಮಕ್ಕಳನ್ನು ಶಾಲೆಗೆ ಸೇರಿಸುವಾಗ 'ನಮ್ಮ ಧರ್ಮದ ಭಾಷೆಯಾದ ಉರ್ದು ಶಾಲೆಗಳಿಗೆ ಸೇರಿಸಿ' ಎನ್ನುವ ಮಾತು ಕೇಳಿಬರುತ್ತದೆ. ಮನೆಗೆ ಸಮೀಪದಲ್ಲಿ ಉರ್ದು ಶಾಲೆ ಲಭ್ಯವಿಲ್ಲದಿದ್ದಲ್ಲಿ ಆ ಮಕ್ಕಳು ಶಿಕ್ಷಣದಿಂದಲೇ ವಂಚಿತರಾಗಿರುವುದೂ ಇದೆ. ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳದಲ್ಲಿನ ಮುಸ್ಲಿಮರಿಗೆ ಉರ್ದು ಮಾಧ್ಯಮದ ಸಮಸ್ಯೆಯಿಲ್ಲ. ಪಶ್ಚಿಮ ಬಂಗಾಳದ ಮುಸ್ಲಿಮರು ಸ್ಥಳೀಯ ಬಂಗಾಳಿ ಭಾಷೆಯನ್ನು ಸುನೇರಿ ಬಂಗಾಳಿ (ಬಂಗಾರದ ಬಂಗಾಳಿ) ಎಂದು ಸಂಭ್ರಮಿಸುತ್ತಾರೆ.

ರಾಜ್ಯದಲ್ಲಿ ಉರ್ದು ಮಾಧ್ಯಮದ ಶಾಲೆಗಳು ಗಣನೀಯ ಸಂಖ್ಯೆಯಲ್ಲಿವೆ. ಆದರೆ ಹೆಚ್ಚಿನ ಶಾಲೆಗಳು ಮೂಲಸೌಕರ್ಯಗಳ ಕೊರತೆ ಎದುರಿಸುತ್ತಿವೆ. ಶಿಕ್ಷಕರ ಕೊರತೆಯೂ ಬಹಳಷ್ಟಿದೆ. ಈ ಶಾಲೆಗಳಲ್ಲಿ ಓದುತ್ತಿರುವವರು ಬಡಪಾಯಿ ಮುಸ್ಲಿಮರ ಮಕ್ಕಳು. ಉಳ್ಳವರ ಮಕ್ಕಳು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದುತ್ತಿದ್ದಾರೆ. ಇನ್ನೂ ಕುಚೋದ್ಯದ ಸಂಗತಿಯೆಂದರೆ, ಮನೆಮನೆಗಳಿಗೆ ಹೋಗಿ, ನಮ್ಮವರ ಮಕ್ಕಳನ್ನು ಉರ್ದು ಶಾಲೆಗೇ ಸೇರಿಸಿ ಎನ್ನುವ ಉರ್ದು ಮಾಸ್ತರರ ಮಕ್ಕಳು ಯಾವ ಶಾಲೆಗಳಲ್ಲಿ ಓದುತ್ತಿದ್ದಾರೆ ಎಂದೂ ಕೇಳಬೇಕಾಗಿದೆ.

ಹೀಗೆ ಮುಸ್ಲಿಮರು ಭಾಷೆಯ ನೆಪದಲ್ಲಿ ಬಹುಸಂಖ್ಯಾತರಿಂದ ಬೇರ್ಪಟ್ಟು 'ದ್ವೀಪಜೀವಿ'ಗಳಾಗುವುದು ಸರಿಯಾದ ನಡೆಯಾಗಲಾರದು. ಈ ನೆಲದ ಭಾಷೆಯಾದ ಕನ್ನಡಕ್ಕೆ ಯಾವ ಜಾತಿ, ಮತದ ಹಂಗಿಲ್ಲ. ಯಾವುದೇ ಸಮಾಜದ ಶಕ್ತಿಯು ಅವರ ಶೈಕ್ಷಣಿಕ ಅರ್ಹತೆಯನ್ನು ಅವಲಂಬಿಸಿರುತ್ತದೆ ಎಂಬುದನ್ನು ಮರೆಯಬಾರದು. ಈ ಕಾರಣದಿಂದ ಮುಸ್ಲಿಮರು ಕನ್ನಡ ಇಲ್ಲವೆ ವರ್ತಮಾನದ ಅಗತ್ಯವಾಗಿರುವ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವುದು ಜಾಣತನದ ನಡೆಯಾಗಿದೆ. ಉರ್ದುವನ್ನು ಮಾಧ್ಯಮವಾಗಿ ಸ್ವೀಕರಿಸುವುದಕ್ಕಿಂತ ಒಂದು ಭಾಷೆಯಾಗಿ ಕಲಿಯುವುದರಲ್ಲಿ ಮುಸ್ಲಿಮರ ಹಿತ ಇದೆ.

ವಾಚಕರ ವಾಣಿ

ಈ ನೀಚ ಪ್ರವೃತ್ತಿಗೆ ಕಡಿವಾಣ ಹಾಕಬೇಕು

ಸುಸಂಸ್ಕೃತ ಬದುಕಿಗೆ ಪ್ರತೀ ವಿದ್ಯಾರ್ಥಿಗೆ ತಳಮಟ್ಟದಲ್ಲೇ ಭದ್ರ ಬುನಾದಿ ಹಾಕುವ ಮಹತ್ವದ ಹೊಣೆಗಾರಿಕೆ ಶಿಕ್ಷಕ ವೃತ್ತಿಗೆ ಇದೆ. ಶಿಕ್ಷಕ– ವಿದ್ಯಾರ್ಥಿ ಸಂಬಂಧಗಳಲ್ಲಿ ಏನೇ ಬದಲಾವಣೆ ಆಗಿದ್ದರೂ ಶಿಕ್ಷಕರನ್ನು ಈಗಲೂ ಎಲ್ಲರೂ ಗೌರವಭಾವದಿಂದ ಕಾಣುತ್ತಾರೆ. ಇಂತಹ ವೃತ್ತಿಯ ಘನತೆ ಕುಗ್ಗಿಸುವಂತಹ ವಿದ್ಯಮಾನಗಳು ಈಚೆಗೆ ಪದೇ ಪದೇ ವರದಿಯಾಗುತ್ತಿರುವುದು ಅತ್ಯಂತ ಬೇಸರದ ಸಂಗತಿ.

ಶಿಕ್ಷಕರೆನಿಸಿಕೊಂಡವರೇ ವಿದ್ಯಾರ್ಥಿನಿಯರ ಜೊತೆ ಅಸಭ್ಯವಾಗಿ ನಡೆದುಕೊಂಡಿರುವುದು ಅಕ್ಷಮ್ಯ. ಇಂಥ ಘಟನೆಗಳು ಬೆರಳೆಣಿಕೆಯಷ್ಟೇ ಆಗಿದ್ದರೂ ಇವು ಬೀರುವ ಪರಿಣಾಮ ದೊಡ್ಡದು. ಇಂತಹ ಪ್ರವೃತ್ತಿಗೆ ಕಡಿವಾಣ ಹಾಕಲೇಬೇಕು. ತಪ್ಪಿತಸ್ಥ ಶಿಕ್ಷಕರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಅಂಥವರಿಗೆ ಶಿಕ್ಷೆ ಆಗಿರುವುದು ಸಮಾಜಕ್ಕೆ ಗೊತ್ತಾಗಬೇಕು. ಆಗಲೇ ಈ ನೀಚ ಪ್ರವೃತ್ತಿಯನ್ನು ತೊಡೆದುಹಾಕಲು ಸಾಧ್ಯ.

ಅಮೂಲ್ಯ ಟಿ.ಕೆ., ಬೇಲೂರು

ನೈತಿಕ ಅಧಃಪತನದ ದ್ಯೋತಕ

ಮುಂಬೈನಲ್ಲಿ ನಡೆಯಲಿರುವ ಜಿ–20 ಸಭೆಯ ಕಾರಣದಿಂದಾಗಿ ಯೋಗೇಶ್ವರಿ ಕೊಳೆಗೇರಿಯನ್ನು ಹಸಿರು ಪರದೆಯ ಮೂಲಕ ಮುಚ್ಚಿದ ದೃಶ್ಯ (ಪ್ರಜಾ., ಡಿ.16) ಸರ್ಕಾರದ ಘನತೆಗೆ ಧಕ್ಕೆಯನ್ನುಂಟು ಮಾಡುವಂತಹುದು ಮತ್ತು ಅದನ್ನು ಸಮರ್ಥಿಸುವವರ ಮಾನಸಿಕ ದಿವಾಳಿತನವನ್ನು ಸೂಚಿಸುವಂತಹುದಾಗಿದೆ. ಕೊಳೆಗೇರಿ ನಿವಾಸಿಗಳ ದುಃಸ್ಥಿತಿಯನ್ನು ಮರೆಮಾಚುವ ಈ ಕ್ರಿಯೆ, ಸರ್ಕಾರದ ನೈತಿಕ ಅಧಃಪತನವನ್ನು ತೋರಿಸುತ್ತದೆ.

2020ರಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದ ಡೊನಾಲ್ಡ್ ಟ್ರಂಪ್ ಅವರು ಅಹಮದಾಬಾದ್‌ಗೆ ಆಗಮಿಸಿದಾಗ ಅವರ ಕಣ್ಣಿಗೆ ಕೊಳೆಗೇರಿಗಳ ದೃಶ್ಯ ಕಾಣಬಾರದೆಂದು ಗೋಡೆಯನ್ನೇ ಕಟ್ಟಲಾಗಿತ್ತು. ಕೊಳೆಗೇರಿಗಳ ದಯನೀಯ ಸ್ಥಿತಿಯನ್ನು ಹೋಗಲಾಡಿಸುವ ಇಚ್ಛಾಶಕ್ತಿ ತೋರುವಲ್ಲಿ ವಿಫಲವಾಗಿರುವ ಸರ್ಕಾರವು ಬಡವರ ಬಗ್ಗೆ ತನಗೆ ಗೌರವ ಇಲ್ಲ ಎಂಬುದನ್ನು ಈ ಮೂಲಕ ತೋರಿಸಿಕೊಂಡಿದೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಕಲಿಕೆಗೆ ಬೇಕಿರುವುದು ಉತ್ತೇಜನ, ಮಾತ್ರೆ ಅಲ್ಲ!

ಪರೀಕ್ಷೆ ಸಮೀಪಿಸಿದರೆ ಸಾಕು, ಓದುವುದಕ್ಕೆ ಸಂಬಂಧಿಸಿದಂತೆ ಮಕ್ಕಳ ಮೇಲೆ ಕೆಲವು ಪೋಷಕರು ವಿಪರೀತ ಒತ್ತಡ ಹಾಕುತ್ತಾರೆ. ಕೆಲವರಂತೂ ನೆನಪಿನ ಶಕ್ತಿ ಹೆಚ್ಚಿಸುವ ಮಾತ್ರೆಗಳ ಮೊರೆ ಹೋಗುತ್ತಾರೆ. ಅಲ್ಲಿ ಇಲ್ಲಿ ಓದಿದ್ದನ್ನು, ಟಿ.ವಿ.ಗಳಲ್ಲಿ ನೋಡಿದನ್ನು ನಂಬಿ ಅದನ್ನು ಮಕ್ಕಳ ಮೇಲೆ ಪ್ರಯೋಗಿಸುವುದುಂಟು. ಜ್ಯೋತಿಷಿಗಳ ಸಲಹೆಯಂತೆ ಯಂತ್ರ, ಮಂತ್ರಗಳ ಮೊರೆ ಹೋಗುವವರ ಸಂಖ್ಯೆಯೂ ಕಡಿಮೆ ಇಲ್ಲ.

ಇವುಗಳ ಬದಲು ಬೆಳೆಯುವ ಮಕ್ಕಳಿಗೆ ಪೋಷಕಾಂಶಯುಕ್ತ ಆಹಾರ ನೀಡಿ, ಆಟ, ಪಾಠ, ನಿದ್ರೆಗೆ ಸಮಯ ಹೊಂದಿಸಿಕೊಟ್ಟರೆ ಮತ್ತು ತುಸು ಶಿಸ್ತುಬದ್ಧವಾಗಿ ಕಲಿಯಲು ಬೇಕಾದಂತಹ ವಾತಾವರಣ ರೂಪಿಸಿಕೊಟ್ಟರೆ ಒಳ್ಳೆಯ ಅಂಕ ಸಿಕ್ಕೇ ಸಿಗುತ್ತದೆ. ಇದರೊಂದಿಗೆ ಪೋಷಕರಿಂದ ಒಂದಷ್ಟು ಉತ್ತೇಜನ ಮತ್ತು ನಾಲ್ಕು ಪ್ರೀತಿಯ ಮಾತು ದೊರೆತರೆ ಮಕ್ಕಳು ಓದಿನಲ್ಲಿ ದಾಂಗುಡಿ ಇಡುವುದರಲ್ಲಿ ಸಂದೇಹವೇ ಇಲ್ಲ.

ಎಂ.ಎಸ್. ಇಂಚರ ದತ್ತ, ಬೆಂಗಳೂರು

ಗುರು ಪರಂಪರೆಗೆ ಮಸಿ ಬಳಿಯುವ ಕೃತ್ಯಗಳು

'ಹರ ಮುನಿದರೆ ಗುರು ಕಾಯುವ, ಗುರು ಮುನಿದರೆ ಹರ ಕಾಯಲಾರ' ಎಂಬುದು ಗುರುವಿನ ಮಹತ್ವ ಸಾರುವ ಜನಜನಿತ ಮಾತು. ನಮ್ಮ ನಾಡಿಗೆ ಬಹುದೊಡ್ಡ ಗುರು ಪರಂಪರೆಯೇ ಇದೆ. ಅದಕ್ಕೆ ಮಸಿ ಬಳಿಯುವಂತಹ ಕೆಲವು ಕೃತ್ಯಗಳು ಈಚೆಗೆ ನಡೆದಿರುವುದು ಅತ್ಯಂತ ದುರದೃಷ್ಟಕರ. ಪಾಂಡವಪುರ ತಾಲ್ಲೂಕಿನ ಪ್ರೌಢಶಾಲೆಯೊಂದರ ಮುಖ್ಯ ಶಿಕ್ಷಕನನ್ನು ಹಾಸ್ಟೆಲ್ ಆವರಣದಲ್ಲಿ ವಿದ್ಯಾರ್ಥಿನಿಯರು ಅಟ್ಟಾಡಿಸಿಕೊಂಡು ಹೋಗಿ ಸೌದೆ, ಬಡಿಗೆಯಿಂದ ಹೊಡೆದಿದ್ದಾರೆ ಎಂದು ವರದಿಯಾಗಿದೆ. ಇದಕ್ಕೆ ಕಾರಣ: ಅನುಚಿತ ವರ್ತನೆ.

ಅತ್ತ ನವದೆಹಲಿಯ ಪ್ರಾಥಮಿಕ ಶಾಲೆಯೊಂದರಲ್ಲಿ ಶಿಕ್ಷಕಿಯೊಬ್ಬರು ಐದನೇ ತರಗತಿ ವಿದ್ಯಾರ್ಥಿನಿಗೆ ಕತ್ತರಿಯಿಂದ ಹೊಡೆದು ಶಾಲೆಯ ಮೊದಲ ಮಹಡಿಯಿಂದ ಕೆಳಗೆ ಎಸೆದಿದ್ದಾರೆ. ಗುರುಗಳು ಅನ್ನಿಸಿಕೊಂಡವರು ಮಾಡುವ ಕೆಲಸಗಳೇ ಇವು? ಏನಾಗಿದೆ ಇವರಿಗೆ? ಮಕ್ಕಳ ಭವಿಷ್ಯ ರೂಪಿಸಬೇಕಾದ ಶಿಕ್ಷಕರೇ ಮಕ್ಕಳ ಬದುಕಿನ ಜೊತೆ ಚೆಲ್ಲಾಟವಾಡುತ್ತಿರುವುದು ಅತ್ಯಂತ ಬೇಸರದ ಸಂಗತಿ. ಇಂತಹ ಅನುಚಿತ ವರ್ತನೆಗಳನ್ನು ಯಾವುದೇ ಕಾರಣಕ್ಕೂ ಸಹಿಸಿಕೊಳ್ಳಬಾರದು. ಕಾನೂನಿನ ಅಡಿ ಕಠಿಣ ಕ್ರಮ ಜರುಗುವಂತೆ ಸ್ಥಳೀಯ ಸಂಸ್ಥೆಗಳು ಅಥವಾ ಸರ್ಕಾರ ನೋಡಿಕೊಳ್ಳಬೇಕು.

ತಿಮ್ಮೇಶ್ ಎಚ್. ಗೌರೀಪುರ, ಜಗಳೂರು

ಗಡಿ ವಿವಾದ: ಮರ್ಮ ಅರಿಯಬೇಕಿದೆ ಮತದಾರ

'ಮಹಾರಾಷ್ಟ್ರ ಮತ್ತು ಕರ್ನಾಟಕ ನಡುವಿನ ಗಡಿ ವಿವಾದವನ್ನು ಪರಿಹರಿಸಲು ಘರ್ಷಣೆಯ ಮಾರ್ಗ ಅನುಸರಿಸುವ ಅಗತ್ಯವಿಲ್ಲ' ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಮನೋಹರ ಜೋಷಿ ಅವರು ಇಂದು ರಾಜ್ಯ ವಿಧಾನಸಭೆಗೆ ತಿಳಿಸಿದರು. ಇದು, ಪ್ರಜಾವಾಣಿಯ '25 ವರ್ಷಗಳ ಹಿಂದೆ' ಅಂಕಣದಲ್ಲಿ ಪ್ರಕಟವಾಗಿರುವ ಸುದ್ದಿ (ಡಿ. 17). ಆ ರಾಜ್ಯದ ಮೈತ್ರಿ ಸರ್ಕಾರದಲ್ಲಿ ಬಿಜೆಪಿ ಈಗ ಪ್ರಬಲ ಪಾಲುದಾರಿಕೆ ಪಕ್ಷ. ಆದರೆ ಜೋಷಿ ಅವರಂತೆ ಬುದ್ಧಿ ಹೇಳುವವರು ಅಲ್ಲಿ ಈಗ ಇದ್ದಂತಿಲ್ಲ. ಗಡಿ ಸಮಸ್ಯೆಯನ್ನು ಜೀವಂತವಾಗಿಟ್ಟು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಹುನ್ನಾರ ನಡೆದಿದೆ ಎಂದು ಅನ್ನಿಸುತ್ತಿದೆ.

ಚುನಾವಣೆ ಸಮೀಪಿಸಿದಾಗ ಈ ವಿವಾದ 'ಉಗ್ರ' ರೂಪ ಪಡೆಯುತ್ತದೆ. ಚುನಾವಣೆ ಮುಗಿದ ನಂತರ ತನ್ನಿಂದತಾನೆ ತಣ್ಣಗಾಗುತ್ತದೆ. ಈ ಮರ್ಮವನ್ನು ಮತದಾರ ಪ್ರಭುಗಳು ಅರಿಯಬೇಕು. ವಿವಾದವನ್ನು ಪದೇಪದೇ ಕೆದಕುವ ಸ್ವಾರ್ಥ ಶಕ್ತಿಗಳಿಗೆ ಬುದ್ಧಿ ಕಲಿಸಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಿಷೇಧದ ಬಳಿಕ ಹೆಸರು ಬದಲಿಸಿದ ಯೂನಿಯನ್ ಕಾರ್ಬೈಡ್

ಸರ್ಕಾರದ ಜತೆಗೇ ವಹಿವಾಟು

• ಶ್ರೀಗಿರೀಶ್ ಜಾಲಿಹಾಳ್, ಕುಮಾರ ಸಂಭವ

ಜಗತ್ತಿನ ಅತ್ಯಂತ ದೊಡ್ಡ ಕೈಗಾರಿಕಾ ದುರಂತ ಎಂದು ಭೋಪಾಲ್‌ನ ಅನಿಲ ದುರಂತ ಕುಖ್ಯಾತವಾಗಿದೆ. 1984ರ ಈ ದುರಂತಕ್ಕೆ, ದುರಂತದ ದಿನವೇ ಸತ್ತವರು ಮತ್ತು ನಂತರದ ದಿನಗಳಲ್ಲಿ ಸತ್ತವರೂ ಸೇರಿ 15,000ಕ್ಕೂ ಹೆಚ್ಚು ಜನರು ಬಲಿಯಾಗಿದ್ದರು. ಐದು ಲಕ್ಷಕ್ಕೂ ಹೆಚ್ಚು ಜನರು ಅಂಗವೈಕಲ್ಯ ಸೇರಿ ಹಲವು ದೈಹಿಕ ನ್ಯೂನತೆಗಳಿಗೆ ಗುರಿಯಾಗಿದ್ದರು. ಇಂತಹದ್ದೊಂದು ದುರಂತಕ್ಕೆ ಕಾರಣವಾಗಿದ್ದ ಯೂನಿಯನ್ ಕಾರ್ಬೈಡ್ ಇಂಡಿಯಾ ಲಿಮಿಡೆಟ್ (ಯುಸಿಐಎಲ್) ಮತ್ತು ಅದರ ಮಾತೃ ಸಂಸ್ಥೆ ಯೂನಿಯನ್ ಕಾರ್ಬೈಡ್ ಕಾರ್ಪೊರೇಷನ್ (ಯುಸಿಸಿ) ಕಂಪನಿಗಳನ್ನು ಭಾರತದ ನ್ಯಾಯಾಲಯಗಳು ನಿಷೇಧಿಸಿದ್ದವು. ಈ ಕಂಪನಿಗಳು ಭಾರತದಲ್ಲಿ ಯಾವುದೇ ವ್ಯವಹಾರ ನಡೆಸುವುದಕ್ಕೆ ಮತ್ತು ಅವುಗಳ ಉತ್ಪನ್ನಗಳನ್ನು ಮಾರಾಟಕ್ಕೆ ನಿಷೇಧ ಹೇರಲಾಗಿತ್ತು. ಆದರೆ ದುರಂತ ನಡೆದ ಮೂರೇ ವರ್ಷದಲ್ಲಿ ಈ ಕಂಪನಿಯು ಷೆಲ್ (ದಾಖಲೆಗಳಲ್ಲಿ ಮಾತ್ರ ಅಸ್ತಿತ್ವದಲ್ಲಿರುವ ಕಂಪನಿಗಳು) ಕಂಪನಿಗಳನ್ನು ಆರಂಭಿಸುವ ಮೂಲಕ, ಭಾರತದಲ್ಲಿ ತನ್ನ ವಹಿವಾಟನ್ನು ಆರಂಭಿಸಿತ್ತು ಎಂಬುದು ಕಂಪನಿಯ ಆಂತರಿಕ ದಾಖಲೆಗಳಿಂದ ಈಗ ಪತ್ತೆಯಾಗಿದೆ.

ನಿಷೇಧಕ್ಕೆ ಒಳಗಾಗಿದ್ದ ಕಂಪನಿಯು ಬೇರೊಂದು ಕಂಪನಿಯ ಹೆಸರಲ್ಲಿ ಭಾರತಕ್ಕೆ ಬಂದಿರುವುದು ಗೊತ್ತಿದ್ದರೂ, ಭಾರತ ಸರ್ಕಾರ ಮತ್ತು ಹಲವು ರಾಜ್ಯ ಸರ್ಕಾರಗಳ ಅಧೀನ ಸಂಸ್ಥೆಗಳು ಈ ಕಂಪನಿಯ ಜತೆಗೆ ಕೋಟ್ಯಂತರ ರೂಪಾಯಿಯ ವಹಿವಾಟು ನಡೆಸಿವೆ. ಯುಸಿಸಿ ನೌಕರರು ಈ ಕಂಪನಿಗಳನ್ನು ತಮ್ಮ ದಾಖಲೆಗಳಲ್ಲಿ 'ಫ್ರಂಟ್' ಮತ್ತು 'ಡಮ್ಮಿ' ಕಂಪನಿಗಳು ಎಂದು ಉಲ್ಲೇಖಿಸಿದ್ದಾರೆ. ಭಾರತದ ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳು ತಾಮ್ರದ ತಂತಿಗಳು, ಪಿವಿಸಿ ಮತ್ತು ವಿವಿಧ ರಾಸಾಯನಿಕ ಉತ್ಪನ್ನಗಳಿಗೆ ಆಹ್ವಾನಿಸುತ್ತಿದ್ದ ಟೆಂಡರ್‌ಗಳಿಗೆ, ಈ ನಕಲಿ ಕಂಪನಿಗಳು ಟೆಂಡರ್ ಸಲ್ಲಿಸುತ್ತಿದ್ದವು. ಭಾರತದ ಕಂಪನಿಗಳಿಗೆ ಅಗತ್ಯವಿದ್ದ ಉತ್ಪನ್ನಗಳನ್ನು ಯುಸಿಸಿಯಿಂದ ಈ ನಕಲಿ ಕಂಪನಿಗಳು ಖರೀದಿಸುತ್ತಿದ್ದವು. ಆ ಉತ್ಪನ್ನಗಳ ಲೇಬಲ್‌ಗಳನ್ನು ಬದಲಿಸಿ, ಭಾರತದ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಮಾರಾಟ ಮಾಡುತ್ತಿದ್ದವು. ಹೀಗೆ ಖರೀದಿಸಲಾದ ಉತ್ಪನ್ನಗಳು ಮತ್ತು ರಾಸಾಯನಿಕ ವಸ್ತುಗಳಿಂದ ಹಲವು ದಶಕಗಳ ಕಾಲ ಭಾರತದಲ್ಲಿ ಹಲವು ಗೃಹೋಪಯೋಗಿ ವಸ್ತುಗಳನ್ನು ತಯಾರಿಸಲಾಗಿದೆ.

ಭಾರತದಲ್ಲಿ ವಹಿವಾಟು ನಡೆಸಲು ಯುಸಿಸಿಗೆ ನಿಷೇಧ ಇದ್ದ ಮತ್ತು ಅದರ ಸ್ವತ್ತುಗಳೆಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡಿದ್ದ ಕಾರಣ, ಇಲ್ಲಿ ವ್ಯಾಪಾರ ಸಾಧ್ಯವಿರಲಿಲ್ಲ. ಹೀಗಾಗಿಯೇ ಯುಸಿಸಿಯು ಭಾರತದಲ್ಲಿ ವಹಿವಾಟು ನಡೆಸಲೆಂದೇ ಬೇರೆ ಕಂಪನಿಗಳನ್ನು ಹುಟ್ಟು ಹಾಕಿತ್ತು. 'ಹೀಗೆ ಹುಟ್ಟುಹಾಕಲಾದ ಕಂಪನಿಗಳು ಭಾರತದಲ್ಲಿ ವ್ಯಾಪಾರ ನಡೆಸಲು ಮತ್ತು ಭಾರತದಲ್ಲಿನ ನಿಷೇಧವನ್ನು ತಪ್ಪಿಸಲು ಇರುವ ಕಾನೂನಾತ್ಮಕ ಅಗತ್ಯ' ಎಂದು ಯುಸಿಸಿ ತನ್ನ ಆಂತರಿಕ ದಾಖಲೆಗಳಲ್ಲಿ ವಿವರಿಸಿದೆ. 'ಈ ಕಂಪನಿಗಳು ನಮ್ಮ ಎಕ್ಸ್‌ಟೆಂಡೆಡ್ ಆರ್ಮ್‌ಗಳಾಗಿವೆ' ಎಂದು ಯುಸಿಸಿ ತಮ್ಮ ನೌಕರರಿಗೆ ಹೇಳಿರುವುದು ಈ ದಾಖಲೆಗಳಿಂದ ಗೊತ್ತಾಗಿದೆ.

ರಿಪೋರ್ಟರ್ಸ್ ಕಲೆಕ್ಟಿವ್‌ನ ವರದಿ

1987ರ ನವೆಂಬರ್ 29ರಂದು ಯುಸಿಸಿ ಮತ್ತು ಅದರ ಅಧೀನ ಸಂಸ್ಥೆಗಳ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿತ್ತು. ಆದರೆ ಅದಕ್ಕೆ 15 ದಿನ ಮೊದಲೇ, ನವೆಂಬರ್ 14ರಂದು ಭಾರತದಲ್ಲಿನ ತನ್ನೆಲ್ಲಾ ವಹಿವಾಟುಗಳನ್ನು ನಡೆಸುವ ಹಕ್ಕನ್ನು ಯುಸಿಸಿಯು ವಿಸಾ ಪೆಟ್ರೊಕೆಮಿಕಲ್ಸ್ ಕಂಪನಿಗೆ ವರ್ಗಾಯಿಸಿತ್ತು. ಏಷ್ಯಾದ ದೇಶಗಳ ವಹಿವಾಟನ್ನು ಯುಸಿಸಿಯ ಮತ್ತೊಂದು ಅಂಗಸಂಸ್ಥೆ ಯುಸಿ ಈಸ್ಟರ್ನ್ ಇಂಕ್ (ಯುಸಿಇಐ) ನೋಡಿಕೊಳ್ಳುತ್ತಿತ್ತು. ಈ ಒಪ್ಪಂದವನ್ನು ಯುಸಿಇಐ ಮಾಡಿಕೊಂಡಿತ್ತು. 'ಕಂಪನಿಯ ಉತ್ಪನ್ನಗಳ ಪ್ರಚಾರ ಮತ್ತು ಮಾರಾಟ ವಿಸಾ ಪೆಟ್ರೊಕೆಮಿಕಲ್ಸ್‌ನ ಜವಾಬ್ದಾರಿ' ಎಂದು ಒಪ್ಪಂದ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು. ಅಂದಿನಿಂದ ವಿಸಾ ಪೆಟ್ರೊಕೆಮಿಕಲ್ಸ್ ಕಂಪನಿಯೇ, ಯುಸಿಸಿಯ ಎಲ್ಲಾ ಉತ್ಪನ್ನಗಳನ್ನು ಭಾರತದಲ್ಲಿ ಮಾರಾಟ ಮಾಡುತ್ತಿತ್ತು. ನಂತರದ ವರ್ಷಗಳಲ್ಲಿ ಯುಸಿಇಐ ಅನ್ನು ಯುನೈಟೆಡ್ ಕಾರ್ಬೈಡ್ ಏಷಿಯಾ ಪೆಸಿಫಿಕ್ (ಯುಸಿಎಪಿ) ಎಂದು ಬದಲಿಸಲಾಯಿತು.

'ಭಾರತದಲ್ಲಿ ಯುಸಿಐಎಲ್ ಅನ್ನು ಮುಚ್ಚಬೇಕಿದ್ದರಿಂದ, ಹೊಸದಾಗಿ ವಿಸಾ ಪೆಟ್ರೊಕೆಮಿಕಲ್ಸ್ ಎಂಬ ಕಂಪನಿ ಸ್ಥಾಪಿಸಲಾಯಿತು. ಯುಸಿಸಿ ಕಂಪನಿಯ ಅಂತರರಾಷ್ಟ್ರೀಯ ವಹಿವಾಟುಗಳನ್ನು ನೋಡಿಕೊಳ್ಳುತ್ತಿದ್ದ ನೌಕರರೇ ಈ ವಿಸಾ ಪೆಟ್ರೊಕೆಮಿಕಲ್ಸ್ ಅನ್ನು ಸ್ಥಾಪಿಸಿದ್ದರು' ಎಂಬ ವಿಚಾರವನ್ನು ವಿಸಾ ಪೆಟ್ರೊಕೆಮಿಕಲ್ಸ್‌ನ 1994ರ ವಾರ್ಷಿಕ ವಹಿವಾಟು ಯೋಜನೆ ದಾಖಲೆಗಳಲ್ಲಿ ಉಲ್ಲೇಖಿಸಲಾಗಿದೆ.

1994ರಲ್ಲಿ ಮುಂಬೈನ ಅಜಯ್ ಮಿತ್ತಲ್ ಎಂಬ ವ್ಯಕ್ತಿ ಯುಸಿಸಿ ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಾರೆ. ಭಾರತದಲ್ಲಿ ಯುಸಿಸಿಯ ವಹಿವಾಟು ನಡೆಸುವುದು ಹೇಗೆ ಎಂಬುದರ ಬಗ್ಗೆ ಅಜಯ್ ಮಿತ್ತಲ್ ಹೊಸ ಯೋಜನೆಗಳನ್ನು ವಿವರಿಸುತ್ತಾರೆ. ಅವರ ಯೋಜನೆ, 'ಅದ್ಭುತ ಮತ್ತು ಪ್ರಾಮಾಣಿಕ' ಎಂದು ಕಂಪನಿಯು ಹೇಳಿಕೊಂಡಿದೆ. ಕಂಪನಿಯ ಅಧಿಕಾರಿಗಳ ಮಧ್ಯೆ ಹಂಚಿಕೆಯಾದ ಫ್ಯಾಕ್ಸ್ ದಾಖಲೆಗಳಲ್ಲಿ ಇದನ್ನು ಉಲ್ಲೇಖಿಸಲಾಗಿದೆ.

ಅಜಯ್ ಮಿತ್ತಲ್ ಅವರು 1993ರಲ್ಲಿ ಮೆಗಾ ಗ್ಲೋಬಲ್ ಸರ್ವೀಸಸ್ ಎಂಬ ಕಂಪನಿಯನ್ನು ಸ್ಥಾಪಿಸಿದ್ದರು. 1994ರಲ್ಲಿ ಯುಸಿಎಪಿಯು ವಿಸಾ ಪೆಟ್ರೊಕೆಮಿಕಲ್ಸ್ ಜತೆಗಿನ ಒಪ್ಪಂದವನ್ನು ರದ್ದುಪಡಿಸಿತು ಮತ್ತು ಮೆಗಾ ಗ್ಲೋಬಲ್ ಸರ್ವೀಸಸ್ ಜತೆಗೆ ಒಪ್ಪಂದ ಮಾಡಿಕೊಂಡಿತು. 'ಯುಸಿಸಿಯಿಂದ ಉತ್ಪನ್ನಗಳನ್ನು ಖರೀದಿಸಿ, ಭಾರತದಲ್ಲಿನ ಗ್ರಾಹಕರಿಗೆ ಮಾರಾಟ ಮಾಡಬೇಕು' ಎಂದು ಒಪ್ಪಂದದಲ್ಲಿ ಉಲ್ಲೇಖಿಸಲಾಯಿತು. ಆನಂತರ ಯುಸಿಸಿ ಉತ್ಪನ್ನಗಳನ್ನು 'ಮೆಗಾ ಗ್ಲೋಬಲ್ ಸರ್ವೀಸಸ್' ಹೆಸರಿನಲ್ಲೇ ಮಾರಲಾಯಿತು. ನಂತರದ ಎರಡೇ ತಿಂಗಳಲ್ಲಿ ವಿಸಾ ಪೆಟ್ರೊಕೆಮಿಕಲ್ಸ್‌ನ ಶೇ 89.5ರಷ್ಟು ಷೇರುಗಳನ್ನು ಅಜಯ್ ಮಿತ್ತಲ್ ಖರೀದಿಸಿದರು. ನಂತರದ ವರ್ಷಗಳಲ್ಲಿ ಮೆಗಾ ಗ್ಲೋಬಲ್ ಸರ್ವೀಸಸ್ ಮತ್ತು ವಿಸಾ ಪೆಟ್ರೊಕೆಮಿಕಲ್ಸ್ ಒಟ್ಟಾಗಿ, ಭಾರತದಲ್ಲಿ ಯುಸಿಸಿ ಉತ್ಪನ್ನಗಳನ್ನು ಮಾರಾಟ ಮಾಡಿದವು.

ಭಾರತದಲ್ಲಿ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಟೆಂಡರ್ ಹೊರಡಿಸಿದಾಗ ಹಾಗೂ ಅಗತ್ಯವಿದ್ದ ಉತ್ಪನ್ನಕ್ಕೆ ಬೇಡಿಕೆ ಸಲ್ಲಿಸಿದಾಗ, ಮೆಗಾ ಗ್ಲೋಬಲ್ ಮತ್ತು ವಿಸಾ ಪೆಟ್ರೊಕೆಮಿಕಲ್ಸ್ ದರಪಟ್ಟಿ ನೀಡುತ್ತಿದ್ದವು. ದರಪಟ್ಟಿಗೆ ಬಂದ ಪ್ರತಿಕ್ರಿಯೆಯನ್ನು ಅಮೆರಿಕದಲ್ಲಿನ ಯುಸಿಸಿಗೆ ಕಳುಹಿಸುತ್ತಿದ್ದವು. ಯುಸಿಸಿಯಿಂದ ಒಪ್ಪಿಗೆ ಬಂದ ನಂತರವಷ್ಟೇ ಟೆಂಡರ್ ಅಥವಾ ಪೂರೈಕೆ ಒಪ್ಪಂದ ಅಂತಿಮವಾಗುತ್ತಿತ್ತು. ಎಲ್ಲಾ ವಹಿವಾಟನ್ನು ಯುಸಿಸಿ ನೇರವಾಗಿ ನಿರ್ವಹಿಸುತ್ತಿತ್ತು. ಆದರೆ, ಹೆಸರು ಮಾತ್ರ ಮೆಗಾ ಗ್ಲೋಬಲ್ ಮತ್ತು ವಿಸಾ ಪೆಟ್ರೊಕೆಮಿಕಲ್ಸ್‌ಗಳದ್ದು.

1998ರಲ್ಲಿ ಅಜಯ್ ಮಿತ್ತಲ್ ಅವರು ಸಿಂಗಪುರದಲ್ಲಿ ಮೆಗಾ ವಿಸಾ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಹೊಸ ಕಂಪನಿಯನ್ನು ಆರಂಭಿಸಿದರು. ನಂತರದಲ್ಲಿ ಯುಸಿಸಿ ಉತ್ಪನ್ನಗಳನ್ನು ಈ ಹೊಸ ಕಂಪನಿಯು ಭಾರತದಲ್ಲಿ ಮಾರಾಟ ಮಾಡಲಾರಂಭಿಸಿತು. 2001ರಲ್ಲಿ ಡೊ ಕೆಮಿಕಲ್ಸ್ ಕಂಪನಿಯು ಯುಸಿಸಿಯನ್ನು ಖರೀದಿಸಿತು. ಮೆಗಾ ವಿಸಾ ಸಲ್ಯೂಷನ್ಸ್ ಮೂಲಕ ನಡೆಸಲಾಗುತ್ತಿದ್ದ ವಹಿವಾಟನ್ನು ಕಡಿಮೆ ಮಾಡಿತು. ಇದರ ವಿರುದ್ಧ ಅಜಯ್ ಮಿತ್ತಲ್ ಅವರು ಅಮೆರಿಕದಲ್ಲಿ ನ್ಯಾಯಾಲಯದ ಮೆಟ್ಟಿಲೇರಿದರು. ಕನೆಕ್ಟಿಕಟ್ ಜಿಲ್ಲಾ ನ್ಯಾಯಾಲಯದಲ್ಲಿ ನಡೆದ ವ್ಯಾಜ್ಯದ ವೇಳೆ ಈ ಎಲ್ಲಾ ಕಂಪನಿಗಳ ಮಧ್ಯೆ ಮಾಡಿಕೊಳ್ಳಲಾಗಿದ್ದ ಒಪ್ಪಂದ ಪತ್ರಗಳನ್ನು ಸಲ್ಲಿಸಲಾಗಿತ್ತು. ನಂತರದ ದಿನಗಳಲ್ಲಿ ವ್ಯಾಜ್ಯವನ್ನು ನ್ಯಾಯಾಲಯದ ಹೊರಗೆ ಬಗೆಹರಿಸಿಕೊಳ್ಳಲಾಯಿತು. ಆದರೆ, ಡೊ ಕೆಮಿಕಲ್ಸ್ ಭಾರತದಲ್ಲಿ ಯುಸಿಸಿ ಉತ್ಪನ್ನಗಳ ಮಾರಾಟವನ್ನು ಮುಂದುವರಿಸಿತು.

ಆದರೆ, ಭೋಪಾಲ್ ಅನಿಲ ದುರಂತ ಸಂತ್ರಸ್ತರಿಗೆ ಯುಸಿಸಿ ನೀಡಿದ್ದ ಪರಿಹಾರ ಸಾಲದು ಎಂದು ಯುಪಿಎ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಮತ್ತೆ ದಾವೆ ಹೂಡಿತು. ಯುಸಿಸಿ, ಯುಸಿಐಎಲ್ ಮತ್ತು ಡೊ ಕೆಮಿಕಲ್ಸ್ ವಿರುದ್ಧದ ಈ ಮೊಕದ್ದಮೆಯ ವಿಚಾರಣೆ ಇನ್ನೂ ನಡೆಯುತ್ತಿದೆ. ಕೊನೆಯ ವಿಚಾರಣೆ ನಡೆದದ್ದು ಇದೇ ಅಕ್ಟೋಬರ್‌ನಲ್ಲಿ. ಸಂತ್ರಸ್ತರ ಬೇಡಿಕೆಗಳನ್ನು ಪಟ್ಟಿ ಮಾಡಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಈ ವರದಿಯ ಇಂಗ್ಲಿಷ್ ಆವೃತ್ತಿಯು 'ಅಲ್ ಜಝೀರಾ'ದಲ್ಲಿ ಪ್ರಕಟವಾಗಿದೆ
ಶ್ರೀಗಿರೀಶ್ ಜಾಲಿಹಾಳ್, ಕುಮಾರ ಸಂಭವ ಅವರು ರಿಪೋರ್ಟರ್ಸ್ ಕಲೆಕ್ಟಿವ್‌ನ ಸದಸ್ಯರು

'ಸಾವಿಗಿಂತ ಭೀಕರ ಈ ಬದುಕು'

'ಅಂದಿನ ರಾತ್ರಿ ನನಗೆ ನೆನಪಿದೆ. ಅದು ನಿನ್ನೆಯಷ್ಟೇ ನಡೆದಿದೆ ಎಂಬಷ್ಟು ಸ್ಪಷ್ಟವಾಗಿ ನೆನಪಿನಲ್ಲಿದೆ. ನಮ್ಮ ಕಣ್ಣುಗಳು ಸುಟ್ಟುಹೋದವು. ಜನರು ವಾಂತಿ ಮಾಡಲು ಶುರು ಮಾಡಿದರು. ಅಲ್ಲಿ ಅಕ್ಷರಶಃ ಕಾಲ್ತುಳಿತವೇ ನಡೆದುಹೋಯಿತು. ಈಗ ನಮ್ಮ ಬದುಕು ಸಾವಿಗಿಂತ ಭೀಕರವಾಗಿದೆ' ಎಂಬುದಾಗಿ ಲೀಲಾಬಾಯಿ ಅವರು ಕಣ್ಣೀರಿಡುತ್ತಲೇ ಅಂದಿನ ದುರಂತವನ್ನು ವಿವರಿಸಿದರು.

ಲೀಲಾಬಾಯಿ, ಸಂತ್ರಸ್ತೆ

60 ವರ್ಷದ ಲೀಲಾಬಾಯಿ ಹಾಗೂ ಅವರ ಪತಿ ಭೋಪಾಲ್‌ನಲ್ಲಿ ದುರಂತ ನಡೆದ ಸ್ಥಳದ ಸಮೀಪದಲ್ಲಿರುವ ಜೆ.ಪಿ. ನಗರದಲ್ಲಿ ಈಗ ವಾಸಿಸುತ್ತಿದ್ದಾರೆ. ಇವರು ತಮ್ಮ ಮೂವರು ಮಕ್ಕಳನ್ನು ದುರಂತದಲ್ಲಿ ಕಳೆದುಕೊಂಡರು. ಘಟನೆಯಿಂದ ತೀವ್ರ ಆನಾರೋಗ್ಯಕ್ಕೆ ಈಡಾಗಿದ್ದ ಮಕ್ಕಳು ಬದುಕುಳಿಯಲಿಲ್ಲ. ಕುಟುಂಬದಲ್ಲಿ ಜೀವ ಉಳಿಸಿಕೊಂಡಿದ್ದು ಇವರಿಬ್ಬರು ಮಾತ್ರ.

'ರಾಸಾಯನಿಕಗಳು ಇಷ್ಟೊಂದು ಅಪಾಯಕಾರಿ ಎಂಬುದರ ಸುಳಿವೂ ನಮಗೆ ಆಗ ಇರಲಿಲ್ಲ' ಎಂದು ದುರಂತದಲ್ಲಿ ಬದುಕುಳಿದ ಸಾವಿತ್ರಿಬಾಯಿ ಎಂಬುವರು ಹೇಳುತ್ತಾರೆ.

ಹತ್ತಾರು ಆರೋಗ್ಯ ಸಮಸ್ಯೆ: ಶ್ವಾಸಕೋಶ ಸೋಂಕು, ಮಿದುಳು ವೈಫಲ್ಯ, ಮೂತ್ರಪಿಂಡ ಸಮಸ್ಯೆ, ನರಮಂಡಲ ವೈಫಲ್ಯ ಹಾಗೂ ರೋಗನಿರೋಧಕ ಶಕ್ತಿ ಕಳೆದುಕೊಂಡ ಸಾವಿರಾರು ಜನರು ಘಟನೆ ನಂತರದ ವರ್ಷಗಳಲ್ಲಿ ಅಸುನೀಗಿದರು. ಕಾರ್ಖಾನೆ ಉಗುಳಿದ್ದ ಹೊಗೆಯನ್ನು ಕುಡಿದ ಜನರಲ್ಲಿ ಮಿದುಳಿಗೆ ರಕ್ತ ಸರಬರಾಜು ನಿಂತುಹೋಯಿತು. ಇದು ತಕ್ಷಣದ ಸಾವಿಗೆ ಕಾರಣವಾಯಿತು. ಭೋಪಾಲ್‌ನ ಮಣ್ಣು ಹಾಗೂ ನೀರಿನಲ್ಲಿ ಸೇರಿಹೋದ ವಿಷಕಾರಿ ರಾಸಾಯನಿಕಗಳು ಸುದೀರ್ಘ ವರ್ಷಗಳ ಕಾಲ ಅಲ್ಲಿನ ಜನರ ಆರೋಗ್ಯವನ್ನು ಕಾಡಿದವು.

ತಲಾ ₹8,500 ಪರಿಹಾರ

ನ್ಯಾಯಾಲಯದಲ್ಲಿ ಹೂಡಲಾಗಿದ್ದ ಮೊಕದ್ದಮೆಯ ವಿಚಾರಣೆ ನಡೆದು, ಭೋಪಾಲ್ ದುರಂತ ಸಂತ್ರಸ್ತರಿಗೆ 47 ಕೋಟಿ ಅಮೆರಿಕನ್ ಡಾಲರ್ ಅಂದರೆ, ₹800 ಕೋಟಿ (ಅಂದಿನ ಅಮೆರಿಕನ್ ಡಾಲರ್ ಮೌಲ್ಯದಲ್ಲಿ) ಪರಿಹಾರ ನೀಡುವುದಾಗಿ ಯುಸಿಸಿ ಒಪ್ಪಿಕೊಂಡಿತು. ಅಂದರೆ ಸಂತ್ರಸ್ತರಿಗೆ ಸಿಕ್ಕಿದ್ದು ತಲಾ ₹8,500 ಪರಿಹಾರ. ಸರ್ಕಾರ ಕೇಳಿದ್ದ ಆರನೇ ಒಂದು ಭಾಗದಷ್ಟು ಪರಿಹಾರ ಮಾತ್ರ ಸಿಕ್ಕಿತ್ತು. ಹೀಗಿದ್ದರೂ, ಸಂತ್ರಸ್ತರ ಜೊತೆ ಸಮಾಲೋಚನೆ ನಡೆಸದ ಸರ್ಕಾರ, ಈ ಪರಿಹಾರ ಮೊತ್ತ ಸ್ವೀಕರಿಸಲು ಒಪ್ಪಿಗೆ ಸೂಚಿಸಿತ್ತು ಎಂದು ವರದಿ ತಿಳಿಸಿದೆ.

I would also like to take this opportunity to look ahead in working out joint strategy for making UCC Wire & Cable compounds again market leader, even in this time of extreme turmoil & hostile environment for our team we have continued to work with DoT to upgrade the specification to drive out smaller players and we are hoping to give you some good news there. We have also won over many of the customers & sold 850 MT at an average price of $ 1005/MT (for both ie.power & telecom) from Jan. 2000 to April 2000. As we go ahead we are confident of achieving better volumes and better net backs for UCC.

ಅಜಯ್ ಮಿತ್ತಲ್ ಅವರು ಯೂನಿಯನ್ ಕಾರ್ಬೈಡ್ ಅಧಿಕಾರಿಗಳಿಗೆ 2000ರ ಮೇನಲ್ಲಿ ಕಳುಹಿಸಿದ್ದ ಇ–ಮೇಲ್

ಯೂನಿಯನ್ ಕಾರ್ಬೈಡ್ ಅನಿಲ ದುರಂತದ 38ನೇ ವಾರ್ಷಿಕವನ್ನು ಇದೇ ಡಿಸೆಂಬರ್ 1ರಂದು ಆಚರಿಸಲಾಗಿತ್ತು. 1984ರ ದುರಂತದಲ್ಲಿ ವಿಕಿರಣದಿಂದ ತೊಂದರೆಗೆ ಒಳಗಾದವರ ಮಕ್ಕಳು ಮತ್ತು ಸಂಬಂಧಿಕರು ಮೃತರಿಗೆ ನಮನ ಸಲ್ಲಿಸಿದರು –ಪಿಟಿಐ ಚಿತ್ರ

ದುರಂತದ ಬಳಿಕದ ಘಟನಾವಳಿ...

- **1984 ಡಿ.2;** ಭೋಪಾಲ್ ಅನಿಲ ದುರಂತ
- **1987 ಅ.;** ಯುಸಿಸಿ ಮಾಜಿ ಉದ್ಯೋಗಿಗಳಿಂದ ವಿಸಾ ಪೆಟ್ರೊಕೆಮಿಕಲ್ಸ್ ಕಂಪನಿ ಸ್ಥಾಪನೆ
- **1987 ನ.;** ಭಾರತದಲ್ಲಿ ಉತ್ಪನ್ನ ಮಾರಾಟ ಒಪ್ಪಂದಕ್ಕೆ ವಿಸಾ ಜೊತೆ ಯುಸಿಸಿ ಸಹಿ
- **1992 ಏ.;** ಯುಸಿಸಿಗೆ ಸೇರಿದ ಎಲ್ಲ ಆಸ್ತಿ ಜಪ್ತಿಗೆ ಕೋರ್ಟ್ ಆದೇಶ
- **1993 ಮಾ.;** ಮುಂಬೈ ಮೂಲದ ಉದ್ಯಮಿ ಅಜಯ್ ಮಿತ್ತಲ್ ಅವರಿಂದ ಹ್ಯೂಸ್ಟನ್‌ನಲ್ಲಿ ಮೆಗಾ ಗ್ಲೋಬಲ್ ಸರ್ವೀಸ್ ಕಂಪನಿ ಸ್ಥಾಪನೆ
- **1993 ಏ.;** ಮೆಗಾ ಗ್ಲೋಬಲ್ ಮೂಲಕ ಭಾರತದಲ್ಲಿ ಮಾರಾಟ ಆರಂಭಿಸಿದ ಯುಸಿಸಿ
- **1994-98;** ವಿಸಾ ಪೆಟ್ರೊಕೆಮಿಕಲ್ಸ್ ಕಂಪನಿಯನ್ನು ಸ್ವಾಧೀನಪಡಿಸಿಕೊಂಡ ಅಜಯ್ ಮಿತ್ತಲ್. ಈ ಎರಡೂ ಕಂಪನಿಗಳಿಂದ ಯುಸಿಸಿ ಉತ್ಪನ್ನಗಳ ಮಾರಾಟ
- **1998;** ಮೆಗಾ ಗ್ಲೋಬಲ್ ಸರ್ವೀಸ್ ಕಾರ್ಯಾಚರಣೆಯನ್ನು ತನ್ನದೇ ಒಡೆತನದ ಸಿಂಗಪುರದ ಮೆಗಾ ವಿಸಾ ಸಲ್ಯೂಷನ್ಸ್ ಪ್ರೈ.ಲಿ.ಗೆ ವರ್ಗಾಯಿಸಿದ ಮಿತ್ತಲ್

ಸಿ.ಎಂ. ಖಾಸಗಿ ವಿಮಾನದಲ್ಲಿ ಆ್ಯಂಡರ್ಸನ್ ಪಲಾಯನ!

ಅಮೆರಿಕದ ಅತ್ಯಂತ ಪ್ರಭಾವಿ ಉದ್ಯಮಿ ಹಾಗೂ ಯುಸಿಸಿ ಮುಖ್ಯಸ್ಥ ಆ್ಯಂಡರ್ಸನ್, ಭೋಪಾಲ್ ಘಟನೆ ನಡೆದ ಮೂರು ದಿನಗಳ ಬಳಿಕ ಭಾರತಕ್ಕೆ ಬಂದಿದ್ದ. ಅವನನ್ನು ಯುಸಿಐಎಲ್‌ನ ಐಷಾರಾಮಿ ಅತಿಥಿಗೃಹದಲ್ಲಿ ಗೃಹಬಂಧನದಲ್ಲಿ ಇರಿಸಲಾಗಿತ್ತು. ಆದರೆ ಕೇವಲ 3 ಗಂಟೆ ಕಳೆಯುವಷ್ಟರಲ್ಲಿ ₹25,000 ಬಾಂಡ್ ಆಧಾರದಲ್ಲಿ ಅವನಿಗೆ ಜಾಮೀನು ನೀಡಲಾಗಿತ್ತು. 24 ಗಂಟೆ ಕಳೆಯುವಷ್ಟರಲ್ಲಿ ಆ್ಯಂಡರ್ಸನ್ ಭೋಪಾಲ್‌ನಿಂದ ನಿಗೂಢವಾಗಿ ಕಾಲ್ಕಿತ್ತಿದ್ದ. ಅಂದಿನ ಮುಖ್ಯಮಂತ್ರಿಯಾಗಿದ್ದ ಅರ್ಜುನ್ ಸಿಂಗ್ ಅವರ ಖಾಸಗಿ ವಿಮಾನದಲ್ಲಿ ಪಲಾಯನ ಮಾಡಿದ್ದ ಎನ್ನಲಾಗಿದೆ. ನಂತರ, ಯುಸಿಸಿ ಸಂಸ್ಥೆಯ ವಿಮಾನವನ್ನೇರಿ ಸುರಕ್ಷಿತವಾಗಿ ಅಮೆರಿಕವನ್ನು ತಲುಪಿದ್ದ. ಆ್ಯಂಡರ್ಸನ್ ಭಾರತಕ್ಕೆ ಮತ್ತೆಂದೂ ಬರಲೇ ಇಲ್ಲ, ವಿಚಾರಣೆಗೂ ಹಾಜರಾಗಲಿಲ್ಲ. ನಿರ್ಲಕ್ಷ್ಯದಿಂದ ಸಾವಿರಾರು ಅಮಾಯಕರ ಸಾವಿಗೆ ಕಾರಣನಾಗಿದ್ದ ಆ್ಯಂಡರ್ಸನ್ 2014ರಲ್ಲಿ ತನ್ನ 92ನೇ ವಯಸ್ಸಿನಲ್ಲಿ ಅಮೆರಿಕದಲ್ಲಿ ನಿಧನನಾದ.

ಹಿಂಬಾಗಿಲ ಮೂಲಕ ಯುಸಿಸಿ ಉತ್ಪನ್ನ ಮಾರಾಟ

- ಕೇಂದ್ರ ಸರ್ಕಾರಿ ಒಡೆತನದ ಸಂಸ್ಥೆಗಳಾದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ, ಹಿಂದೂಸ್ತಾನ್ ಫೋಟೊ ಫಿಲ್ಮ್ಸ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಹಿಂದೂಸ್ತಾನ್ ಕೇಬಲ್ಸ್ ಹಾಗೂ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಜೊತೆ ಪಾಲುದಾರಿಕೆ ಹೊಂದಿದ್ದ ಲುಬ್ರಿಝೋಲ್ ಇಂಡಿಯಾ ಕಂಪನಿಯು ಯುಸಿಸಿ ಉತ್ಪನ್ನಗಳ ಗ್ರಾಹಕರಾಗಿದ್ದರು
- ವಿವಿಧ ರಾಜ್ಯ ಸರ್ಕಾರಗಳ ಪ್ರವರ್ತಕ ಕಂಪನಿಗಳಾದ, ಗುಜರಾತ್ ಆಲ್ಕಲೈಸ್ ಅಂಡ್ ಕೆಮಿಕಲ್ಸ್, ತಮಿಳುನಾಡಿನ ಅಡಿಟಿವ್ಸ್, ಮಧ್ಯಪ್ರದೇಶದ ವಿಂಧ್ಯ ಟೆಲಿಲಿಂಕ್ಸ್ ಸಂಸ್ಥೆಗಳೂ ಯುಸಿಸಿ ಉತ್ಪನ್ನಗಳ ಗ್ರಾಹಕರು
- ರಿಲಯನ್ಸ್ ಇಂಡಸ್ಟ್ರೀಸ್, ಸ್ವರ್‌ಲೈಟ್ ಇಂಡಸ್ಟ್ರೀಸ್, ಫಿನೊಲೆಕ್ಸ್ ಕೇಬಲ್ಸ್, ಕ್ರಾಂಪ್ಟನ್ ಗ್ರೀವ್ಸ್, ಬರ್ಗರ್ ಪೈಂಟ್ಸ್, ಕ್ಯಾಸ್ಟ್ರೋಲ್ ಇಂಡಿಯಾ ಮೊದಲಾದ 150ಕ್ಕೂ ಹೆಚ್ಚು ಖಾಸಗಿ ಕಂಪನಿಗಳೂ ಯುಸಿಸಿ ಉತ್ಪನ್ನ ಖರೀದಿಸುತ್ತಿದ್ದವು
- 1995–2000 ಅವಧಿಯಲ್ಲಿ ಯುಸಿಸಿ ಕಂಪನಿಯು ನಕಲಿ ಕಂಪನಿಗಳ ಮೂಲಕ ಭಾರತದ ಮಾರುಕಟ್ಟೆಗೆ 55,800 ಟನ್ ಕೇಬಲ್ ಹಾಗೂ ವೈರ್‌ಗಳನ್ನು ಮಾರಾಟ ಮಾಡಿದೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಅರುಣಾಚಲ** ಪ್ರದೇಶದ ತವಾಂಗ್‌ನಲ್ಲಿ ಭಾರತ ಹಾಗೂ ಚೀನಾ ಸೈನಿಕರ ನಡುವೆ ಡಿಸೆಂಬರ್ 9ರಂದು ಘರ್ಷಣೆ ನಡೆದಿತ್ತು. 'ಈ ಘರ್ಷಣೆಯಲ್ಲಿ ಚೀನಾದ ಸೈನಿಕರು ಮೃತಪಟ್ಟಿದ್ದು, ಅವರ ಶವಪೆಟ್ಟಿಗೆಗಳನ್ನು ಸಾಲಾಗಿ ಇರಿಸಲಾಗಿದೆ' ಎಂದು ಹೇಳುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಶವಪೆಟ್ಟಿಗೆಗಳ ಮೇಲೆ ಚೀನಾದ ಧ್ವಜವನ್ನು ಹೊದಿಸಲಾಗಿದೆ. ಸೈನಿಕರಿಗೆ ಚೀನಾ ಸರ್ಕಾರ ಗೌರವ ಸಲ್ಲಿಸಿದೆ ಎಂದು ಹೇಳಲಾಗಿದೆ. ಆದರೆ ಇದು ಸುಳ್ಳು ಮಾಹಿತಿ.

✓ **2010ರಲ್ಲಿ** ಚೀನಾದ ಸಿಚುವಾನ್ ಪ್ರಾಂತ್ಯದಲ್ಲಿ ನಡೆದ ಅಗ್ನಿದುರಂತದಲ್ಲಿ ಮೃತಪಟ್ಟ ಚೀನಾ ಸೈನಿಕರ ಶವಪೆಟ್ಟಿಗೆಗಳನ್ನು ಸಾಲಾಗಿ ಇರಿಸಿದ್ದ ಚಿತ್ರವನ್ನೇ ತವಾಂಗ್ ಘರ್ಷಣೆಯಲ್ಲಿ ಮೃತಪಟ್ಟಿದ್ದಾರೆ ಎನ್ನಲಾದ ಚೀನಾ ಸೈನಿಕರ ಚಿತ್ರ ಎಂದು ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು 'ದಿ ಕ್ವಿಂಟ್' ವರದಿ ಮಾಡಿದೆ. ರಾಯಿಟರ್ಸ್ ಹಾಗೂ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ಸುದ್ದಿತಾಣಗಳಲ್ಲಿ 12 ವರ್ಷಗಳ ಹಿಂದೆಯೇ ಈ ಚಿತ್ರ ಹಾಗೂ ವರದಿ ಪ್ರಕಟವಾಗಿತ್ತು. ತವಾಂಗ್‌ನಲ್ಲಿ ಯಥಾಸ್ಥಿತಿಯಿದೆ ಎಂದು ಚೀನಾ ಹೇಳಿಕೊಂಡಿದೆ. ಆದರೆ, ತನ್ನ ಸೈನಿಕರು ಮೃತಪಟ್ಟಿರುವ ಬಗ್ಗೆ ಚೀನಾ ಅಧಿಕೃತ ಮಾಹಿತಿ ನೀಡಿಲ್ಲ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ಕಾಲದ ನಿಯಮ

ಮಳೆಗೊಂದು ಬೆಳೆಗೊಂದು ಫಲಕೊಂದು ಋತುವಂತೆ |
ಬೆಳೆಯಿಪುದು ಜೀವವೃಕ್ಷವ ಕಾಲನಿಯತಿ ||
ತಿಳಿವುವೊಳ್ತನಮುಂ ವಿರಕ್ತಿಯುಂ ಮುಕ್ತಿಯುಂ |
ಗಳಿಗೆ ಸರಿಸೇರ್ದಂದು – ಮಂಕುತಿಮ್ಮ || 780 ||

ಪದ-ಅರ್ಥ: ಕಾಲನಿಯತಿ = ನಿಯತವಾದ ಕಾಲ, ತಿಳಿವುಮೊಳ್ತನಮುಂ = ತಿಳಿವು(ತಿಳುವಳಿಕೆ) + ಒಳ್ತನಮುಂ(ಒಳ್ಳೆಯತನ), ಸರಿದೇರ್ದಂದು = ಸರಿ + ಸೇರಿದ + ಅಂದು.

ವಾಚ್ಯಾರ್ಥ: ಮಳೆಗೆ, ಬೆಳೆಗೆ, ಫಲಕೆ ಒಂದೊಂದು ಕಾಲವಿರುವಂತೆ, ಜೀವವೃಕ್ಷವನ್ನು ಬೆಳೆಯಿಸುವುದು ಕಾಲದ ನಿಯಮ. ತಿಳಿವು, ಒಳ್ಳೆಯತನ, ವಿರಕ್ತಿ, ಮುಕ್ತಿಗಳು ಕೂಡ ಕಾಲಕ್ಕನುಗುಣವಾಗಿಯೇ ಬರುವಂಥವುಗಳು.

ವಿವರಣೆ: ಪ್ರಕೃತಿಯಲ್ಲಿ ಪ್ರತಿಯೊಂದು ಕಾರ್ಯಕ್ಕೂ ಒಂದುನಿಗದಿಯಾದ ಸಮಯ ಬೇಕಾಗುತ್ತದೆ. ಮಳೆ ಸರಿಯಾದಕಾಲದಲ್ಲಿ ಸುರಿದರೆ ಸುಭಿಕ್ಷ, ಕಾಲತಪ್ಪಿ ಬಂದರೆ ಅಕಾಲದ ಅನಾಹುತ.ಬೀಜ ಹಾಕಿದ ಮರುದಿನವೇ ಬೆಳೆಯ ರಾಶಿ ಮಾಡಲಾಗುವುದಿಲ್ಲ. ಅದರಲ್ಲೂ ಪ್ರತಿಯೊಂದು ಬೆಳೆಗೂ ಅದರದೇ ಆದಬೆಳವಣಿಗೆಯ ಕಾಲವಿದೆ. ಅವರೆಕಾಳೇನೋ ಒಂದು ತಿಂಗಳಲ್ಲಿ ಕೈಗೆ ಬಂದುಬಿಡಬಹುದು. ಆದರೆ ತೆಂಗಿನ ಬೀಜ ಫಲಕೊಡಲು ಕನಿಷ್ಠ ಆರು, ಏಳು ವರ್ಷಗಳು ಬೇಕು. ಹೀಗೆ ಮಳೆಗೆ, ಬೆಳೆಗೆ, ಫಲಕ್ಕೆ ಒಂದೊAದು ಕಾಲವಿದೆ. ಆ ಕಾಲದ ನಿಯತಿಯಂತೆಯೇ ನಡೆಯುವುದು. ಅದನ್ನು ಅವಸರಿಸಲಾಗದು. ಆದರೆ ನಮ್ಮ ಇಂದಿನ ಪ್ರಪಂಚ ತುಂಬ ಆತುರದ್ದು. ಅದನ್ನು ಫಾಸ್ಟ್ ಫುಡ್ ಕಾಲ ಎನ್ನುತ್ತೇವೆ. ಎಲ್ಲವೂ ಮನೆನೆದ ಕೂಡಲೇ ಆಗಿಬಿಡಬೇಕು. ಎಲ್ಲವನ್ನು ಸರಿಯಾಗಿ ವಿಚಾರಿಸಿಕೊಂಡು ಹೋಗಲು ತಾಳ್ಮೆ ಇಲ್ಲ. ಬದಲಾವಣೆ ನಮ್ಮ ಉದ್ದೇಶವಾದರೂ ಅದನ್ನು ಕೇವಲ ಆತುರದಿಂದ ಸಾಧಿಸತಕ್ಕದ್ದಲ್ಲ. ನಮ್ಮ ಬದುಕು ಎಂಬ ವೃಕ್ಷ ಕೂಡ ಅದಕ್ಕೆ ನಿಯಮವಾದ ವೇಗದಲ್ಲೇ ಬೆಳೆಯತಕ್ಕದ್ದು. ಯಾರನ್ನೂ ಬೇಗನೆ ಮುದುಕರನ್ನಾಗಿ ಮಾಡುವುದು ಅಸಾಧ್ಯ. ಬಾಲ್ಯ, ಯೌವನ, ವೃದ್ಧಾಪ್ಯಗಳೆಲ್ಲ ತಮತಮಗೆ ಗೊತ್ತಾದ ಕಾಲದಲ್ಲೇ ಬಂದು ಹೋಗುವವು. ಅವುಗಳನ್ನು ತಡೆಯುವುದಾಗಲೀ, ಅವಸರಿಸುವುದಾಗಲೀ ನಿಸರ್ಗಕ್ಕೆ ವಿರೋಧವಾದದ್ದು. ಇದೇ ರೀತಿ ಮನುಷ್ಯನಿಗೆ ತಿಳುವಳಿಕೆ ಬರಲು ಕೂಡ ಸರಿಯಾದ ಕಾಲ ಬೇಕು. ಬದುಕಿನಲ್ಲಿ ಅನುಭವಗಳು ಬಂದು, ತಲೆಗೆ ಒಂದೆರಡು ಬಾರಿ ಪೆಟ್ಟು ಬಿದ್ದಾಗ ಯಾವುದು ಸರಿ, ಯಾವುದು ತಪ್ಪು ಎಂಬುದರ ತಿಳುವಳಿಕೆ ಬರುತ್ತದೆ. ಹಾಗೆಯೇ ಒಳ್ಳೆಯತನ ಬರುವುದಕ್ಕೂ ಸಮಯ ಬೇಕು. ವಿರಕ್ತಿಯಂತೂ ಸುಲಭವೇ? ಅಕ್ಕಮಹಾದೇವಿ ಹೇಳುತ್ತಾಳೆ, ಅಯ್ಯಾ, ವಿರಕ್ತ ವಿರಕ್ತರೆಂದೇನೋ ವಿರಕ್ತಿಯ ಮಾತನಾಡುವರಲ್ಲದೆ ವಿರಕ್ತಿಕೆ ಎಲ್ಲರಿಗೆಲ್ಲಿಯದೋ ಕೈಯೊಳಗಣ ಓಲೆ, ಕಂಕುಳೊಳಗಣ ಸಂಪುಟ, ಬಾಯೊಳಗಣ ಮಾತು ಅದು ಪಕ್ವವಾಗುವುದಕ್ಕೆ ಹದವಾದ ಮನಸ್ಸು ಬೇಕು. ಇನ್ನು ಮುಕ್ತಿಯಂತೂ ಪರಮಪಕ್ವತೆಯ ಲಕ್ಷಣ. ಹೀಗೆ ಪ್ರತಿಯೊಂದಕ್ಕೂ ನಿಯತವಾದ ಕಾಲವಿದೆ. ಅದನ್ನು ಅವಸರಿಸುವುದು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಡಿಸೆಂಬರ್ 19, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ಏಕಾದಶಿ ಗಂ.26-33 ನಕ್ಷತ್ರ: ಚಿತ್ತಾ ಗಂ. 10-31 ಯೋಗ: ಅತಿಗಂಡ ಗಂ. 27-20, ಕರಣ: ಬವ ಗಂ. 15-09, ಧನುರ್ ಮಾಸದ 03 ನೇ ದಿನ.
ರಾಹುಕಾಲ : ಬೆಳಿಗ್ಗೆ 07-30 –09-00, ಸೂರ್ಯೋದಯ : 06-51 ಸೂರ್ಯಾಸ್ತ : 06-04
ಮುಸ್ಲಿಂ ದಿನಾಂಕ : 24 ಜುಮಾದುಲ್ಲಾವಲ್
ದಿನ ವಿಶೇಷ : ಸಫಲ ಏಕಾದಶಿ, ಹನುಕಾಹ್ (ಜ್ಯೂಯಿಷ್)
ಅದೃಷ್ಟ ಸಂಖ್ಯೆ : 7, 11

ಮೇಷ: ಆಲಸ್ಯತನ ನಿಮ್ಮ ಕುಟುಂಬದ ಅಭಿವೃದ್ಧಿಯನ್ನು ಹಾಳು ಮಾಡುತ್ತದೆ. ಆದ್ದರಿಂದ ಉತ್ಸಾಹಭರಿತರಾಗಿರಿ. ನಿಮ್ಮಲ್ಲಿರುವ ಅಗಾಧ ಜ್ಞಾನ ಶಕ್ತಿ ಹೊರ ಹೊಮ್ಮಿ ಬರಲು ಸೂಕ್ತ ಕಾಲವಿದು. ಮಾಡುವ ಕೆಲಸದಲ್ಲಿ ಶ್ರದ್ಧೆ ಇರಲಿ.

ವೃಷಭ: ಸಮಸ್ಯೆಗಳು ತನ್ನಂತಾನೆಯೇ ಬಗೆಹರಿಯುವುದು. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ ವ್ಯವಹಾರಗಳಲ್ಲಿ ಹೇಳುವ ಲಾಭವಿಲ್ಲದ್ದಿದ್ದರೂ, ಹೆದರುವ ಅವಶ್ಯಕತೆ ಇರುವುದಿಲ್ಲ. ವೈವಾಹಿಕ ಜೀವನದಲ್ಲಿ ನೆಮ್ಮದಿ.

ಮಿಥುನ: ಯಶಸ್ಸಿನ ಹಾದಿಯಲ್ಲಿದ್ದೀರಿ. ಈ ಯಶಸ್ಸಿಗೆ ಕಾರಣರಾದವರನ್ನು ಜೊತೆಯಲ್ಲಿಯೆ ಇರಿಸಿಕೊಳ್ಳಿ. ಕಾಫಿ ಮತ್ತು ಕಾಳುಮೆಣಸಿನ ರಫ್ತು ವಹಿವಾಟು ಹೆಚ್ಚಲಿದೆ. ಕಿರಿಯರಿಗೆ ಮಾರ್ಗದರ್ಶನದ ಅವಶ್ಯಕತೆ ಇದೆ.

ಕರ್ಕಾಟಕ: ಪ್ರಭಾವಿ ವ್ಯಕ್ತಿಯೊಬ್ಬರಿಂದ ಕಾರ್ಯಸಾಧನೆ ವೈಯಕ್ತಿಕವಾಗಿ ಹಾಗು ಸಾಮಾಜಿಕವಾಗಿ ಅನುಕೂಲ ಆಗಲಿದೆ. ಹಿಡಿತಕ್ಕೆ ಸಿಕ್ಕಿರುವ ಕೆಲಸಗಳನ್ನು ಸಮರ್ಥವಾಗಿ ಕಾರ್ಯರೂಪಕ್ಕೆ ತರುವಲ್ಲಿ ಇಂದಿನ ಯತ್ನಕ್ಕೆ ಯಶಸ್ಸು

ಸಿಂಹ: ಹಲವು ಬಗೆಯ ಖರ್ಚು ವೆಚ್ಚಗಳನ್ನು ಮಾಡಬೇಕಾದರೂ ಆದಾಯದ ಹೊಸ ಮೂಲವೊಂದು ಕುಡಿಯೊಡೆದು ಹೆಚ್ಚಿನ ಲಾಭ ಬರುವುದರಿಂದ ಸಂತೋಷ. ಕೃಷಿ ಕ್ಷೇತ್ರದಲ್ಲಿನ ತುಸು ಚೇತರಿಕೆಯು ರೈತರಿಗೆ ನೆಮ್ಮದಿ.

ಕನ್ಯಾ: ಆಸೆ–ಆಕಾಂಕ್ಷೆಗಳಿಗೆ ಅಥವಾ ಯೋಚನೆಗಳಿಗೆ ನಿಮ್ಮವರಿಂದಲೇ ಅಡ್ಡಿ ಆತಂಕ ಎದುರಾಗಬಹುದು. ಅವಶ್ಯಕತೆಗಿಂತ ಹೆಚ್ಚಾಗಿ ಖರ್ಚುಗಳನ್ನು ಮಾಡಬೇಡಿ. ಋಣಬಾಧೆಯಿಂದ ಹೊರಬರಲು ಹೆಚ್ಚಿನ ಪ್ರಯತ್ನವಿರಲಿ.

ತುಲಾ: ಕೆಲಸದ ನಿಮಿತ್ತ ಮಗಳನ್ನು ವಿದೇಶಕ್ಕೆ ಕಳುಹಿಸುವಿರಿ. ಯೋಗಾಭ್ಯಾಸದಿಂದ ಆರೋಗ್ಯವು ಚೆನ್ನಾಗಿರುವುದು. ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚೆ ಫಲಕಾರಿ.

ವೃಶ್ಚಿಕ: ವರ್ತಕರಿಗೆ ಹೊಸ ವಸ್ತುಗಳ ವ್ಯಾಪಾರದಿಂದ ಲಾಭ. ಪರಮಾಪ್ತರ ಭೇಟಿ ಸಂಭವದಂತಹ ಮನಸ್ಸಿಗೆ ಮುದ ನೀಡುವ ಸಂಗತಿಗಳು ನಡೆಯಲಿವೆ. ಉಮಾಮಹೇಶ್ವರನ ಆರಾಧನೆಯಿಂದ ಯತ್ನಿಸಿದ ಕಾರ್ಯದಲ್ಲಿ ಜಯ.

ಧನು: ಸಾರ್ಥಕವಾದ ಕಾರ್ಯ ಮಾಡಿ ಮುಗಿಸಿದ ತೃಪ್ತಿ ಇಂದು ನಿಮ್ಮಲ್ಲಿ ತೋರಿಬರಲಿದೆ. ಕೌಟುಂಬಿಕ ಸಮಸ್ಯೆಗಳನ್ನು ಎಲ್ಲರು ಮೆಚ್ಚುವಂತೆ ಪರಿಹರಿಸಿಕೊಳ್ಳುವ ಸಾಮರ್ಥ್ಯ ಅಭಿವೃದ್ಧಿಯಾಗಲಿದೆ. ನೇತ್ರ ಚಿಕಿತ್ಸಕರಿಗೆ ಅಧಿಕ ಲಾಭ.

ಮಕರ: ಈ ದಿನ ಸಹವರ್ತಿಗಳೊಡನೆ ರಾಜಿಯಾದಲ್ಲಿ ನಷ್ಟವೇನು ಇರದು. ನೀವೆಂದು ಆಲೋಚಿಸಿದ ರೀತಿಯಲ್ಲಿ ನಿಮ್ಮ ಕೆಲಸಗಳೆಲ್ಲವು ನಡೆದು ನೆಮ್ಮದಿ ಕಾಣುವಿರಿ. ಗುರು ವಾಕ್ಯ ಪರಿಪಾಲನೆ ಮಾಡುವುದನ್ನು ಮರೆಯದಿರಿ.

ಕುಂಭ: ನಿಮ್ಮ ಉದ್ದಿಮೆಗಾಗಿ ಹೆಚ್ಚಿನ ಬಂಡವಾಳ ಹೂಡಲು ಸಿದ್ಧತೆ ಮಾಡಿಕೊಳ್ಳಿ. ಪ್ರಯಾಣ ಮಾಡಲೇಬೇಕಾದ ಸಂದರ್ಭವಿದೆ. ಈ ಪ್ರಯಾಣವು ನಿಮ್ಮಗೆ ಲಾಭದಾಯಕವೆನಿಸಲಿದೆ. ಬಾಕಿ ಇರುವ ಹಣ ವಸೂಲಿ.

ಮೀನ: ಹಿಂದೆ ನಿಮ್ಮ ಮೇಲಿದ್ದ ಆಪಾದನೆಗಳು ದೂರಾಗಿ, ಮೇಲಧಿಕಾರಿಗಳಿಂದ ಗೌರವವನ್ನು ಹಿಂತಿರುಗಿ ಪಡೆಯುವ ಸುದಿನ ಇದಾಗಲಿದೆ. ಮಕ್ಕಳ ಆರೈಕೆಯ ಗಮನವಿರಲಿ. ಧ್ಯಾನ ಹಾಗೂ ಭಜನೆಯಿಂದ ನೆಮ್ಮದಿ ಸಿಗಲಿದೆ.

ಪದಬಂಧ 5173
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ನೀರಿನ ಬುಗ್ಗೆ (3)
4. ಬೊಟ್ಟು ಇಲ್ಲಿ ಕಾಣುತ್ತಿದೆ (3)
5. ಯಜಮಾನನ ಹುಟ್ಟುಗುಣ (4)
6. ತಾಣದಲ್ಲಿ ಕಾಣಿಸುತ್ತಿರುವ ನಕ್ಷತ್ರಗಳ ಗುಂಪು (4)
7. ಇಂದ್ರಿಯ ನಿಗ್ರಹಿಸುವವ ಯಥಾಸ್ಥಿತಿಯಲ್ಲಿದ್ದಾನಲ್ಲಾ! (2)
9. ಒಂಬತ್ತಾದರೂ ಹೊಸದು (2)
13. ಇದು ಸೂಕ್ತವಾದುದು (4)
14. ಪೂಜೆ ಮಾಡುವವನು (4)
15. ವಿರಳವಾಗಿ ಕಾಣುತ್ತಿರುವ ರಕ್ತ (3)
16. ಬಾಣ ಹಿಡಿದು ಬಂದಿರುವ ಶೈವ ಭಕ್ತ (3)

ಮೇಲಿಂದ ಕೆಳಕ್ಕೆ
1. ನಡುವೆ ಪಾದವನ್ನಿಟ್ಟು ದೃಢಪಡಿಸುವಿಕೆ! (5)
2. ಅಕಸ್ಮತ್ತಾಗಿ ನಡೆದುದು (5)
3. ಮಾದ ಎಸಗಿದ ತಪ್ಪು (3)
5. ಇಲ್ಲೇ ಇದೆ ಬುದ್ಧಿವಂತಿಕೆ! (4)
8. ಹೊಟ್ಟೆಬಾಕ ಇಲ್ಲಿದ್ದಾನೆ (4)
10. ಮಾನಸಿಕ ಪ್ರಭಾವ ಬೀರಿ ವಶಪಡಿಸಿಕೊಳ್ಳುವುದು (5)
11. ಈತ ಕೈಲಾಗದವನು (5)
12. ಪುರದಲ್ಲಿ ನೀಡಿದ ಸಾಕ್ಷಿ (3)



5172ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಖನಿಜ 4.ನಗುಮೊಗ 6.ವಿರೇಚಕ 8.ನವಾಬ 11.ಪರಮ 13.ಸಮಾಧಾನಿ 17.ಜನಮತ 18.ರಜಕ

ಮೇಲಿಂದ ಕೆಳಕ್ಕೆ: 1.ಖಚರ 2.ಜನಮನ 3.ಎಡಚ 5.ಗವಿ 7.ಕಸುವು 9.ಬಳಪ 10.ನೀರಸ 12.ಮನ್ವಂತರ 14.ಮಾರ್ದವ 15.ನಿಜ 16.ಕೌತುಕ

ಸುಡೊಕು 5559

	2			3		4		6
4		1	5		2			
				4			5	1
	9				4	6		
6		2		8				5
		4	2			3		
				2				9
	1	3	8		5		6	
9	4		6		3	8		

5558 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಹೆಚ್ಚಿದ ನೇರ ತೆರಿಗೆ ಸಂಗ್ರಹ



ನವದೆಹಲಿ (ಪಿಟಿಐ): ನೇರ ತೆರಿಗೆಯ ಸರಾಸರಿ ಸಂಗ್ರಹವು ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೆ ಶೇ 26ರಷ್ಟು ಹೆಚ್ಚಾಗಿದ್ದು ₹13.63 ಲಕ್ಷ ಕೋಟಿಗೆ ತಲುಪಿದೆ.

ಟಿಡಿಎಸ್ ಮತ್ತು ಕಾರ್ಪೊರೇಟ್ ಮುಂಗಡ ತೆರಿಗೆ ಸಂಗ್ರಹದಲ್ಲಿ ಹೆಚ್ಚಳ ಆಗಿರುವುದೇ ಈ ಪ್ರಮಾಣದ ಬೆಳವಣಿಗೆಗೆ ಕಾರಣ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯು (ಸಿಬಿಡಿಟಿ) ತಿಳಿಸಿದೆ.

ಡಿಸೆಂಬರ್ 17ರವರೆಗೆ ₹2.28 ಲಕ್ಷ ಕೋಟಿ ತೆರಿಗೆ ಮರುಪಾವತಿ ಮಾಡಲಾಗಿದೆ. ಇದು ಹಿಂದಿನ ಅವಧಿಗಿಂತಲೂ ಶೇ 68ರಷ್ಟು ಹೆಚ್ಚು ಎಂದು ಸಿಬಿಡಿಟಿ ತಿಳಿಸಿದೆ.

ತೆರಿಗೆ ಮರುಪಾವತಿ ಮಾಡಿದ ಬಳಿಕ ನಿವ್ವಳ ತೆರಿಗೆ ಸಂಗ್ರಹ ₹11.35 ಲಕ್ಷ ಕೋಟಿಗೆ ತಲುಪಿದ್ದು, ಬಜೆಟ್ ಅಂದಾಜಿನ ಶೇ 80ರಷ್ಟು ಆಗಿದೆ. ಪ್ರಸಕ್ತ ಹಣಕಾಸು ವರ್ಷಕ್ಕೆ ನೇರ ತೆರಿಗೆ ಸಂಗ್ರಹವು ₹14.20 ಲಕ್ಷ ಕೋಟಿ ಆಗಲಿದೆ ಎಂದು ಬಜೆಟ್‌ನಲ್ಲಿ ಅಂದಾಜು ಮಾಡಲಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೆ ಆದಾಯ ಮತ್ತು ಕಾರ್ಪೊರೇಟ್ ತೆರಿಗೆಗಳ ಮೂಲಕ ಒಟ್ಟು ₹11.35 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಇದು ಹಿಂದಿನ ಹಣಕಾಸು ವರ್ಷದಲ್ಲಿ ಸಂಗ್ರಹ ಆಗಿದ್ದ ₹9.47 ಲಕ್ಷ ಕೋಟಿಗಿಂತಲೂ ಶೇ 19.81ರಷ್ಟು ಹೆಚ್ಚು ಎಂದು ಸಿಬಿಡಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ತೆರಿಗೆ ಮರುಪಾವತಿ ಪ್ರಕ್ರಿಯೆಯನ್ನು ವೇಗವಾಗಿ ನಡೆಸಲಾಗುತ್ತಿದೆ. ದೃಢೀಕರಿಸಿರುವ ಐಟಿಆರ್‌ಗಳಲ್ಲಿ ಡಿಸೆಂಬರ್ 17ರವರೆಗೆ ಶೇ 96.5ರಷ್ಟು ಮರುಪಾವತಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಸಿಬಿಡಿಟಿ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

19th Year Remembrance

Dr. A.N. Raja Venkata Reddy
Expired on 19-12-2003
You will always live in our Hearts & Memories Guiding & Inspiring us at all times
Inserted By-
Wife:- Y.P. Hemamalini Reddy
Late. A.V. Narasimha Reddy Family

ಕಿರು ಹಣಕಾಸು ಸಂಸ್ಥೆ: ಸಾಲ ನೀಡಿಕೆ ಶೇ 11 ಹೆಚ್ಚಳ

ನವದೆಹಲಿ (ಪಿಟಿಐ): ಕಿರು ಹಣಕಾಸು ಸಂಸ್ಥೆಗಳು ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ₹ 71,916 ಕೋಟಿ ಮೊತ್ತದ ಸಾಲ ನೀಡಿವೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಸಾಲ ನೀಡಿಕೆಯಲ್ಲಿ ಶೇ 11ರಷ್ಟು ಹೆಚ್ಚಳ ಕಂಡುಬಂದಿದೆ.

ಹಿಂದಿನ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಕಿರು ಹಣಕಾಸು ಸಂಸ್ಥೆಗಳು ₹ 64,899 ಕೋಟಿ ಮೊತ್ತದ ಸಾಲ ನೀಡಿದ್ದವು ಎಂದು ಕಿರು ಹಣಕಾಸು ಸಂಸ್ಥೆಗಳ ಜಾಲದ (ಎಂಫಿನ್) ಈಚಿನ ವರದಿ ತಿಳಿಸಿದೆ.

2022ರ ಸೆಪ್ಟೆಂಬರ್ 30ರ ಅಂತ್ಯದವರೆಗೆ ಕಿರು ಹಣಕಾಸು ಉದ್ಯಮವು ನೀಡಿರುವ ಒಟ್ಟು ಸಾಲದ ಮೊತ್ತವು ₹3 ಲಕ್ಷ ಕೋಟಿಯಷ್ಟು ಆಗಿದೆ. 2021ರ ಸೆಪ್ಟೆಂಬರ್ 30ಕ್ಕೆ ಹೋಲಿಸಿದರೆ ಶೇ 23.5ರಷ್ಟು ಹೆಚ್ಚಾಗಿದೆ ಎಂದು ವರದಿ ಹೇಳಿದೆ.

ಕಿರು ಹಣಕಾಸು ಸಂಸ್ಥೆಗಳಲ್ಲಿ ಸಕ್ರಿಯವಾಗಿರುವ ಖಾತೆಗಳ ಸಂಖ್ಯೆಯು 12 ತಿಂಗಳಿನಲ್ಲಿ ಶೇ 14.2ರಷ್ಟು ಹೆಚ್ಚಾಗಿದೆ. ಒಟ್ಟು ಖಾತೆಗಳ ಸಂಖ್ಯೆಯು ಸೆಪ್ಟೆಂಬರ್ 30ರ ಅಂತ್ಯಕ್ಕೆ 12 ಕೋಟಿಗೆ ತಲುಪಿದೆ.

ಕೋವಿಡ್ ಸಾಂಕ್ರಾಮಿಕದಿಂದಾಗಿ ಎರಡು ವರ್ಷಗಳಲ್ಲಿ ವಹಿವಾಟಿಗೆ ಸಮಸ್ಯೆ ಆಗಿದ್ದರೂ ಕಳೆದ ಐದು ವರ್ಷಗಳಲ್ಲಿ ಉದ್ಯಮದ ವಾರ್ಷಿಕ ಸರಾಸರಿ ಬೆಳವಣಿಗೆ ಪ್ರಮಾಣವು (ಸಿಎಜಿಆರ್) ಶೇ 22.2ರಷ್ಟು ಉತ್ತಮವಾಗಿದೆ ಎಂದು ಎಂಫಿನ್ ನಿರ್ದೇಶಕ ಅಲೋಕ್ ಮಿಶ್ರಾ ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹405-650
ದ್ವಿತಳಿ (ಬಿ.ವಿ)	₹133-833

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎಸ್‌ಐಪಿ: ಈ ತಪ್ಪುಗಳನ್ನು ಮಾಡಬೇಡಿ

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಉಳಿತಾಯ ಮಾಡಿದ ಹಣವನ್ನು ಹೂಡಿಕೆ ಮಾಡಿ ಬೆಳೆಸಲು ಮ್ಯೂಚುಯಲ್ ಫಂಡ್ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಒಳ್ಳೆಯ ಆಯ್ಕೆ. ಆದರೆ ಎಸ್‌ಐಪಿಗಳನ್ನು ಆರಂಭಿಸಿದ ನಂತರ ಬಹುತೇಕರು ಕೆಲ ತಪ್ಪುಗಳನ್ನು ಮಾಡುತ್ತಾರೆ. ಮ್ಯೂಚುಯಲ್ ಫಂಡ್ ಹೂಡಿಕೆಯಲ್ಲಿ ಆ ತಪ್ಪುಗಳನ್ನು ತಗ್ಗಿಸಿದಲ್ಲಿ ಸಂಪತ್ತು ಸೃಷ್ಟಿಯ ಹಾದಿ ಸುಗಮವಾಗುತ್ತದೆ.

ಎಸ್‌ಐಪಿ ಅಂದ್ರೆ?: ‘ಎಸ್‌ಐಪಿ’ ಎನ್ನುವುದು ಹೂಡಿಕೆಯ ಉತ್ಪನ್ನವಲ್ಲ ಹೂಡಿಕೆಯ ವಿಧಾನ. ಪೂರ್ವನಿಗದಿತ ದಿನದಂದು, ಪೂರ್ವ ನಿಗದಿತ ಮೊತ್ತವನ್ನು ಸ್ವಯಂಚಾಲಿತವಾಗಿ ಹೂಡಿಕೆ ಉತ್ಪನ್ನವೊಂದಕ್ಕೆ ವ್ಯವಸ್ಥಿತವಾಗಿ ವರ್ಗಾಯಿಸುವ ವಿಧಾನವೇ ‘ಎಸ್‌ಐಪಿ’ ಅರ್ಥಾತ್ ವ್ಯವಸ್ಥಿತ ಹೂಡಿಕೆ ಯೋಜನೆ. ಮ್ಯೂಚುಯಲ್ ಫಂಡ್ ಹೂಡಿಕೆಗಳಲ್ಲಿ ಎಸ್‌ಐಪಿ ವಿಧಾನ ಹೆಚ್ಚು ಚಾಲ್ತಿಯಲ್ಲಿದೆ. ಉದಾಹರಣೆಗೆ ಮ್ಯೂಚುಯಲ್ ಫಂಡ್ ವೊಂದರಲ್ಲಿ ಪ್ರತಿ ತಿಂಗಳ 5 ರಂದು ನೀವು ₹ 2000 ಸಾವಿರ ಹೂಡಿಕೆ ಮಾಡಲು ನಿರ್ಧರಿಸಿದ್ದರೆ, ಮಾರುಕಟ್ಟೆ ಏರಿಳಿತಗಳಿಗೆ ತಲೆಕೆಡಿಸಿಕೊಳ್ಳದೆ ಪ್ರತಿ ತಿಂಗಳು ಅದನ್ನು ನಿಯಮಿತವಾಗಿ ಮುಂದುವರಿಸಿಕೊಂಡು ಹೋಗುವ ಪ್ರಕ್ರಿಯೆಯನ್ನು ಎಸ್‌ಐಪಿ ಎನ್ನಬಹುದು.

ಎಸ್‌ಐಪಿಗಳನ್ನು ತಪ್ಪಿಸೋದು: ಎಸ್‌ಐಪಿ ಹೂಡಿಕೆಯಲ್ಲಿ ಪ್ರತಿ ತಿಂಗಳು ನಿರ್ದಿಷ್ಟ ಮೊತ್ತ ಹೂಡಿಕೆಗೆ ಬದ್ಧರಾಗಿರಬೇಕಾಗುತ್ತದೆ. ಆದರೆ ಬಹುತೇಕರು ಎಸ್‌ಐಪಿ ಹೂಡಿಕೆಗಳನ್ನು ಶಿಸ್ತುಬದ್ಧರಾಗಿ ಮಾಡುವುದಿಲ್ಲ. ಎಸ್‌ಐಪಿ ಹೂಡಿಕೆಯನ್ನು ನಿಗದಿತ ದಿನಾಂಕದಲ್ಲಿ ಮಾಡದಿದ್ದರೆ ಹೂಡಿಕೆ ಗುರಿಗೆ ಹಿನ್ನಡೆಯಾಗುತ್ತದೆ. ಇಷ್ಟೇ ಅಲ್ಲ, ಎಸ್‌ಐಪಿಗಳು ಅನಿಯಮಿತವಾಗಿದ್ದಾಗ ಮಾರುಕಟ್ಟೆಯ ಏರಿಳಿತದ ಲಾಭವೂ ನಿಮಗೆ ಸಿಗುವುದಿಲ್ಲ. ಹಾಗಾಗಿ ಮಾರುಕಟ್ಟೆಯ ತಲ್ಲಣಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ನಿಯಮತವಾಗಿ ಹೂಡಿಕೆ ಮುಂದುವರಿಸಿ.

ನಿಯಮಿತವಾಗಿ ಎಸ್‌ಐಪಿ ಮೊತ್ತ ಹೆಚ್ಚಿಸುತ್ತಾ ಹೋಗಿ: ಉದಾಹರಣೆಗೆ ವ್ಯಕ್ತಿಯೊಬ್ಬ ಪ್ರತಿ ತಿಂಗಳು ₹ 5 ಸಾವಿರ ಮೊತ್ತದ ಎಸ್‌ಐಪಿ ಆರಂಭಿಸುತ್ತಾನೆ ಎಂದರೆ ಅದನ್ನು ಮುಂದುವರಿಸಿಕೊಂಡು ಹೋಗುತ್ತಿರುತ್ತಾನೆ. ಹೀಗೆ ಮಾಡುವ ಬದಲು ಪ್ರತಿ ವರ್ಷ ವೇತನದ ಹೆಚ್ಚಳಕ್ಕೆ ಅನುಗುಣವಾಗಿ ಎಸ್‌ಐಪಿ ಮೊತ್ತವನ್ನೂ ಹೆಚ್ಚಳ ಮಾಡುತ್ತಾ ಸಾಗಿದರೆ ಅನುಕೂಲವಾಗುತ್ತದೆ. ಹೀಗೆ ಮಾಡುವುದರಿಂದ ನಿಮ್ಮ ಹೂಡಿಕೆ ಹಣದಿಂದ ಹಣದುಬ್ಬರ ಮೀರಿ ಲಾಭಾಂಶ ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಗುರಿಯಿಲ್ಲದೆ ಹೂಡಿಕೆ ಮಾಡುವುದು: ಮ್ಯೂಚುಯಲ್ ಫಂಡ್ ಹೂಡಿಕೆಯಲ್ಲಿ ನಿಮ್ಮ ಅಗತ್ಯಕ್ಕೆ ತಕ್ಕಂತೆ ವಿವಿಧ ರೀತಿಯ ಫಂಡ್‌ಗಳಿವೆ. ಉದಾಹರಣೆಗೆ ಸುಲಭ ನಗದೀಕರಣಕ್ಕೆ ಲಿಕ್ವಿಡ್ ಫಂಡ್ ನೆರವಾಗುತ್ತದೆ, ಹೆಚ್ಚು ರಿಸ್ಕ್ ಇಲ್ಲದೆ ಹೂಡಿಕೆ ಮಾಡಬೇಕು ಅಂದ್ರೆ ಡೆಟ್ ಫಂಡ್ ಉತ್ತಮವಾಗುತ್ತದೆ, ಹಾಗೆಯೇ ದೀರ್ಘಾವಧಿಗೆ ಹೂಡಿಕೆ ಮಾಡುವುದಾದರೆ ಈಕ್ವಿಟಿ ಮ್ಯೂಚುಯಲ್ ಫಂಡ್ ಇದೆ. ಈ ಕಾರಣದಿಂದಾಗಿ ಯಾವ ಉದ್ದೇಶಕ್ಕೆ ಎಸ್‌ಐಪಿ ಹೂಡಿಕೆ ಮಾಡುತ್ತಿದ್ದೀರಿ ಎನ್ನುವುದು ಬಹಳ ಮುಖ್ಯವಾಗುತ್ತದೆ.

ಮಾರುಕಟ್ಟೆ ಕುಸಿದಾಗ ಎಸ್‌ಐಪಿ ನಿಲ್ಲಿಸೋದು: ಮಾರುಕಟ್ಟೆ ಕುಸಿದಾಗ ಮ್ಯೂಚುಯಲ್ ಫಂಡ್‌ಗಳ ‘ಎನ್‌ಎವಿ’ (ನಿವ್ವಳ ಆಸ್ತಿ ಮೌಲ್ಯ- Net Asset Value) ತಗ್ಗುತ್ತದೆ. ಈ ಸ್ಥಿತಿಯಲ್ಲಿ ನೀವು ಎಸ್‌ಐಪಿ ಮೂಲಕ ಹೆಚ್ಚು ಮ್ಯೂಚುಯಲ್ ಫಂಡ್ ಯುನಿಟ್‌ಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ನಿಮ್ಮ ಬಳಿ ಹೆಚ್ಚು ಯುನಿಟ್‌ಗಳಿದ್ದರೆ ಮಾರುಕಟ್ಟೆ ಪುಟಿದೆದ್ದಾಗ ನಿಮಗೆ ಹೆಚ್ಚು ಲಾಭಾಂಶ ಸಿಗುತ್ತದೆ. ಹಾಗಾಗಿ ಸಾಧ್ಯವಾದರೆ ಇನ್ನಷ್ಟು ಹೂಡಿಕೆ ಮಾಡಲು ಪ್ರಯತ್ನಿಸಬೇಕೇ ಹೊರತು ಪೇಟೆ ಕುಸಿದಾಗ ಎಸ್‌ಐಪಿಗಳನ್ನು ಸ್ಥಗಿತಗೊಳಿಸಬಾರದು. ಎಸ್‌ಐಪಿಯಲ್ಲಿ ಪ್ರತಿ ತಿಂಗಳು ತೊಡಗಿಸಿದ ಹಣ ಆಯಾಯ ತಿಂಗಳಲ್ಲಿ ಕಟ್ಟಿದ ತಾರೀಕಿಗನುಗುಣವಾಗಿ ವಾರ್ಷಿಕ ಸರಾಸರಿ ಲೆಕ್ಕಕ್ಕೆ ಒಳಪಡುವುದರಿಂದ ಲಾಭದ ಸಾಧ್ಯತೆಯೇ ಹೆಚ್ಚಿರುತ್ತದೆ. ಎಸ್‌ಐಪಿ ನಿಲ್ಲಿಸಬಾರದು ಎನ್ನುವುದಕ್ಕೆ ಇದು ಕೂಡ ಒಂದು ಪ್ರಮುಖ ಕಾರಣ.

ಎಸ್‌ಐಪಿ ನಿಲ್ಲಿಸಿ ಹೊರಬರೋದು: ಮಾರುಕಟ್ಟೆ ಕುಸಿದ ತಕ್ಷಣ ಮ್ಯೂಚುಯಲ್ ಫಂಡ್ ಹೂಡಿಕೆಯಿಂದ ಹೊರಬರಲು ಪ್ರಯತ್ನಿಸಿದರೆ ನಿಮ್ಮ ನಷ್ಟದ ಪ್ರಮಾಣ ಮತ್ತಷ್ಟು ಜಾಸ್ತಿಯಾಗುತ್ತದೆ. ಉದಾಹರಣೆ: ನೀವು ತಿಂಗಳಿಗೆ ₹ 4 ಸಾವಿರದಂತೆ ಕಳೆದ 12 ತಿಂಗಳ ಅವಧಿಯಲ್ಲಿ ಎಸ್‌ಐಪಿ ಮೂಲಕ ಮ್ಯೂಚುವಲ್ ಫಂಡ್ ನಲ್ಲಿ ಒಟ್ಟು ₹ 48 ಸಾವಿರ ಹೂಡಿಕೆ ಮಾಡಿದ್ದೀರಿ ಎಂದಿಟ್ಟುಕೊಳ್ಳೋಣ. ಮೇಲಿಂದ ಮೇಲೆ ಷೇರು ಮಾರುಕಟ್ಟೆ ಕುಸಿದ ತಕ್ಷಣ ನಿಮ್ಮ ಹೂಡಿಕೆ ₹ 40 ಸಾವಿರಕ್ಕೆ ಬರುತ್ತದೆ ಎಂದು ಭಾವಿಸೋಣ. ಹೀಗಾದಾಗ ನೀವು ಮ್ಯೂಚುವಲ್ ಫಂಡ್ ಹೂಡಿಕೆ ಹಿಂಪಡೆದರೆ ನಿಮಗೆ ಒಂದೇ ಬಾರಿ 8 ಸಾವಿರ ನಷ್ಟವಾಗುತ್ತದೆ. ಹೂಡಿಕೆ ಹೊರತೆಗೆಯುವ ಬದಲು ಎಸ್‌ಐಪಿ ಹೂಡಿಕೆ ಮುಂದುವರಿಸಿ ಮಾರುಕಟ್ಟೆ ಉತ್ತಮ ಸ್ಥಿತಿಯಲ್ಲಿದ್ದಾಗ ಹೂಡಿಕೆಯಿಂದ ಹೊರಬಂದರೆ ಹೆಚ್ಚು ಲಾಭ ಸಿಗುತ್ತದೆ. ಬಹುತೇಕರು ಈ ಮುಂದಾಲೋಚನೆ ಮಾಡದೆ ಹೂಡಿಕೆಯಿಂದ ದಿಢೀರ್ ಹೊರಬಂದು ನಷ್ಟ ಅನುಭವಿಸುತ್ತಾರೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

ಎರಡನೇ ವಾರ ಕುಸಿತ ಕಂಡ ಸೂಚ್ಯಂಕಗಳು

ಸತತ ಎರಡನೇ ವಾರ ಷೇರುಪೇಟೆ ಸೂಚ್ಯಂಕಗಳು ಕುಸಿತ ದಾಖಲಿಸಿವೆ. ಡಿಸೆಂಬರ್ 16 ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಇಳಿಕೆ ಕಂಡಿವೆ. ಅಮೆರಿಕ ಫೆಡರಲ್ ಬ್ಯಾಂಕ್, ಯೂರೋಪಿಯನ್ ಸೆಂಟ್ರಲ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡ್ ಬಡ್ಡಿ ದರ ಹೆಚ್ಚಳದ ನಿರ್ಧಾರ ಮಾಡಿದ್ದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 2.2, ಎಫ್‌ಎಂಸಿಜಿ ಸೂಚ್ಯಂಕ ಶೇ 1.8 ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 1.7, ಮಾಹಿತಿ ತಂತಜ್ಞಾನ ಸೂಚ್ಯಂಕ ಶೇ 1.6 ರಷ್ಟು ಕುಸಿದಿವೆ. ಮತ್ತೊಂದೆಡೆ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 0.8 ರಷ್ಟು ಜಿಗಿದಿದೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,832.91 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 3,462.22 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಪಿಡಿಲೈಟ್ ಇಂಡಸ್ಟ್ರೀಸ್, ಏಶಿಯನ್ ಪೇಂಟ್ಸ್, ಟೈಟನ್, ಅಂಬುಜಾ ಸಿಮೆಂಟ್ಸ್, ನೈಕಾ, ಯುನೈಟೆಡ್ ಸ್ಪಿರಿಟ್ಸ್ ಮತ್ತು ಬ್ಯಾಂಕ್ ಆಫ್ ಬರೋಡ ಕುಸಿತ ದಾಖಲಿಸಿವೆ. ಗೇಲ್ ಇಂಡಿಯಾ, ಆಯಿಲ್ ಆ್ಯಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್, ಇನ್ಫೊ ಎಡ್ಜ್ ಮತ್ತು ಎಲ್‌ಐಸಿ ಗಳಿಕೆ ದಾಖಲಿಸಿವೆ.

ಮುನ್ನೋಟ: ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬರುತ್ತಿರುವ ಮಂದಗತಿಯ ಸ್ಥಿತಿ ದೇಶಿಯ ಮಾರುಕಟ್ಟೆಗಳ ಮೇಲೂ ನಾಕಾರಾತ್ಮಕ ಪರಿಣಾಮ ಬೀರುತ್ತಿದೆ. ದೇಶಿಯವಾಗಿ ಯಾವುದೇ ಪ್ರಮುಖ ಬೆಳವಣಿಗೆಗಳು ಇರದ ಕಾರಣ ಸದ್ಯದ ಪರಿಸ್ಥಿತಿಯಲ್ಲಿ ಜಾಗತಿಕ ವಿದ್ಯಮಾನಗಳಿಗೆ ಮಾರುಕಟ್ಟೆ ಪ್ರತಿಕ್ರಿಯಿಸುವ ಸ್ಥಿತಿ ಮುಂದುವರಿಯಲಿದೆ. ಮಾರುಕಟ್ಟೆಯ ಸ್ಥಿತಿಗತಿಯನ್ನು ನಿರಂತರವಾಗಿ ಗಮನಿಸಿ ಹೂಡಿಕೆದಾರರು, ನಿರ್ಧಾರಗಳನ್ನು ತೆಗೆದುಕೊಳ್ಳಬೇಕಿದೆ.

ಒಂಬತ್ತು ಕಂಪನಿಗಳ ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಪ್ರಮುಖ 10 ಮೌಲ್ಯಯುತ ಕಂಪನಿಗಳಲ್ಲಿ 9 ಕಂಪನಿಗಳ ಮಾರುಕಟ್ಟೆ ಮೌಲ್ಯವು ಡಿಸೆಂಬರ್ 17ಕ್ಕೆ ಕೊನೆಗೊಂಡ ವಾರದಲ್ಲಿ ₹1.22 ಲಕ್ಷ ಕೋಟಿ ಕರಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಮಾರುಕಟ್ಟೆ ಮೌಲ್ಯ ₹29,767 ಕೋಟಿ ಕಡಿಮೆ ಆಗಿದ್ದು ಒಟ್ಟು ಮೌಲ್ಯವು ₹17.35 ಲಕ್ಷ ಕೋಟಿಗೆ ತಲುಪಿದೆ.

ಟಿಸಿಎಸ್ ಮೌಲ್ಯದಲ್ಲಿ ₹19,960 ಕೋಟಿ ಕರಗಿದೆ. ಐಸಿಐಸಿಐ ಬ್ಯಾಂಕ್, ಎಚ್‌ಯುಎಲ್, ಎಸ್‌ಬಿಐ, ಭಾರ್ತಿ ಏರ್‌ಟೆಲ್, ಅದಾನಿ ಎಂಟರ್‌ಪ್ರೈಸಸ್ ಮತ್ತು ಎಚ್‌ಡಿಎಫ್‌ಸಿಗೂ ನಷ್ಟ ಆಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಮೌಲ್ಯದಲ್ಲಿ ಮಾತ್ರ ₹4,126 ಕೋಟಿಯಷ್ಟು ಹೆಚ್ಚಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹540

ಆರ್ಥಿಕ ಹಿಂಜರಿತ: 2023ರಲ್ಲಿ ಐಪಿಒಗೆ ಇನ್ನಷ್ಟು ಹಿನ್ನಡೆ ಸಂಭವ

ಐಪಿಒ: ತಗ್ಗಿದ ಬಂಡವಾಳ ಸಂಗ್ರಹ

ನವದೆಹಲಿ (ಪಿಟಿಐ): ಜಾಗತಿಕ ರಾಜಕೀಯ ಬಿಕ್ಕಟ್ಟಿನಿಂದಾಗಿ 2022ರಲ್ಲಿ ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮೂಲಕ ಷೇರುಪೇಟೆಯಲ್ಲಿ ಬಂಡವಾಳ ಸಂಗ್ರಹಿಸುವ ಕಂಪನಿಗಳ ಉದ್ದೇಶಕ್ಕೆ ಹಿನ್ನಡೆಯಾಗಿದೆ.

ಪ್ರೈಮ್ ಡೇಟಾಬೇಸ್ ನೀಡಿರುವ ಮಾಹಿತಿಯ ಪ್ರಕಾರ, 2022ರಲ್ಲಿ ಡಿಸೆಂಬರ್ 16ರವರೆಗೆ 36 ಕಂಪನಿಗಳು ಐಪಿಒ ಮೂಲಕ ₹ 56,940 ಸಾವಿರ ಕೋಟಿ ಬಂಡವಾಳ ಸಂಗ್ರಹ ಮಾಡಿವೆ. 2021ರಲ್ಲಿ 63 ಕಂಪನಿಗಳು ಒಟ್ಟು ₹1.2 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿದ್ದವು.

ಕೆ-ಫಿನ್ ಟೆಕ್ನಾಲಜೀಸ್ ಮತ್ತು ಎಲಿನ್ ಎಲೆಕ್ಟ್ರಾನಿಕ್ಸ್ ಕಂಪನಿಗಳು ಮುಂದಿನವಾರ ಐಪಿಒಗೆ ಬರಲಿದ್ದು, ಒಟ್ಟು ₹1,975 ಕೋಟಿ ಬಂಡವಾಳ ಸಂಗ್ರಹವಾಗುವ ನಿರೀಕ್ಷೆ ಇದೆ. ಹೀಗಾದಲ್ಲಿ ಈ ವರ್ಷ ಐಪಿಒ ಮೂಲಕ ಸಂಗ್ರಹ ಆಗುವ ಒಟ್ಟು ಮೊತ್ತವು 58,915 ಕೋಟಿಗೆ ತಲುಪಲಿದೆ.

ಮುಖ್ಯಾಂಶಗಳು

- ಹೂಡಿಕೆ ಮೇಲೆ ಪರಿಣಾಮ ಬೀರಿದ ರಷ್ಯಾ–ಉಕ್ರೇನ್ ಸಮರ
- ಹೆಚ್ಚಿದ ಹಣದುಬ್ಬರ; ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಏರಿಕೆ

2022ರಲ್ಲಿ ಐಪಿಒ ಮೂಲಕ ಸಂಗ್ರಹ ಆಗಿರುವ ಒಟ್ಟು ಮೊತ್ತದಲ್ಲಿ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಪಾಲು ಶೇ 35ರಷ್ಟು (₹20,557 ಕೋಟಿ) ಇದೆ. ಒಂದೊಮ್ಮೆ ಎಲ್‌ಐಸಿ ಐಪಿಒ ಇಲ್ಲದೇ ಇದ್ದಿದ್ದರೆ ಆಗ ಒಟ್ಟು ಮೊತ್ತವು ತೀರಾ ಕಡಿಮೆ ಆಗುತ್ತಿತ್ತು.

ಐಪಿಒ ಮೂಲಕ ಬಂಡವಾಳ ಸಂಗ್ರಹ (₹ ಕೋಟಿಗಳಲ್ಲಿ)

₹20,557	ಎಲ್‌ಐಸಿ
₹5,235	ಡೆಲಿವರಿ
₹3,600	ಅದಾನಿ ವಿಲ್ಮರ್
₹3,149	ವೇದಾಂತ್ ಫ್ಯಾಷನ್
₹2,205	ಗ್ಲೋಬಲ್ ಹೆಲ್ತ್

ಆರ್ಥಿಕ ಹಿಂಜರಿತದ ಭೀತಿ ಹಾಗೂ ಬಡ್ಡಿದರ ಏರಿಕೆಯಿಂದಾಗಿ ಹೂಡಿಕೆದಾರರು ಆತಂಕದಲ್ಲಿಯೇ 2022ನೇ ವರ್ಷವನ್ನು ಕಳೆದಿದ್ದಾರೆ.

ಜಾಗತಿಕ ಮಟ್ಟದಲ್ಲಿ ಆರ್ಥಿಕ ಬೆಳವಣಿಗೆಯು ಇಳಿಕೆ ಕಾಣುತ್ತಿರುವುದರಿಂದ 2023ನೇ ವರ್ಷವು ಕಷ್ಟವಾಗಿರಲಿದೆ. ಮಾರುಕಟ್ಟೆಯು ಮಂದಗತಿಯಲ್ಲಿ ಇರುವ ಅಥವಾ ಹೆಚ್ಚಿನ ಏರಿಳಿತ ಕಾಣದ ಸ್ಥಿತಿಯಲ್ಲಿ ಇರುವ ನಿರೀಕ್ಷೆ ಇದೆ. ಹೀಗಾಗಿ ಮುಂದಿನ ವರ್ಷ ಐಪಿಒ ಮೂಲಕ ಸಂಗ್ರಹ ಆಗುವ ಮೊತ್ತವು 2022ರಲ್ಲಿ ಸಂಗ್ರಹ ಆಗಿರುವುದಕ್ಕಿಂತಲೂ ಕಡಿಮೆ ಅಥವಾ ಆ ಮಟ್ಟದಲ್ಲಿಯೇ ಇರುವ ಸಾಧ್ಯತೆ ಇದೆ ಎಂದು ಟ್ರೂ ಬೀಕನ್ ಮತ್ತು ಜೆರೋದಾ ಸಂಸ್ಥೆಯ ಸಹ ಸ್ಥಾಪಕ ನಿಕಿಲ್ ಕಾಮತ್ ಅಭಿಪ್ರಾಯಪಟ್ಟಿದ್ದಾರೆ.

ಮುಂದಿನ ವರ್ಷ ಮಾರುಕಟ್ಟೆಯು ಅಸ್ಥಿರವಾಗಿರುವ ನಿರೀಕ್ಷೆ ಇದ್ದು, ಇದರಿಂದಾಗಿ ಐಪಿಒದ ಒಟ್ಟು ಗಾತ್ರವು ಕಡಿಮೆ ಮಟ್ಟದಲ್ಲಿ ಇರಲಿದೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್

ಸಂಘಟನೆಗೆ ರಾಹುಲ್–ಖರ್ಗೆ ಜುಗಲ್‌ಬಂದಿ

ದೌಸಾ (ರಾಜಸ್ಥಾನ) (ಪಿಟಿಐ): ಭಾರತ್ ಜೋಡೊ ಯಾತ್ರೆ ಮೂಲಕ ಕಾಂಗ್ರೆಸ್ ದೇಶದಲ್ಲಿ ಈಗ ಒಂದು ಸೈದ್ಧಾಂತಿಕ ರಾಜಕೀಯ ಭೂಮಿಕೆ ಸಿದ್ಧಪಡಿಸಿದೆ. ಆದರೆ, ಬಿಜೆಪಿ ಅದನ್ನು ಬಳಸಿಕೊಂಡು ಆಟ ಆಡಲು ನೋಡುತ್ತಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಭಾನುವಾರ ಟೀಕಿಸಿದರು.

ಭಾರತ್ ಜೋಡೊ ಯಾತ್ರೆ 100 ದಿನಗಳನ್ನು ಪೂರೈಸಿದ ಸಂದರ್ಭದಲ್ಲಿ ‘ಪಿಟಿಐ’ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು, ರಾಹುಲ್ ಗಾಂಧಿ ಅವರು ಪಕ್ಷವನ್ನು ಸೈದ್ಧಾಂತಿಕ ಆಧಾರದ ಮೇಲೆ ಚುರುಕುಗೊಳಿಸಲು ಯತ್ನಿಸುತ್ತಿದ್ದಾರೆ. ಜತೆಗೆ ಪಕ್ಷದ ಚುನಾಯಿತ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಜುಗಲ್‌ಬಂದಿಯಾಗಿ ಪಕ್ಷ ಸಂಘಟಿಸುತ್ತಿದ್ದಾರೆ ಎಂದರು.

ಪಕ್ಷವು ಮುಂದಿನ ವರ್ಷ ಇಂತಹದೇ ಮತ್ತೊಂದು ಯಾತ್ರೆ ನಡೆಸಲಿದೆಯೇ ಎಂಬ ಪ್ರಶ್ನೆಗೆ ‘ಗುಜರಾತ್‌ನ ಪೋರಬಂದರ್‌ನಿಂದ ಅರುಣಾಚಲ ಪ್ರದೇಶದ ಪರಶುರಾಮ್ ಕುಂಡ್ ವರೆಗೆ ನಡೆಸುವ ಯಾತ್ರೆಯಲ್ಲಿ ಭಾಗವಹಿಸಲು ಖಂಡಿತವಾಗಿಯೂ ನಾನು ಇಷ್ಟಪಡುವೆ. ಆದರೆ, ಮುಂದಿನ ವರ್ಷ ನಾವು ಯಾತ್ರೆ ನಡೆಸಬಹುದೇ ಮತ್ತು ಅದನ್ನು ಹೇಗೆ ನಡೆಸಬಹುದು ಎಂಬುದನ್ನು ಪಕ್ಷದ ಸೂಕ್ತ ವೇದಿಕೆಗಳಲ್ಲಿ ಚರ್ಚಿಸಬೇಕಿದೆ’ ಎಂದರು.

ಭಾರತ್ ಜೋಡೊ ಯಾತ್ರೆ ಮೂಲಕ ರಾಹುಲ್ ಗಾಂಧಿ ಅವರು ರಾಜಕಾರಣಕ್ಕೆ ಹೊಸ ದಿಕ್ಕು ತೋರಿದ್ದಾರೆ. ಕಳೆದ ನೂರು ದಿನಗಳಲ್ಲಿ ಪಕ್ಷವು ದೇಶದ ರಾಜಕಾರಣಕ್ಕೂ ಒಂದು ಸ್ಪಷ್ಟ ವಾಖ್ಯಾನವನ್ನು ಕೊಟ್ಟಿದೆ ಎಂದು ಹೇಳಿದರು.

ಗಾಂಧಿ ಜತೆ ಯಾತ್ರೆ ನಡೆಸಿದ್ದ ಮಿಶ್ರಾ ರಾಹುಲ್ ಜತೆಗೆ ಹೆಜ್ಜೆ: ಒಂದು ಕೈಯಲ್ಲಿ ಕೋಲು ಮತ್ತು ಇನ್ನೊಂದರಲ್ಲಿ ತ್ರಿವರ್ಣ ಧ್ವಜ ಹಿಡಿದು, ರಾಹುಲ್ ಗಾಂಧಿ ಜತೆಗೆ ಭಾರತ್ ಜೋಡೊ ಯಾತ್ರೆಯಲ್ಲಿ ಮೈಲುಗಟ್ಟಲೆ ದೂರವನ್ನು ಕಾಲ್ನಡಿಗೆಯಲ್ಲಿ ಪುಟಿಯುವ ಉತ್ಸಾಹದೊಂದಿಗೆ ಕ್ರಮಿಸುತ್ತಿರುವ 88ರ ಹರೆಯದ ಕರುಣಾ ಪ್ರಸಾದ್ ಮಿಶ್ರಾ ಅವರು ಎಲ್ಲರ ಗಮನ ಸೆಳೆಯುತ್ತಿದ್ದಾರೆ.

‘ಶ್ರೀನಗರದವರೆಗೆ ಕಾಲ್ನಡಿಗೆಯಲ್ಲಿ ಸಾಗಿ ಲಾಲ್‌ಚೌಕದಲ್ಲಿ ತ್ರಿವರ್ಣ ಧ್ವಜ ಹಾರಿಸುವ ಸಂಕಲ್ಪ ಮಾಡಿರುವೆ’ ಎಂದಿದ್ದಾರೆ.

ದಿನವೂ ರಾಹುಲ್ ಜತೆ ಕನಿಷ್ಠ 15 ಕಿ.ಮೀ.ಗೂ ಹೆಚ್ಚು ದೂರ ನಡೆಯುತ್ತಿರುವ ಮಿಶ್ರಾ, 1960ರಲ್ಲೇ ಕಾಂಗ್ರೆಸ್ ಸೇರಿದವರು. ‘ನಾನು 1935-36ರಲ್ಲಿ ಜಬಲ್ಪುರದಿಂದ ಅಲಹಾಬಾದ್ ವರೆಗೆ ಮಹಾತ್ಮ ಗಾಂಧೀಜಿ ಅವರೊಂದಿಗೆ ಪಾದಯಾತ್ರೆ ನಡೆಸಿದ್ದೇನೆ’ ಎಂದು ನೆನಪುಗಳನ್ನು ಹಂಚಿಕೊಂಡರು.

ಕಮಲ್ ಹಾಸನ್ ಭಾಗಿ (ಚೆನ್ನೈ ವರದಿ): ಖ್ಯಾತ ನಟ ಹಾಗೂ ‘ಮಕ್ಕಳ್ ನೀಧಿ ಮೈಯಂ’ ಪಕ್ಷದ ಮುಖ್ಯಸ್ಥ ಕಮಲ್ ಹಾಸನ್ ಅವರು ಡಿ.24ರಂದು ಭಾರತ್ ಜೋಡೊ ಯಾತ್ರೆಯಲ್ಲಿ ಪಾಲ್ಗೊಳ್ಳುವರು.

‘ಅಂದು ದೆಹಲಿಯಲ್ಲಿ ನಡೆಯುವ ಯಾತ್ರೆಯಲ್ಲಿ ಹೆಜ್ಜೆ ಹಾಕುವೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ರಾಜಸ್ಥಾನದ ದೌಸಾದಲ್ಲಿ ಭಾನುವಾರ 88ರ ಹರೆಯದ ಕರುಣಾ ಪ್ರಸಾದ್ ಮಿಶ್ರಾ ಅವರು ರಾಹುಲ್ ಗಾಂಧಿಯವರೊಂದಿಗೆ ಭಾರತ್ ಜೋಡೊ ಯಾತ್ರೆಯಲ್ಲಿ ಸಾಗಿದರು – ಪಿಟಿಐ ಚಿತ್ರ

ಭೂ ಸ್ವಾಧೀನ ಪರಿಹಾರ ವ್ಯಾಜ್ಯ: ಕರ್ನಾಟಕಕ್ಕೆ 2ನೇ ಸ್ಥಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನೀಡುವ ಪರಿಹಾರಕ್ಕೆ ಸಂಬಂಧಿಸಿ ಕರ್ನಾಟಕದಲ್ಲಿ ಗರಿಷ್ಠ ಸಂಖ್ಯೆಯ ವ್ಯಾಜ್ಯಗಳಿದ್ದು, ರಾಜ್ಯವು ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ.

ಪರಿಹಾರಕ್ಕೆ ಸಂಬಂಧಿಸಿ ದೇಶದಲ್ಲಿ ಒಟ್ಟು 1,74,387 ವ್ಯಾಜ್ಯಗಳಿವೆ. ಈ ಪೈಕಿ ಕರ್ನಾಟಕದಲ್ಲಿ 23,501 ಪ್ರಕರಣಗಳಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಲೋಕಸಭೆಯಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ನಿತಿನ್ ಗಡ್ಕರಿ

ಗರಿಷ್ಠ ಸಂಖ್ಯೆಯ 37,327 ವ್ಯಾಜ್ಯಗಳು ಮಹಾರಾಷ್ಟ್ರದಲ್ಲಿದ್ದು, ದೇಶದಲ್ಲಿ ಈ ರಾಜ್ಯ ಮೊದಲ ಸ್ಥಾನದಲ್ಲಿದೆ. ಪಂಜಾಬ್‌ನಲ್ಲಿ 22,877 ಪ್ರಕರಣಗಳು ಬಾಕಿ ಇದ್ದು, ಮೂರನೇ ಸ್ಥಾನದಲ್ಲಿದೆ.

ಭೂ ಸ್ವಾಧೀನಕ್ಕೆ ಸಂಬಂಧಿಸಿದ ಪರಿಹಾರ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವ ಹಂತದಲ್ಲಿ ಕೆಲ ಪ್ರಕರಣಗಳಲ್ಲಿ ದೂರುದಾರರು ಹೈಕೋರ್ಟ್ ಮೆಟ್ಟಿಲೇರುತ್ತಾರೆ. ಇನ್ನೂ ಕೆಲ ಪ್ರಕರಣಗಳು ಸುಪ್ರೀಂಕೋರ್ಟ್‌ಗೂ ಹೋಗುತ್ತವೆ. ಹೀಗಾಗಿ ಪರಿಹಾರ ವಿತರಣೆಯಲ್ಲಿ ಆಗುತ್ತಿರುವ ಈ ವಿಳಂಬವನ್ನು ತಪ್ಪಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ.

‘ಈ ವಿಷಯದಲ್ಲಿ ಅಗತ್ಯ ಕಂಡುಬಂದಲ್ಲಿ, ಎಲ್ಲ ಭಾಗಿದಾರರೊಂದಿಗೆ ಚರ್ಚಿಸಿ ಕಾನೂನಿಗೆ ತಿದ್ದುಪಡಿ ತರಲಾಗುವುದು. ಭೂಮಿ ಕಳೆದುಕೊಂಡವರಿಗೆ ತ್ವರಿತವಾಗಿ ಹಾಗೂ ಪಾರದರ್ಶಕ ವಿಧಾನದ ಮೂಲಕ ಪರಿಹಾರ ಸಿಗುವಂತಾಗಬೇಕು ಎಂಬುದೇ ನಮ್ಮ ಉದ್ದೇಶ’ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಪ್ರವಾಸ
Travel
ಹೊಸವರ್ಷಕ್ಕೆ_16.01.2023 6ದಿನಗಳು A/c.Bus, ವಿಮಾನದಲ್ಲಿ ಕಾಶಿ,ಗಯಾ ಬುದ್ದಗಯಾ,ಅಯೋಧ್ಯ, ಅಲಹಾಬಾದ್_26000/ (ಕೆಲವೇ_ಸೀಟುಗಳಿವೆ) ಪ್ರತಿ_ತಿಂಗಳು ಹಡಗು/ವಿಮಾನದಲ್ಲಿ ಅಂಡಮಾನ್, ಹವಳದ್ವೀಪ ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9845560219/ 9739847429.

ಸೋಮನಾಥ್ ದ್ವಾರಕಾ ಮಾತ್ರಗಯಾ ಉಜ್ಜಯಿನಿ,ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗಗಳು 26.01.2023 ರಿಂದ 15/10 ದಿನಗಳು. ವಿಯವಾಡ, ಭದ್ರಾಚಲಂ ಪಂಚರಾಮ ಮಂದಿರಗಳು 02.02.2023 ರಿಂದ 10 ದಿನಗಳು ಗೌಹಾಟಿ,ಸಿಕ್ಕಿಂ ಡಾರ್ಜಲಿಂಗ್ ಕೊಲ್ಕತ್ತ,ಪುರಿ ಕೊನಾರ್ಕ್ ಭುವನೇಶ್ವರ್ 03.02.2023 ರಿಂದ 14 ದಿನಗಳು. ಕಾಶಿ,ಗಯಾ,ಪ್ರಯಾಗ ನೈಮೀಶಾರಣ್ಯ 26.01.2023 ರಿಂದ 8 ದಿನಗಳು ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಮಹಾಶಿವರಾತ್ರಿ ಪ್ರಯುಕ್ತ 09/02/2023ರಿಂದ ವಿಮಾನ ಮತ್ತು ಏ.ಸಿ ಬಸ್ಸಿನಲ್ಲಿ 16ದಿನಗಳ ಮುಕ್ತಿನಾಥ್,ಪಶುಪತಿನಾಥ್, ಪೋಕ್ರಾ,ಭಕ್ತಪುರ,ಕಾಶಿ, ನೈಮಿಷಾರಣ್ಯ ಹಾಗು 13ದಿನಗಳ ಪಂಚರಾಮಕ್ಷೇತ್ರ ಸಮೇತ ಅನ್ನಾವರಂ,ಸಿಂಹಾಚಲಂ,ವಿಶಾಖ ಪಟ್ಟಣ 28.1.2023ರಿಂದ 9ದಿನಗಳ ಕಾಶಿ,ಗಯಾ, ಬೈದ್ಯನಾಥೇಶ್ವರ,ಅಲಹಾಬಾದ್. ಏಷ್ಯನ್ ಟ್ರಾವೆಲ್ ಲೈನ್ಸ್, #164/3,ಆರ್.ವಿ.ರಸ್ತೆ, ಬೆಂಗಳೂರು-4. ಫೋನ್: 8105657052, 9480182865.

ಶಿವರಾತ್ರಿ, ಪ್ರಯುಕ್ತ ಜನವರಿ ಫೆಬ್ರವರಿ ತಿಂಗಳಲ್ಲಿ 8 ದಿನಗಳ ಕಾಶಿ,ಗಯಾ,ಅಯೋಧ್ಯ ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ 12 ದಿನಗಳ ಮುಕ್ತಿನಾಥ ನೇಪಾಳ ನೈಮಿಶಾರಣ್ಯ 14 ದಿನಗಳ ದೆಹಲಿ ಅಮೃತ್‌ಸರ್ ವೈಷ್ಣೋದೇವಿ ಕುಲು ಮನಾಲಿ,ಸಿಮ್ಲಾ 14/21/26 ದಿನಗಳ ಕಾಶಿ,ಗಯಾ ಪ್ರಯಾಗ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ದೆಹಲಿ 16 ದಿನಗಳ ಪಂಚದ್ವಾರಕ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ ಅಹಮದಾಬಾದ್ 21.01.2023 ಒಳಗಾಗಿ ಪೂರ್ಣ ಪ್ರಯಾಣ ದರವನ್ನು ಪಾವತಿಸಿದವರಿಗೆ ಬಸ್ ದರದಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289 9019301300 9448119290

★22.02.2023 14ದಿನಗಳು★ ಮಧ್ಯಪ್ರದೇಶ ಗುಜರಾತ್, ರಾಜಸ್ಥಾನ, 4ಜ್ಯೋತಿರ್ಲಿಂಗ ದ್ವಾರಕಾ, ನಿಷ್ಕಳಂಕಮಹಾದೇವ್, ಅಂಬಾಜಿ,ಜೆಸ್ಮಲೇರ್, ಬಿಕಾನೇರ್ ಜೈಪುರ. ಶ್ರೀಗಂಗಾ ಟೂರಿಸ್ಟ್: 9480253807/ 8105522123

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9902433500/ 9945445809

Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 3/1/2023 ಪೂರಿ, ಕೋನಾರ್ಕ್, ಭುನೇಶ್ವರ. 29/1/2023 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ,ಮಹಾಕಾಳೇಶ್ವರ, ಓಂಕಾರೇಶ್ವರ, ನಾಗನಾಥ್, ಸೋಮನಾಥ. 9591017782

ಉದ್ಯೋಗಾವಕಾಶ
General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡಿಗಿಯರು ಬೇಕಾಗಿದ್ದಾರೆ ಊಟ,ವಸತಿಯಿದೆ 10,000 -15,000, 8951315839, 9880545002

ಆಯುರ್ವೇದ ಕಂಪನಿಗೆ ಉದ್ಯೋಗಿ /ನಿರುದ್ಯೋಗಿ, ಪುರುಷ /ಮಹಿಳೆ ಅಗತ್ಯವಿದೆ, 25000/- ರಿಂದ 30000/- ಪ್ರತಿ ತಿಂಗಳು ಗಳಿಸಿ, ಸಂಪರ್ಕಿಸಿ. 6283289096

Part-Time Jobs
ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ಆಗ ಮರಡೋನಾ, ಈಗ ಮೆಸ್ಸಿ; ಸಂತಸದ ಹೊನಲಲ್ಲಿ ಮಿಂದೆದ್ದ ಅಭಿಮಾನಿಗಳು

ಅರ್ಜೆಂಟೀನಾ ಮುಡಿಗೇರಿದ ಕಿರೀಟ

ಟ್ರೋಫಿ ಮತ್ತು ಗೋಲ್ಡನ್ ಬಾಲ್‌ನೊಂದಿಗೆ ಲಯೊನೆಲ್ ಮೆಸ್ಸಿ – ಎಎಫ್‌ಪಿ ಚಿತ್ರ

ಪ್ರಶಸ್ತಿ ಜಯಿಸಿದ ಅರ್ಜೆಂಟೀನಾ ತಂಡದ ಆಟಗಾರರ ಸಂಭ್ರಮ– ಎಎಫ್‌ಪಿ ಚಿತ್ರ

ದೋಹಾ (ಎಎಫ್‌ಪಿ): ಲುಸೈಲ್ ಕ್ರೀಡಾಂಗಣದಲ್ಲಿದ್ದ ಪ್ರೇಕ್ಷಕರ ಕಂಗಳಲ್ಲಿ ಆನಂದಭಾಷ್ಪದ ಸೆಲೆ. ಅವರ ಕೈಗಳಲ್ಲಿ ದಿಗ್ಗಜ ಡಿಯೆಗೊ ಮೆರಡೋನಾ ಅವರ ಚಿತ್ರಗಳಿದ್ದ ಬ್ಯಾನರ್‌ಗಳು.

ಅರ್ಜೆಂಟೀನಾದ ಆಟಗಾರರ ಕಂಗಳಲ್ಲಿ ಆನಂದದ ಧಾರೆ ಹರಿಯುತ್ತಲೇ ಇತ್ತು. 36 ವರ್ಷಗಳ ನಂತರ ತಮ್ಮ ದೇಶಕ್ಕೆ ಫಿಫಾ ವಿಶ್ವಕಪ್ ಗೆದ್ದುಕೊಟ್ಟ ಸಾರ್ಥಕತೆಯಲ್ಲಿ ಮಿಂದೆದ್ದರು. ಅಲ್ಲದೇ ತಮ್ಮ ತಂಡದ ದಿಗ್ಗಜ ಲಯೊನೆಲ್ ಮೆಸ್ಸಿಗೆ ಚಿನ್ನದ ವಿದಾಯ ನೀಡಿದ ಹೆಮ್ಮೆಯೂ ಅವರದ್ದಾಗಿತ್ತು. ಎರಡು ವರ್ಷಗಳ ಹಿಂದೆ ನಿಧನರಾಗಿದ್ದ ಮರಡೋನಾ ಅವರಿಗೂ ಗೌರವ ಸಲ್ಲಿಸಿದರು.

ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿಯೇ ಅತ್ಯಂತ ರೋಚಕ ಪಂದ್ಯಗಳ ಸಾಲಿಗೆ ಸೇರಿದ ಫೈನಲ್‌ನಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ 4–2ರಿಂದ ಹಾಲಿ ಚಾಂಪಿಯನ್ ಫ್ರಾನ್ಸ್ ತಂಡವನ್ನು ಪರಾಭವಗೊಳಿಸಿದ ಅರ್ಜೆಂಟೀನಾ ಮೂರನೇ ಬಾರಿ ಪ್ರಶಸ್ತಿಗೆ ಮುತ್ತಿಕ್ಕಿತು. ಎರಡು ಗೋಲು ಗಳಿಸಿದ ಮೆಸ್ಸಿ ಅವರು ಮೊದಲ ಟ್ರೋಫಿಯ ಸಂಭ್ರಮ ಆಚರಿಸಿದರು. ಆದರೆ ಫ್ರಾನ್ಸ್ ತಂಡದ ಕಿಲಿಯನ್ ಎಂಬಾಪೆ ಅವರ ಹ್ಯಾಟ್ರಿಕ್ ವ್ಯರ್ಥವಾಯಿತು.

ಭಾನುವಾರ ನಡೆದ ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 2–2ರಿಂದ ಸಮಬಲ ಸಾಧಿಸಿದ್ದವು. ಮೆಸ್ಸಿ 23ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದರು. 36ನೇ ನಿಮಿಷದಲ್ಲಿ ಎಂಜೆಲ್ ಡಿ ಮರಿಯಾ ತೋರಿದ ಕಾಲ್ಚಳಕ ಅರ್ಜೆಂಟೀನಾ ಅಭಿಮಾನಿಗಳು ಹುಚ್ಚೆದ್ದು ಕುಣಿಯುವಂತೆ ಮಾಡಿತು. ಅದಾದ ಬಳಿಕ ಹೆಚ್ಚು ಹೊತ್ತು ಗೋಲು ದಾಖಲಾಗದಿದ್ದಾಗ ಅರ್ಜೆಂಟೀನಾ ಗೆದ್ದಿತೆಂದೇ ಬಹುತೇಕರು ಭಾವಿಸಿದ್ದರು.

ಆದರೆ ಯುವತಾರೆ ಎಂಬಾಪೆ 80ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶದಲ್ಲಿ ಗೋಲು ಗಳಿಸಿ ಫ್ರಾನ್ಸ್ ತಂಡದ ನಿರೀಕ್ಷೆಗೆ ಕಾರಣರಾದರು. ಮರು ನಿಮಿಷದಲ್ಲೇ ಮತ್ತೊಮ್ಮೆ ಮೋಡಿ ಮಾಡಿದ 23 ವರ್ಷದ ಆಟಗಾರ ಅರ್ಜೆಂಟೀನಾ ಅಭಿಮಾನಿಗಳ ನಿರೀಕ್ಷೆಗೆ ತಣ್ಣೀರೆರಚಿದರು.

ಹೆಚ್ಚುವರಿ ಅವಧಿಯಲ್ಲಿ ಇನ್ನಷ್ಟು ಜಿದ್ದಾಜಿದ್ದಿ ಕಂಡುಬಂತು. 108ನೇ ನಿಮಿಷದಲ್ಲಿ ಮತ್ತೊಮ್ಮೆ ಮೋಡಿ ಮಾಡಿದ ಮೆಸ್ಸಿ ತಮ್ಮ ಎರಡನೇ ಗೋಲು ಗಳಿಸಿದರು. ಈ ವೇಳೆ ಅರ್ಜೆಂಟೀನಾ 3–2ರಿಂದ ಮುನ್ನಡೆ ಸಾಧಿಸಿತು. ಆದರೆ ಹೆಚ್ಚುವರಿ ಅವಧಿ ಕೊನೆಗೊಳ್ಳಲು ಎರಡು ನಿಮಿಷಗಳಿರುವಾಗ ಪೆನಾಲ್ಟಿ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದ ಎಂಬಾಪೆ ಹ್ಯಾಟ್ರಿಕ್ ಸಾಧಿಸಿದರು. ಈ ವೇಳೆಗೆ ಪೆನಾಲ್ಟಿ ಶೂಟೌಟ್ ಮೊರೆಹೋಗಲಾಯಿತು.

ಪೆನಾಲ್ಟಿ ಶೂಟೌಟ್‌ನಲ್ಲಿ ಅರ್ಜೆಂಟೀನಾ ಪರ ಮೆಸ್ಸಿ, ಪೌಲೊ ಡಿಬಾಲಾ, ಲಿಯಾಂಡ್ರೊ ಪೆರೆಡೆಸ್, ಗೊಂಜಾಲೊ ಮೊಂಟಿಯಲ್ ಚೆಂಡನ್ನು ಗುರಿ ಸೇರಿಸಿದರು. ಆದರೆ ಫ್ರಾನ್ಸ್ ಪರ ಎಂಬಾಪೆ ಮತ್ತು ರಂಡಲ್ ಕೊಲೊ ಮುವಾನಿ ಮಾತ್ರ ಯಶಸ್ಸು ಸಾಧಿಸಿದರು.

ಬಹುಮಾನ ಮೊತ್ತ

ಸ್ಥಾನ	ನಗದು (ಕೋಟಿ)
ಚಾಂಪಿಯನ್	₹347
ರನ್ನರ್ಸ್ ಅಪ್	₹248
3ನೇ ಸ್ಥಾನ	₹223
4ನೇ ಸ್ಥಾನ	₹206

ಮೆಸ್ಸಿಗೆ ‘ಗೋಲ್ಡನ್ ಬಾಲ್’

ಫಿಫಾ ವಿಶ್ವಕಪ್ ಟೂರ್ನಿಯ ಶ್ರೇಷ್ಠ ಆಟಗಾರನಿಗೆ ನೀಡುವ ‘ಗೋಲ್ಡನ್ ಬಾಲ್’ ಪ್ರಶಸ್ತಿಯನ್ನು ಲಯೊನೆಲ್ ಮೆಸ್ಸಿ ಪಡೆದುಕೊಂಡರು.

ಫೈನಲ್‌ನಲ್ಲಿ ಎರಡು ಗೋಲುಗಳನ್ನು ಗಳಿಸಿದ ಅವರು ಟೂರ್ನಿಯಲ್ಲಿ ಒಟ್ಟು ಗೋಲುಗಳ ಸಂಖ್ಯೆಯನ್ನು ಏಳಕ್ಕೆ ಹೆಚ್ಚಿಸಿಕೊಂಡರು.

ಆದರೆ ಟೂರ್ನಿಯಲ್ಲಿ ಅತಿಹೆಚ್ಚು ಗೋಲು ಗಳಿಸಿದ ಆಟಗಾರನಿಗೆ ನೀಡುವ ‘ಗೋಲ್ಡನ್ ಬೂಟ್’ ಪ್ರಶಸ್ತಿಯನ್ನು ಫ್ರಾನ್ಸ್‌ನ ಕಿಲಿಯನ್ ಎಂಬಾಪೆ ತಮ್ಮದಾಗಿಸಿಕೊಂಡರು. ಫೈನಲ್‌ನಲ್ಲಿ ಹ್ಯಾಟ್ರಿಕ್ ಸಾಧನೆಯೊಂದಿಗೆ ಅವರು ಒಟ್ಟು ಎಂಟು ಗೋಲುಗಳನ್ನು ಗಳಿಸಿದರು.

ಟೂರ್ನಿಯ ಅತ್ಯುತ್ತಮ ಗೋಲ್‌ಕೀಪರ್‌ಗೆ ನೀಡುವ ‘ಗೋಲ್ಡನ್ ಗ್ಲೋವ್’ ಪ್ರಶಸ್ತಿಗೆ ಅರ್ಜೆಂಟೀನಾದ ಎಮಿಲಿಯಾನೊ ಮಾರ್ಟಿನೆಜ್ ಪಾತ್ರರಾದರು. ಅರ್ಜೆಂಟೀನಾದವರೇ ಆದ 21 ವರ್ಷದ ಎಂಜೊ ಫೆರ್ನಾಂಡಿಜ್ ಅವರು ‘ಟೂರ್ನಿಯ ಉದಯೋನ್ಮುಖ ಆಟಗಾರ’ ಗೌರವ ತಮ್ಮದಾಗಿಸಿಕೊಂಡರು.

ಎಂಬಾಪೆ ಸಾಧನೆ: ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ಫೈನಲ್ ಪಂದ್ಯದಲ್ಲಿ ಹ್ಯಾಟ್ರಿಕ್ ಗೋಲು ಗಳಿಸಿದ ಎರಡನೇ ಆಟಗಾರ ಎಂಬ ಗೌರವವನ್ನು ಕಿಲಿಯಾನ್ ಎಂಬಾಪೆ ಪಡೆದುಕೊಂಡರು.

ಇಂಗ್ಲೆಂಡ್‌ನ ಜೆಫ್ ಹರ್ಸ್ಟ್ ಮಾತ್ರ ಈ ಸಾಧನೆ ಮಾಡಿರುವ ಇನ್ನೊಬ್ಬ ಆಟಗಾರ. ಅವರು 1966ರ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಪಶ್ಚಿಮ ಜರ್ಮನಿ ವಿರುದ್ಧ ಮೂರು ಗೋಲುಗಳನ್ನು ಗಳಿಸಿದ್ದರು. ಆ ಪಂದ್ಯವನ್ನು ಇಂಗ್ಲೆಂಡ್ 4–2 ರಲ್ಲಿ ಗೆದ್ದುಕೊಂಡಿತ್ತು.

ಫಿಫಾ ವಿಶ್ವಕಪ್ ವಿಜೇತರು

ವರ್ಷ	ಚಾಂಪಿಯನ್	ರನ್ನರ್ಸ್‌ಅಪ್	ಆತಿಥ್ಯ
1930	ಉರುಗ್ವೆ	ಅರ್ಜೆಂಟೀನಾ	ಉರುಗ್ವೆ
1934	ಇಟಲಿ	ಜೆಕೊಸ್ಲೊವಾಕಿಯಾ	ಇಟಲಿ
1938	ಇಟಲಿ	ಹಂಗರಿ	ಫ್ರಾನ್ಸ್
1950	ಉರುಗ್ವೆ	ಬ್ರೆಜಿಲ್	ಬ್ರೆಜಿಲ್
1954	ಪಶ್ಚಿಮ ಜರ್ಮನಿ	ಹಂಗರಿ	ಸ್ವಿಟ್ಜರ್ಲೆಂಡ್
1958	ಬ್ರೆಜಿಲ್	ಸ್ವೀಡನ್	ಸ್ವೀಡನ್
1962	ಬ್ರೆಜಿಲ್	ಜೆಕೊಸ್ಲೊವಾಕಿಯಾ	ಚಿಲಿ
1966	ಇಂಗ್ಲೆಂಡ್	ಪಶ್ಚಿಮ ಜರ್ಮನಿ	ಇಂಗ್ಲೆಂಡ್
1970	ಬ್ರೆಜಿಲ್	ಇಟಲಿ	ಮೆಕ್ಸಿಕೊ
1974	ಪಶ್ಚಿಮ ಜರ್ಮನಿ	ನೆದರ್ಲೆಂಡ್ಸ್	ಪಶ್ಚಿಮ ಜರ್ಮನಿ
1978	ಅರ್ಜೆಂಟೀನಾ	ನೆದರ್ಲೆಂಡ್ಸ್	ಅರ್ಜೆಂಟೀನಾ
1982	ಇಟಲಿ	ಪಶ್ಚಿಮ ಜರ್ಮನಿ	ಸ್ಪೇನ್
1986	ಅರ್ಜೆಂಟೀನಾ	ಪಶ್ಚಿಮ ಜರ್ಮನಿ	ಮೆಕ್ಸಿಕೊ
1990	ಪಶ್ಚಿಮ ಜರ್ಮನಿ	ಅರ್ಜೆಂಟೀನಾ	ಇಟಲಿ
1994	ಬ್ರೆಜಿಲ್	ಇಟಲಿ	ಅಮೆರಿಕ
1998	ಫ್ರಾನ್ಸ್	ಬ್ರೆಜಿಲ್	ಫ್ರಾನ್ಸ್
2002	ಬ್ರೆಜಿಲ್	ಜರ್ಮನಿ	ದಕ್ಷಿಣ ಕೊರಿಯಾ/ಜಪಾನ್
2006	ಇಟಲಿ	ಫ್ರಾನ್ಸ್	ಜರ್ಮನಿ
2010	ಸ್ಪೇನ್	ನೆದರ್ಲೆಂಡ್ಸ್	ದಕ್ಷಿಣ ಆಫ್ರಿಕಾ
2014	ಜರ್ಮನಿ	ಅರ್ಜೆಂಟೀನಾ	ಬ್ರೆಜಿಲ್
2018	ಫ್ರಾನ್ಸ್	ಕ್ರೊವೇಷ್ಯಾ	ರಷ್ಯಾ
2022	ಅರ್ಜೆಂಟೀನಾ	ಫ್ರಾನ್ಸ್	ಕತಾರ್

ನಿಗದಿತ ಮತ್ತು ಹೆಚ್ಚುವರಿ ಅವಧಿಯ ಗೋಲು ವಿವರ

3 ಅರ್ಜೆಂಟೀನಾ
ಲಯೊನೆಲ್ ಮೆಸ್ಸಿ (23ನೇ ನಿ. ಪೆನಾಲ್ಟಿ, 108ನೇ ನಿಮಿಷ)
ಎಂಜೆಲ್ ಡಿ ಮರಿಯಾ (36ನೇ ನಿ.)

3 ಫ್ರಾನ್ಸ್
ಕಿಲಿಯನ್ ಎಂಬಾಪೆ (80ನೇ ನಿ. ಪೆನಾಲ್ಟಿ, 81ನೇ ನಿ. ಮತ್ತು 118ನೇ ನಿ.)

ಪೆನಾಲ್ಟಿ ಶೂಟೌಟ್‌ನಲ್ಲಿ ಅರ್ಜೆಂಟೀನಾಗೆ **4-2**ರಿಂದ ಜಯ

ಲುಸೈಲ್ ಕ್ರೀಡಾಂಗಣದಲ್ಲಿ ಭಾನುವಾರ ವಿಶ್ವಕಪ್ ಫುಟ್‌ಬಾಲ್ ಫೈನಲ್‌ಗೂ ಮೊದಲು ಟ್ರೋಫಿ ಪ್ರದರ್ಶನದಲ್ಲಿ ಪಾಲ್ಗೊಂಡ ಸ್ಪೇನ್ ತಂಡದ ಮಾಜಿ ಆಟಗಾರ ಐಕರ್ ಕ್ಯಾಸಿಲ್ಲಾಸ್ (ಎಡ) ಮತ್ತು ಬಾಲಿವುಡ್ ನಟಿ ದೀಪಿಕಾ ಪಡುಕೋಣೆ– ಎಎಫ್‌ಪಿ ಚಿತ್ರ

ಟೆಸ್ಟ್ ಕ್ರಿಕೆಟ್: ಆಸ್ಟ್ರೇಲಿಯಾಕ್ಕೆ ಮಣಿದ ದಕ್ಷಿಣ ಆಫ್ರಿಕಾ ತಂಡ

ಬ್ರಿಸ್ಬೇನ್ (ಎಪಿ): ದಕ್ಷಿಣ ಆಫ್ರಿಕಾ ತಂಡದ ಬ್ಯಾಟಿಂಗ್‌ನ ಬೆನ್ನೆಲುಬು ಮುರಿದ ಆಸ್ಟ್ರೇಲಿಯಾದ ಬೌಲರ್‌ಗಳು ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ತಮ್ಮ ತಂಡಕ್ಕೆ ಆರು ವಿಕೆಟ್‌ಗಳ ಜಯ ತಂದುಕೊಟ್ಟರು.

3 ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಪಂದ್ಯ ಎರಡು ದಿನಗಳಲ್ಲೇ ಮುಕ್ತಾಯಗೊಂಡಿತು. ಗಾಬಾ ಕ್ರೀಡಾಂಗಣದ ಪಿಚ್ ಬೌಲರ್‌ಗಳಿಗೆ ಪೂರ್ಣ ನೆರವು ನೀಡಿದ್ದರಿಂದ ಒಟ್ಟು 34 ವಿಕೆಟ್‌ಗಳು ಬಿದ್ದವು.

5 ವಿಕೆಟ್‌ಗೆ 145 ರನ್‌ಗಳಿಂದ 2ನೇ ದಿನವಾದ ಭಾನುವಾರ ಆಟ ಮುಂದುವರಿಸಿದ ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 218 ರನ್‌ಗಳಿಗೆ ಆಲೌಟಾಯಿತು. 66 ರನ್‌ಗಳ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ದಕ್ಷಿಣ ಆಫ್ರಿಕಾ ತಂಡ ಕೇವಲ 99 ರನ್‌ಗಳಿಗೆ ಆಲೌಟಾಯಿತು. ಪ್ಯಾಟ್ ಕಮಿನ್ಸ್ 42 ರನ್‌ಗಳಿಗೆ ಐದು ವಿಕೆಟ್ ಪಡೆದರು. ಗೆಲುವಿಗೆ 34 ರನ್ ಗಳಿಸಬೇಕಿದ್ದ ಆಸ್ಟ್ರೇಲಿಯಾ, ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡು ಗುರಿ ತಲುಪಿತು. ನಾಲ್ಕೂ ವಿಕೆಟ್‌ಗಳನ್ನು ಕಗಿಸೊ ರಬಾಡ ಪಡೆದರು.

ಗಾಬಾ ಕ್ರೀಡಾಂಗಣದ ಪಿಚ್ ಆಟಗಾರರಿಗೆ ‘ಅಪಾಯಕಾರಿ’ಯಾಗಿತ್ತು ಎಂದು ದಕ್ಷಿಣ ಆಫ್ರಿಕಾ ತಂಡದ ನಾಯಕ ಡೀನ್ ಎಲ್ಗರ್ ಟೀಕಿಸಿದ್ದಾರೆ.

‘ಎರಡು ದಿನಗಳಲ್ಲಿ 34 ವಿಕೆಟ್‌ಗಳು ಬಿದ್ದಿವೆ. ಟೆಸ್ಟ್ ಪಂದ್ಯಕ್ಕೆ ಯೋಗ್ಯವಾದ ಪಿಚ್ ಇದಲ್ಲ’ ಎಂದು ಪಂದ್ಯದ ಬಳಿಕ ಅಸಮಾಧಾನ ಹೊರಹಾಕಿದ್ದಾರೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 48.2 ಓವರ್‌ಗಳಲ್ಲಿ 152. ಆಸ್ಟ್ರೇಲಿಯಾ 50.3 ಓವರ್‌ಗಳಲ್ಲಿ 218 (ಟ್ರ್ಯಾವಿಸ್ ಹೆಡ್ 92, ಅಲೆಕ್ಸ್ ಕೇರಿ ಔಟಾಗದೆ 22, ಕಗಿಸೊ ರಬಾಡ 76ಕ್ಕೆ 4, ಮಾರ್ಕೊ ಜೆನ್ಸನ್ 32ಕ್ಕೆ 3) ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ 37.4 ಓವರ್‌ಗಳಲ್ಲಿ 99 (ತೆಂಬಾ ಬವುಮಾ 29, ಕಾಯಾ ಜೊಂಡೊ ಔಟಾಗದೆ 36, ಪ್ಯಾಟ್ ಕಮಿನ್ಸ್ 42ಕ್ಕೆ 5, ಮಿಚೆಲ್ ಸ್ಟಾರ್ಕ್ 26ಕ್ಕೆ 2, ಸ್ಕಾಟ್ ಬೋಲೆಂಡ್ 14ಕ್ಕೆ 2) ಆಸ್ಟ್ರೇಲಿಯಾ: 7.5 ಓವರ್‌ಗಳಲ್ಲಿ 4 ವಿಕೆಟ್‌ಗೆ 35 (ಮಾರ್ನಸ್ ಲಾಬುಶೇನ್ ಔಟಾಗದೆ 5, ಸ್ಟೀವ್ ಸ್ಮಿತ್ 6, ಕಗಿಸೊ ರಬಾಡ 13ಕ್ಕೆ 4)

ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯಮಟ್ಟದ ಅಥ್ಲೆಟಿಕ್ಸ್; ರಿಲೆಯಲ್ಲಿ ಕೊಡಗು, ದಕ್ಷಿಣ ಕನ್ನಡ ಪಾರಮ್ಯ

200 ಮೀ ಓಟ: ಧ್ರುವ, ವೈಭವಿ ಮೊದಲಿಗರು

ಪ್ರಜಾವಾಣಿ ವಾರ್ತೆ

ಮಂಗಳೂರು: ಉಡುಪಿ ಜಿಲ್ಲೆಯ ಎನ್.ಧ್ರುವ ಬಲ್ಲಾಳ್ ಹಾಗೂ ಬೆಳಗಾವಿ ಜಿಲ್ಲೆಯ ವೈಭವಿ ಬಿ. ಅವರು ಇಲ್ಲಿ ನಡೆಯುತ್ತಿರುವ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯಮಟ್ಟದ ಅಥ್ಲೆಟಿಕ್ ಕೂಟದ 200 ಮೀ ಓಟದ ಸ್ಪರ್ಧೆಯಲ್ಲಿ ಕ್ರಮವಾಗಿ ಬಾಲಕರ ಹಾಗೂ ಬಾಲಕಿಯರ ವಿಭಾಗದಲ್ಲಿ ಮೊದಲಿಗರಾದರು.

ಮಂಗಳೂರು ರಥಬೀದಿಯ ಬಾಲಕಿಯರ ಪದವಿಪೂರ್ವ ಕಾಲೇಜು ಆಶ್ರಯದಲ್ಲಿ ಮಂಗಳಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 200 ಮೀ ಓಟದ ಸ್ಪರ್ಧೆಯಲ್ಲಿ ಧ್ರುವ 22.4 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಬೆಂಗಳೂರು ದಕ್ಷಿಣ ಜಿಲ್ಲೆಯ ರಿಹಾನ್ ಸಿ.ಎಚ್ 22.6 ಸೆಕೆಂಡ್‌ಗಳಲ್ಲಿ ಗುರಿ ಸೇರಿದರು

ಬಾಲಕಿಯರ ವಿಭಾಗದ 200 ಮೀ ಓಟದ ಸ್ಪರ್ಧೆಯಲ್ಲಿ ವೈಭವಿ ಗುರಿ ತಲುಪಲು 25.9 ಸೆಕೆಂಡ್ ತೆಗೆದುಕೊಂಡರು. ಕೊಡಗು ಜಿಲ್ಲೆಯ ಮಾನಸ ಎನ್.ಸಿ. 26.2 ಸೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಅಮೂಲ್ಯ ಬಿ.ಎಂ. 26.5 ಸೆಕೆಂಡ್‌ಗಳಲ್ಲಿ ಗುರಿ ಸೇರಿದರು.

100 ಮೀ ಹರ್ಡಲ್ಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಮೈಸೂರಿನ ದಿಶಾ ಗಣಪತಿ (ಮಧ್ಯ) ಅವರ ಜಿಗಿತದ ಶೈಲಿ –ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ಫಲಿತಾಂಶಗಳು: ಬಾಲಕರ 200 ಮೀ ಓಟ: ಎನ್.ಧ್ರುವ ಬಲ್ಲಾಳ್ (ಉಡುಪಿ)–1. ಕಾಲ: 22.4 ಸೆ, ರಿಹಾನ್ ಸಿ.ಎಚ್. (ಬೆಂಗಳೂರು ದಕ್ಷಿಣ)–2, ಆಯುಷ್ ಆರ್.ದೇವಾಡಿಗ (ದಕ್ಷಿಣ ಕನ್ನಡ)–3; 1500 ಮೀ. ಓಟ: ಚಿಂತನ್ ಎಚ್.ವಿ (ಕೊಡಗು)–1: ಕಾಲ: 4 ನಿ 07.6 ಸೆ, ಹನುಮಂತ ವರಾಳ್ಯಗೋಳ (ಬಾಗಲಕೋಟೆ)–2, ವಿನಾಯಕ ರಾಥೋಡ (ವಿಜಯಪುರ)–3; 5000 ಮೀ ಓಟ; ಲಕ್ಷ್ಮಣ್ ಪಾಟೀಲ (ಬೆಳಗಾವಿ)–1. ಕಾಲ: 16 ನಿ.40.3 ಸೆ, ವಿನೋದ್ ಕುಮಾರ್ (ಬೆಂಗಳೂರು ದಕ್ಷಿಣ)–2, ಭೀಮ ಶಂಕರ (ಕೊಡಗು)–3; 110 ಮೀ ಹರ್ಡಲ್ಸ್; ಅಂಕಿತ್ ಜೋಗಿ (ಉಡುಪಿ)–1. ಕಾಲ: 14.6 ಸೆ, ಚೈತನ್ಯ ಕಾರೆಕರ್ (ಬೆಳಗಾವಿ)–2, ಈಶ್ವರ ಗೌಡ (ಉತ್ತರ ಕನ್ನಡ)–3; 5 ಕಿ.ಮೀ ರೇಸ್ ವಾಕ್: ದರ್ಶನ್ ಬಿಗಾದಿ (ಬೆಳಗಾವಿ)–1. ಕಾಲ: 26 ನಿ 46.2 ಸೆ, ವಿಷ್ಣು ಕಾರಬಾರಿ (ಕೊಪ್ಪಳ)–2, ಬಸವರಾಜ್ ಕೂಡಲಗಿ (ಧಾರವಾಡ)–3; ಪೋಲ್‌ವಾಲ್ಟ್: ರಾಹುಲ್ ಅಶೋಕ್ ನಾಯಕ್ ಎಂ. (ದಕ್ಷಿಣ ಕನ್ನಡ)–1. ಎತ್ತರ: 3.40 ಮೀ, ಆದಿತ್ಯ ವಿ.ಎಂ. (ಬೆಂಗಳೂರು ಉತ್ತರ)–2, ಯಶವಂತ ಎಸ್.ಮರಾಠಿ (ಉತ್ತರ ಕನ್ನಡ)–3; ಹ್ಯಾಮರ್ ಥ್ರೋ: ಯಶಸ್ ಪ್ರವೀಣ್ ಕುರ್ಬಾರ್ (ಉತ್ತರ ಕನ್ನಡ): ದೂರ: 58.37 ಮೀ, ಶ್ರೀನಿವಾಸ್ ಆರ್. (ತುಮಕೂರು)–2, ಎಂ.ಎಸ್. ಶ್ರೀಕಾಂತ್ (ದಕ್ಷಿಣಕನ್ನಡ)–3; 4X400 ಮೀ ರಿಲೆ: ಕೊಡಗು–1, ಕಾಲ: 3 ನಿ 28.1 ಸೆ, ಉಡುಪಿ–2, ಮೈಸೂರು–3.

ಬಾಲಕಿಯರ 200 ಮೀ ಓಟ: ವೈಭವಿ ಭುದರುಕ (ಬೆಳಗಾವಿ)–1. ಕಾಲ: 25.9 ಸೆ, ಮಾನಸ ಎನ್.ಸಿ (ಕೊಡಗು)–2, ಅಮೂಲ್ಯ ಬಿ.ಎಂ. (ದಕ್ಷಿಣ ಕನ್ನಡ)–3; 1500 ಮೀ ಓಟ: ಪ್ರತಿಭಾ (ದಕ್ಷಿಣ ಕನ್ನಡ)–1.ಕಾಲ: 4 ನಿ 57.5 ಸೆ, ಶ್ರೀರಕ್ಷಾ (ಕೊಡಗು)–2, ಮಹಾಲಕ್ಷ್ಮೀ ಬಸಕಳಿ (ಬಾಗಲಕೋಟೆ)–3; 5000 ಮೀ ಓಟ: ನಂದಿನಿ ಜಿ. (ಉಡುಪಿ)–1. ಕಾಲ: 20 ನಿ 58.6ಸೆ, ನವ್ಯಶ್ರೀ ಜಿ.(ದಕ್ಷಿಣ ಕನ್ನಡ)–2, ಐಶ್ವರ್ಯ ಎಸ್. (ದಕ್ಷಿಣ ಕನ್ನಡ)–3; 100 ಮೀ ಹರ್ಡಲ್ಸ್: ದಿಶಾ ಗಣಪತಿ (ಮೈಸೂರು)–1. ಕಾಲ: 15.5 ಸೆ, ಅಪೂರ್ವ ನಾಯಕ್ (ಬೆಳಗಾವಿ)–2, ಎಂ.ಎಸ್.ಚೈತನ್ಯಾ (ದಕ್ಷಿಣ ಕನ್ನಡ)–3; 3 ಕಿ.ಮೀ ರೇಸ್ ವಾಕ್: ಪ್ರವಲಿಕ ಎಚ್. (ಮಂಡ್ಯ)–1. ಕಾಲ: 18 ನಿ 35.8 ಸೆ, ದೀಕ್ಷಾ (ಉಡುಪಿ)–2, ಶ್ವೇತಾ (ಉಡುಪಿ)–3; ಟ್ರಿಪಲ್ ಜಂಪ್: ಭೂಮಿಕಾ ಕೆ.ಎನ್. (ಕೊಡಗು)–1. ದೂರ: 12.05 ಮೀ, ಲಕ್ಷ್ಯಾ (ಮೈಸೂರು)–2, ಪ್ರಿಯಾಂಕ ಆರ್. (ದಕ್ಷಿಣ ಕನ್ನಡ)–3; ಪೋಲ್ ವಾಲ್ಟ್: ಪ್ರೀತಿಕಾ (ಉಡುಪಿ)–1. ಎತ್ತರ: 2.00 ಮೀ, ಲಕ್ಷ್ಮೀ ಕಮಟಮಣಿ (ಧಾರವಾಡ)–2, ಕವನ (ಶಿವಮೊಗ್ಗ)–3, ಸ್ವಾತಿ ಶೆಟ್ಟಿ (ಉತ್ತರ ಕನ್ನಡ)–3; ಜಾವೆಲಿನ್: ದೀಪಾ ಬಸನು ಕುಪನಿ (ಚಿಕ್ಕೋಡಿ)–1. ದೂರ: 34.48 ಮೀ, ಆರುಷಿ ಶ್ರೀವಾಸ್ತವ (ಬೆಂಗಳೂರು ಉತ್ತರ)–2, ಮಾಧುರ್ಯಾ (ಉಡುಪಿ)–3; ಹ್ಯಾಮರ್ ಥ್ರೋ: ಪಿ.ಕೀರ್ತಿ (ಬಳ್ಳಾರಿ)–1. ದೂರ: 49.03 ಮೀ, ವರ್ಷಾ (ದಕ್ಷಿಣ ಕನ್ನಡ)–2, ಕಾವ್ಯಾ ಮೊಕಾಶಿ (ದಕ್ಷಿಣ ಕನ್ನಡ)–3; 4X400 ಮೀ ರಿಲೆ: ದಕ್ಷಿಣ ಕನ್ನಡ–1. ಕಾಲ: 4 ನಿ 03.2 ಸೆ, ಉಡುಪಿ–2, ಬೆಂಗಳೂರು ಉತ್ತರ–3.

ಚೀನಾ: 2023ರಲ್ಲಿ 10 ಲಕ್ಷ ಜನ ಸಾಯುವ ಸಾಧ್ಯತೆ

ಕೋವಿಡ್ ಮೊದಲ ಅಲೆ- ಜನಜೀವನ ತತ್ತರ

ಪ್ರಜಾವಾಣಿ ವಾರ್ತೆ

ಬೀಜಿಂಗ್ (ರಾಯಿಟರ್ಸ್): ಹೊಸ ವರ್ಷಾಚರಣೆಗೆ (ಚಾಂದ್ರಮಾನ ಹೊಸ ವರ್ಷ ಜನವರಿ 21ರಂದು) ಸಜ್ಜಾಗಿರುವ ಚೀನಾದಲ್ಲಿ ಕೋವಿಡ್ ಪಿಡುಗು ಭಾರಿ ಪ್ರಮಾಣದಲ್ಲಿ ವ್ಯಾಪಿಸುವ ಆತಂಕ ಎದುರಾಗಿದೆ. 2023ರಲ್ಲಿ ಸುಮಾರು 10 ಲಕ್ಷ ಚೀನಿಯರು ಕೋವಿಡ್‌ನಿಂದ ಮೃತಪಡುವ ಅಂದಾಜಿದೆ ಎಂದು ಅಮೆರಿಕ ಮೂಲದ ಅಧ್ಯಯನ ವರದಿಗಳು ಹೇಳಿವೆ.

ಕೋವಿಡ್ ಸೋಂಕಿನ ಪ್ರಕರಣಗಳು ದೇಶದ ಉತ್ತರದಿಂದ ದಕ್ಷಿಣಕ್ಕೆ ನಗರ ಕೇಂದ್ರಗಳಿಗೆ ವ್ಯಾಪಕವಾಗಿ ಹರಡಿವೆ. ಉಲ್ಬಣಿಸಿರುವ ಕೋವಿಡ್ ಪಿಡುಗಿನಿಂದ ಜನರು ತಮ್ಮನ್ನು ರಕ್ಷಿಸಿಕೊಳ್ಳಲು ಮನೆಯಿಂದ ಹೊರಗಡೆ ಕಾಲಿಡಲಿಲ್ಲ. ಇದರಿಂದ ಶಾಂಘೈ, ಬೀಜಿಂಗ್, ಷಿಯಾನ್, ಚೆಂಗ್ಡುನಂತಹ ಪ್ರಮುಖ ನಗರಗಳಲ್ಲಿನ ಬೀದಿಗಳು ಭಾನುವಾರ ಬಿಕೋ ಎನ್ನುತ್ತಿದ್ದವು.

ಶೀಘ್ರವಾಗಿ ಹರಡುವ ಓಮೈಕ್ರಾನ್ ರೂಪಾಂತರದಿಂದ ಈಗಾಗಲೇ ಬೀಜಿಂಗ್ ನಗರದಲ್ಲಿ ಆಹಾರ ಪಾರ್ಸೆಲ್ ಪೂರೈಕೆ ಸೇವೆಗೆ ದೊಡ್ಡ ಹೊಡೆತ ನೀಡಿದೆ. 2.2 ಕೋಟಿ ಜನಸಂಖ್ಯೆ ಇರುವ ಈ ನಗರದಲ್ಲಿ ಅಗತ್ಯ ಸಂಖ್ಯೆಯ ಚಿತಾಗಾರ ಮತ್ತು ಸ್ಮಶಾನ ಸೌಲಭ್ಯ ಕಲ್ಪಿಸಲು ಆಡಳಿತ ಹೆಣಗಾಡುತ್ತಿದೆ.

ಅಮೆರಿಕದ ಸಂಶೋಧನಾ ಸಂಸ್ಥೆಯು ಈ ವಾರ ಚೀನಾದಲ್ಲಿ ಕೋವಿಡ್ ಸ್ಫೋಟ ಸಂಭವಿಸಲಿದೆ. 2023ರಲ್ಲಿ ಚೀನದಾದ್ಯಂತ 10 ಲಕ್ಷಕ್ಕೂ ಹೆಚ್ಚು ಜನರು ಸಾವಿಗೀಡಾಗುವ ಸಾಧ್ಯತೆ ಇದೆ ಎಂದು ಹೇಳಿದೆ.



ಚೀನಾದ ಬೀಜಿಂಗ್‌ನಲ್ಲಿ ಕ್ರೀಡಾಂಗಣದಲ್ಲಿ ತೆರೆದಿರುವ ತಾತ್ಕಾಲಿಕ ಜ್ವರ ಚಿಕಿತ್ಸಾಲಯದಲ್ಲಿ ಭಾನುವಾರ ಜನರು ಕೋವಿಡ್ ತಪಾಸಣೆಗೆ ಒಳಗಾಗಿ ಔಷಧಿ ಪಡೆದರು – ಎಎಫ್‌ಪಿ ಚಿತ್ರ

ಡಿ.17ರಂದು ದೇಶದಾದ್ಯಂತ 2,097 ಸೋಂಕು ಲಕ್ಷಣದ ಹೊಸ ಪ್ರಕರಣಗಳು ಮಾತ್ರ ವರದಿಯಾಗಿವೆ. ಈವರೆಗೆ ದೇಶದಲ್ಲಿ ಒಟ್ಟಾರೆ 3,78,458 ಸೋಂಕು ಲಕ್ಷಣದ ಪ್ರಕರಣಗಳು ದೃಢಪಟ್ಟಿವೆ ಎಂದು ರಾಷ್ಟ್ರೀಯ ಆರೋಗ್ಯ ಆಯೋಗ ಹೇಳಿದೆ.

ಕೋವಿಡ್ ಪ್ರಕರಣ ಶೂನ್ಯಕ್ಕಿಳಿಸಲು ಹೇರಿದ ಕಠಿಣ ನಿರ್ಬಂಧಗಳನ್ನು ವಿರೋಧಿಸಿ ದೇಶದಲ್ಲಿ ನಾಗರಿಕರು ಬೃಹತ್ ಪ್ರತಿಭಟನೆ ನಡೆಸಿದರು. ಆ ನಂತರ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಆಡಳಿತವು ನಿರ್ಬಂಧ ಸಡಿಲಗೊಳಿಸಿತು. ಇದಾದ ನಂತರ ಡಿಸೆಂಬರ್ 7ರಿಂದ ಈವರೆಗೆ ಕೋವಿಡ್ ಸಂಬಂಧಿತ ಸಾವಿನ ಪ್ರಕರಣಗಳನ್ನು ಚೀನಾ ಇದುವರೆಗೂ ಅಧಿಕೃತವಾಗಿ ವರದಿ ಮಾಡಿಲ್ಲ. ಸೋಂಕು ಪ್ರಸರಣ ತಡೆಯಲು ಅನುಸರಿಸುತ್ತಿದ್ದ ಸಾಮೂಹಿಕ ಪರೀಕ್ಷೆಯನ್ನೂ ಕೈಬಿಡಲಾಗಿದೆ.

3 ಅಲೆಗಳು ನಿಶ್ಚಿತ

ಈ ಚಳಿಗಾಲದ ಮೂರು ತಿಂಗಳು ದೇಶವು ಕೋವಿಡ್ ಪ್ರಕರಣಗಳ ಮೂರು ಅಲೆಗಳನ್ನು ಎದುರಿಸಲಿದೆ. ದೇಶವು ಪ್ರಸ್ತುತ ಮೊದಲನೇ ಅಲೆ ಎದುರಿಸುತ್ತಿದೆ. ಹೊಸ ವರ್ಷದಲ್ಲಿ ಜನರು ತಮ್ಮ ಕುಟುಂಬಗಳೊಂದಿಗೆ ರಜೆ ಕಳೆಯಲು ಸಾರ್ವಜನಿಕ ಸಾರಿಗೆಗಳ ಮೂಲಕ ಮನೆಗಳಿಗೆ ದೊಡ್ಡ ಸಂಖ್ಯೆಯಲ್ಲಿ ಮರಳುವುದು ನಿಶ್ಚಿತ. ಜನದಟ್ಟಣೆಯ ಪ್ರಯಾಣದಿಂದ ಕೋವಿಡ್ ಪ್ರಕರಣಗಳು ದ್ವಿಗುಣವಾಗುವ ಸಾಧ್ಯತೆ ಇದೆ ಎಂದು ಮುಖ್ಯ ಸಾಂಕ್ರಾಮಿಕ ರೋಗಶಾಸ್ತ್ರಜ್ಞ ವು ಜುನೌ ಹೇಳಿದ್ದಾರೆ.

ದೀರ್ಘ ರಜೆಗಳಿಂದಾಗಿ ಮುಂದಿನ ಜನವರಿ ಅಂತ್ಯದಿಂದ ಫೆಬ್ರುವರಿ ಮಧ್ಯದವರೆಗೆ ನಗರ ಪ್ರದೇಶಗಳಲ್ಲಿ ಭಾರಿ ಸಂಖ್ಯೆಯಲ್ಲಿ ಎರಡನೇ ಅಲೆಯ ಸೋಂಕು ಕಾಡಲಿದೆ. ಫೆಬ್ರುವರಿ ಕೊನೆಯಿಂದ ಮಾರ್ಚ್ ಮಧ್ಯದವರೆಗೆ ಮೂರನೇ ಅಲೆಯ ಸೋಂಕು ಎದುರಾಗಲಿದೆ ಎಂದು ಜುನೌ ತಿಳಿಸಿದ್ದಾರೆ. ವಿಶ್ವದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶಕ್ಕೆ ಕೋವಿಡ್‌ನಿಂದ ಮಾರಣಹೋಮ ಸಂಭವಿಸುವ ಆತಂಕ ಎದುರಾಗಿದೆ.

ಸಂಕ್ಷಿಪ್ತ ಸುದ್ದಿ

ಮನೆಗೆ ಬೆಂಕಿ, ಭಾರತ ಮೂಲದ ಉದ್ಯಮಿ ಸಾವು

ಹ್ಯೂಸ್ಟನ್ (ಪಿಟಿಐ): ‘ನ್ಯೂಯಾರ್ಕ್‌ನ ಲಾಂಗ್ ಐಲ್ಯಾಂಡ್‌ನಲ್ಲಿ ಮನೆಯೊಂದಕ್ಕೆ ಬೆಂಕಿ ಹೊತ್ತಿಕೊಂಡ ಪರಿಣಾಮ ಭಾರತೀಯ ಮೂಲದ ಉದ್ಯಮಿ ತಾನ್ಯಾ ಭತೀಜಾ (32) ಎಂಬುವವರು ಇದೇ 14ರಂದು ಮೃತಪಟ್ಟಿದ್ದಾರೆ’ ಎಂದು ಅಲ್ಲಿನ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಈ ಘಟನೆಯು ಲಾಂಗ್ ಐಲ್ಯಾಂಡ್‌ನ ಡಿಕ್ಸ್ ಹಿಲ್ಸ್ ಗ್ರಾಮದಲ್ಲಿ ನಡೆದಿದೆ. ಘಟನೆಯಲ್ಲಿ ತಾನ್ಯಾ ಅವರ ನಾಯಿಯೂ ಸಹ ಸತ್ತಿದೆ.

‘ಡಿಸೆಂಬರ್ 14ರ ನಸುಕಿನಲ್ಲಿ ಮನೆಗೆ ಬೆಂಕಿ ಹೊತ್ತಿಕೊಂಡ ಸುದ್ದಿ ತಿಳಿಯುತ್ತಿದ್ದಂತೆಯೇ ಇಬ್ಬರು ಪೊಲೀಸ್ ಅಧಿಕಾರಿಗಳು ಹಾಗೂ ಒಬ್ಬ ಮಿಲಿಟರಿ ಅಧಿಕಾರಿ ಘಟನಾ ಸ್ಥಳಕ್ಕೆ ಧಾವಿಸಿದ್ದಾರೆ. ಆದರೆ, ಜ್ವಾಲೆಯು ಬೃಹತ್ ಪ್ರಮಾಣದಲ್ಲಿ ಆವರಿಸಿದ್ದರಿಂದ ತಾನ್ಯಾ ಅವರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಬರುವ ಮೊದಲೇ ತಾನ್ಯಾ ಅವರು ಸಾವಿಗೀಡಾಗಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಕಾರ್ಲ್ಸ್ ಸ್ಟ್ರೇಟ್ ಪಾಥ್‌ನಲ್ಲಿರುವ ತಮ್ಮ ಪೋಷಕರ ನಿವಾಸದ ಹಿಂದೆಯೇ ತಾನ್ಯಾ ವಾಸಿಸುತ್ತಿದ್ದರು. ತಾನ್ಯಾ ತಂದೆ ಗೋವಿಂದ್ ಭತೀಜಾ ಅವರು ಡಿ. 14ರ ಬೆಳಿಗ್ಗೆ ವ್ಯಾಯಾಮ ಮಾಡಲೆಂದು ಎದ್ದಾಗ ಮಗಳ ನಿವಾಸಕ್ಕೆ ಬೆಂಕಿ ಹೊತ್ತಿಕೊಂಡಿರುವುದು ಕಾಣಿಸಿದೆ. ಕೂಡಲೇ ಅವರು ಪೊಲೀಸರಿಗೆ ವಿಷಯ ತಿಳಿಸಿ, ಮಗಳನ್ನು ರಕ್ಷಿಸಲು ಪ್ರಯತ್ನಿಸಿದ್ದಾರೆ. ಆದರೆ ಸಾಧ್ಯವಾಗಿಲ್ಲ’ ಎಂದು ಸಫೋಲ್ಕ್ ಕೌಂಟಿ ಪೊಲೀಸ್ ಇಲಾಖೆಯ ಮುಖ್ಯಸ್ಥ ಲೆಫ್ಟಿನೆಂಟ್ ಕೆವಿನ್ ಬೇಯರ್‌ರೆರ್ ಹೇಳಿದ್ದಾರೆ.

‘ಬೆಂಕಿ ಅವಘಡ ಸಹಜವಾದುದೆಂದು ತನಿಖೆಯಲ್ಲಿ ತಿಳಿದುಬಂದಿದೆ’ ಎಂದೂ ಅವರು ತಿಳಿಸಿದ್ದಾರೆ.

ಅಫ್ಗಾನಿಸ್ತಾನ: ಇಂಧನ ಟ್ಯಾಂಕರ್‌ಗೆ ಬೆಂಕಿ, 12 ಸಾವು

ಕಾಬೂಲ್ (ಪಿಟಿಐ): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನ ಸುರಂಗವೊಂದರಲ್ಲಿ ಇಂಧನ ಟ್ಯಾಂಕರ್ ಉರುಳಿ, ಬೆಂಕಿಹೊತ್ತಿಕೊಂಡ ಪರಿಣಾಮ 12 ಜನರು ಮೃತಪಟ್ಟು, ಸುಮಾರು 37 ಜನರು ಗಾಯಗೊಂಡಿದ್ದಾರೆ ಎಂದು ಅಲ್ಲಿಯ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಅಫ್ಗಾನಿಸ್ತಾನದ ಉತ್ತರ ಮತ್ತು ದಕ್ಷಿಣ ಭಾಗವನ್ನು ಸಂಪರ್ಕಿಸುವ ಪ್ರಮುಖ ಕೊಂಡಿಯಾದ ಸಾಲಂಗ್ ಪಾಸ್‌ನ ಸುರಂಗದಲ್ಲಿ ಶನಿವಾರ ರಾತ್ರಿ ಸುಮಾರು 8.30ಕ್ಕೆ ಈ ಘಟನೆ ನಡೆದಿದೆ. ಟ್ಯಾಂಕರ್‌ಗೆ ಹೊತ್ತಿಕೊಂಡಿದ್ದ ಬೆಂಕಿಯು ಇತರ ವಾಹನಗಳಿಗೂ ತಗುಲಿದೆ. ಈ ಸುರಂಗ ಮಾರ್ಗದಲ್ಲಿ ಸದ್ಯ ಸಂಚಾರ ಸ್ಥಗಿತಗೊಳಿಸಲಾಗಿದೆ. ಮೃತರಲ್ಲಿ ಮಹಿಳೆಯರು ಮತ್ತು ಮಕ್ಕಳೂ ಇದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ರಿಸ್‌ಮಸ್ ವೇಳೆ ಹಲವು ಮುಷ್ಕರ ರಿಷಿಗೆ ಪರೀಕ್ಷೆ

ಲಂಡನ್ (ಪಿಟಿಐ): ಕ್ರಿಸ್‌ಮಸ್ ಸಮಯದಲ್ಲಿ ಹಲವಾರು ಇಲಾಖೆಗಳ ಕಾರ್ಮಿಕರು ಮುಷ್ಕರ ನಡೆಸಲು ಮುಂದಾಗಿದ್ದು, ಇದರಿಂದ ಜನರಿಗೆ ಎದುರಾಗುವ ಸಂಕಷ್ಟ ನೀಗಿಸಲು 1,200 ಮಂದಿ ಸೈನಿಕರನ್ನು ನಿಯೋಜಿಸಲು ಚಿಂತನೆ ನಡೆಸಲಾಗಿದೆ ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಭಾನುವಾರ ತಿಳಿಸಿದ್ದಾರೆ.

ಉತ್ತಮ ಸಂಬಳ ಹಾಗೂ ಸೌಲಭ್ಯ ಕಲ್ಪಿಸಲು ಆಗ್ರಹಿಸಿ ರೈಲ್ವೆ ಕಾರ್ಮಿಕರು, ಆರೋಗ್ಯ ಕಾರ್ಯಕರ್ತರು, ಗಡಿ ಭದ್ರತಾ ಸಿಬ್ಬಂದಿ ಮುಂದಿನ ಹಲವು ವಾರಗಳ ಕಾಲ ಮುಷ್ಕರ ನಡೆಸಲು ತೀರ್ಮಾನಿಸಿರುವ ಬೆನ್ನಲ್ಲೇ ಈ ಮಾಹಿತಿ ಹೊರಬಿದ್ದಿದೆ.

ಈ ಕುರಿತಂತೆ ದಿ ಸನ್ ಆನ್ ಸಂಡೇ ಪತ್ರಿಕೆಗೆ ಹೇಳಿಕೆ ನೀಡಿರುವ ರಿಷಿ ಅವರು, ‘ಕಾರ್ಮಿಕರಿಗೆ ಈಗಾಗಲೇ ನ್ಯಾಯಯುತ ಮತ್ತು ಉತ್ತಮ ಸೌಲಭ್ಯಗಳನ್ನು ನೀಡಲಾಗಿದೆ. ಆದರೆ ಕಾರ್ಮಿಕ ಒಕ್ಕೂಟಗಳು ವರ್ಗಯುದ್ಧಕ್ಕೆ ಇಳಿದಿವೆ’ ಎಂದು ಆರೋಪಿಸಿದ್ದಾರೆ.

104 ಮ್ಯಾನ್ಮಾರ್ ಪ್ರಜೆಗಳ ರಕ್ಷಣೆ

ಕೊಲಂಬೊ (ಪಿಟಿಐ): ಇಂಡೋನೇಷ್ಯಾ ದಿಕ್ಕಿನಲ್ಲಿ ಸಾಗುತ್ತಿದ್ದ ವೇಳೆ ಸಮುದ್ರ ಮಧ್ಯ ಹಡಗಿನಲ್ಲಿ ತೊಂದರೆಯುಂಟಾಗಿ ಸಂಕಷ್ಟದಲ್ಲಿದ್ದ 104 ಮ್ಯಾನ್ಮಾರ್ ಪ್ರಜೆಗಳನ್ನು ಉತ್ತರದ ಕರಾವಳಿ ಭಾಗದ ವೆಂಥಲೈ ದ್ವೀಪದ ಸಮೀಪ ಭಾನುವಾರ ಮುಂಜಾನೆ ರಕ್ಷಿಸಲಾಗಿದೆ ಎಂದು ಶ್ರೀಲಂಕಾ ನೌಕಾಪಡೆ ತಿಳಿಸಿದೆ.

ಉತ್ತರ ಕೊರಿಯಾ: ಎರಡು ಬ್ಯಾಲೆಸ್ಟಿಕ್ ಕ್ಷಿಪಣಿಗಳ ಪರೀಕ್ಷೆ

ಸೋಲ್ (ಎಪಿ): ಉತ್ತರ ಕೊರಿಯಾವು ಜಪಾನ್‌ವರೆಗೆ ತಲುಪುವಷ್ಟು ಸಾಮರ್ಥ್ಯದ ಎರಡು ಬ್ಯಾಲೆಸ್ಟಿಕ್ ಕ್ಷಿಪಣಿಗಳ ಪರೀಕ್ಷೆಯನ್ನು ಭಾನುವಾರ ನಡೆಸಿದೆ.

ಉತ್ತರ ಕೊರಿಯಾ ಮತ್ತು ಚೀನಾ ವಿರುದ್ಧ ಆಕ್ರಮಣಕಾರಿ ಹೆಜ್ಜೆಯಿಡಲು ಹೊಸ ಭದ್ರತಾ ಕಾರ್ಯತಂತ್ರವನ್ನು ಜಪಾನ್ ಅಳವಡಿಸಿಕೊಂಡ ಬೆನ್ನಲ್ಲೇ, ಎಚ್ಚರಿಕೆ ನೀಡುವ ತಂತ್ರವೆಂಬಂತೆ ಈ ಕ್ಷಿಪಣಿ ಪರೀಕ್ಷೆ ನಡೆದಿದೆ ಎನ್ನಲಾಗಿದೆ.

ಭಾರತದ ಕುಲದೀಪ್ ಯಾದವ್ (ಬಲ) ಅವರು ಸಹ ಆಟಗಾರ ಚೇತೇಶ್ವರ ಪೂಜಾರ ಜತೆ ಸಂಭ್ರಮಿಸಿದರು –ಎಪಿ/ಪಿಟಿಐ ಚಿತ್ರ

ಕ್ರಿಕೆಟ್ ಟೆಸ್ಟ್: ಬಾಂಗ್ಲಾದೇಶ ವಿರುದ್ಧ ಭಾರತಕ್ಕೆ 188 ರನ್‌ಗಳ ಗೆಲುವು

ಕುಲದೀಪ್ ಯಾದವ್ ಶ್ರೇಷ್ಠ ಸಾಧನೆ

ಚಿತ್ತೊಗ್ರಾಮ್ (ಪಿಟಿಐ/ಎಎಫ್‌ಪಿ): ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರ ವೃತ್ತಿಜೀವನದ ಶ್ರೇಷ್ಠ ಬೌಲಿಂಗ್ ಸಾಧನೆಯ ನೆರವಿನಿಂದ ಭಾರತ ತಂಡ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು 188 ರನ್‌ಗಳಿಂದ ಮಣಿಸಿತು.

ಝಹೂರ್ ಅಹಮದ್ ಚೌಧರಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಅಂತಿಮ ದಿನವಾದ ಭಾನುವಾರ ಆತಿಥೇಯ ತಂಡ ಎರಡನೇ ಇನಿಂಗ್ಸ್‌ನಲ್ಲಿ 324 ರನ್‌ಗಳಿಗೆ ಆಲೌಟಾಯಿತು.

513 ರನ್‌ಗಳ ಗುರಿ ಬೆನ್ನಟ್ಟಿದ್ದ ಬಾಂಗ್ಲಾ, ನಾಲ್ಕನೇ ದಿನದಾಟದ ಅಂತ್ಯಕ್ಕೆ 6 ವಿಕೆಟ್‌ಗಳಿಗೆ 272 ರನ್ ಗಳಿಸಿತ್ತು. ಕೊನೆಯ ದಿನ 4 ವಿಕೆಟ್‌ಗಳಿಂದ 241 ರನ್ ಗಳಿಸುವ ಸವಾಲು ಮುಂದಿತ್ತು.

ಆದರೆ ಭಾನುವಾರ ಮೊದಲ ಅವಧಿಯ ಆಟದಲ್ಲಿ ಕೇವಲ 11.2 ಓವರ್‌ಗಳಲ್ಲಿ ಎದುರಾಳಿ ತಂಡದ ನಾಲ್ಕು ವಿಕೆಟ್‌ಗಳನ್ನು ಪಡೆದ ಕೆ.ಎಲ್. ರಾಹುಲ್ ಬಳಗ ಗೆಲುವಿನ ನಗು ಬೀರಿತು. ಇದರೊಂದಿಗೆ ಎರಡು ಪಂದ್ಯಗಳ ಸರಣಿಯಲ್ಲಿ 1–0 ರಲ್ಲಿ ಮುನ್ನಡೆ ಸಾಧಿಸಿತು.

ಕುಲದೀಪ್ ಎರಡು ವಿಕೆಟ್‌ಗಳನ್ನು ತಮ್ಮದಾಗಿಸಿಕೊಂಡರೆ, ಇನ್ನುಳಿದ ಎರಡು ವಿಕೆಟ್‌ಗಳನ್ನು ಮೊಹಮ್ಮದ್ ಸಿರಾಜ್ ಮತ್ತು ಅಕ್ಷರ್ ಪಟೇಲ್ ಪಡೆದರು. ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಪಡೆದಿದ್ದ ಕುಲದೀಪ್ ಪಂದ್ಯದಲ್ಲಿ ಒಟ್ಟಾರೆ 113 ರನ್‌ಗಳಿಗೆ ಎಂಟು ವಿಕೆಟ್ ಗಳಿಸಿದರು. ಟೆಸ್ಟ್‌ನಲ್ಲಿ ಇದು ಅವರ ಶ್ರೇಷ್ಠ ಸಾಧನೆ ಆಗಿದೆ. ಮೊದಲ ಇನಿಂಗ್ಸ್‌ನಲ್ಲಿ ಒಂದು ವಿಕೆಟ್ ಪಡೆದಿದ್ದ ಅಕ್ಷರ್ ಪಟೇಲ್, ಎರಡನೇ ಇನಿಂಗ್ಸ್‌ನಲ್ಲಿ 77 ರನ್‌ಗಳಿಗೆ ನಾಲ್ಕು ವಿಕೆಟ್ ಗಳಿಸಿದರು.

ಶಕೀಬ್ ಅಲ್ ಹಸನ್ ಮತ್ತು ಮೆಹದಿ ಹಸನ್ ಮಿರಾಜ್ ಅವರು ಕ್ರಮವಾಗಿ 40 ಹಾಗೂ 9 ರನ್‌ಗಳೊಂದಿಗೆ ಬ್ಯಾಟಿಂಗ್ ಮುಂದುವರಿಸಿದ್ದರು. ಮೆಹದಿ ಅವರನ್ನು ಔಟ್ ಮಾಡಿದ ಸಿರಾಜ್, ಭಾರತಕ್ಕೆ ಬೇಗನೇ ಯಶಸ್ಸು ತಂದುಕೊಟ್ಟರು.

ಭರ್ಜರಿ ಹೊಡೆತಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದ ಶಕೀಬ್ (84 ರನ್, 108 ಎ., 4X6, 6X6) ಮತ್ತು ಎಬಾದತ್ ಹೊಸೇನ್ (0) ಅವರನ್ನು ಕುಲದೀಪ್ ಪೆವಿಲಿಯನ್‌ಗೆ ಅಟ್ಟಿದರು. ತೈಜುಲ್ ಇಸ್ಲಾಂ ಅವರನ್ನು ಬೌಲ್ಡ್ ಮಾಡಿದ ಅಕ್ಷರ್, ಭಾರತದ ಗೆಲುವಿನ ವ್ಯವಹಾರ ಪೂರ್ಣಗೊಳಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಭಾರತ 404, ಬಾಂಗ್ಲಾದೇಶ: 150, ಎರಡನೇ ಇನಿಂಗ್ಸ್: ಭಾರತ 2 ವಿಕೆಟ್‌ಗೆ 258 ಡಿಕ್ಲೇರ್ಡ್, ಬಾಂಗ್ಲಾದೇಶ: 113.2 ಓವರ್‌ಗಳಲ್ಲಿ 324 (ಶಕೀಬ್ ಅಲ್ ಹಸನ್ 84, ಮೆಹದಿ ಹಸನ್ ಮಿರಾಜ್ 13, ಅಕ್ಷರ್ ಪಟೇಲ್ 77ಕ್ಕೆ 4, ಕುಲದೀಪ್ ಯಾದವ್ 73ಕ್ಕೆ 3, ಮೊಹಮ್ಮದ್ ಸಿರಾಜ್ 67ಕ್ಕೆ 1, ಉಮೇಶ್ ಯಾದವ್ 27ಕ್ಕೆ 1, ಆರ್. ಅಶ್ವಿನ್ 75ಕ್ಕೆ 1) ಫಲಿತಾಂಶ: ಭಾರತಕ್ಕೆ 188 ರನ್ ಗೆಲುವು; ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ.

ಎರಡನೇ ಸ್ಥಾನಕ್ಕೇರಿದ ಭಾರತ

ಬಾಂಗ್ಲಾ ವಿರುದ್ಧದ ಗೆಲುವಿನ ಮೂಲಕ ಭಾರತ ತಂಡ ಐಸಿಸಿ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿತು. ಭಾರತ ತಂಡ ಈ ಪಂದ್ಯಕ್ಕೆ ಮುನ್ನ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಬಳಿಕ ಮೂರನೇ ಸ್ಥಾನದಲ್ಲಿತ್ತು. ಬಾಂಗ್ಲಾ ವಿರುದ್ಧದ ಗೆಲುವು ಮಾತ್ರವಲ್ಲದೆ, ಬ್ರಿಸ್ಬೇನ್‌ನಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ದಕ್ಷಿಣ ಆಫ್ರಿಕಾವನ್ನು ಮಣಿಸಿದ್ದು ಕೂಡಾ ಭಾರತ ಎರಡನೇ ಸ್ಥಾನಕ್ಕೇರಲು ನೆರವು ನೀಡಿತು.

ರಾಜ್ಯ ಹಾಕಿ: ಅರಿಸ್ಟೊಕ್ರಾಟ್ ಕ್ಲಬ್‌ಗೆ ಜಯ

ಬೆಂಗಳೂರು: ರಾಮ ಮತ್ತು ಪೊನ್ನಪ್ಪ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಅರಿಸ್ಟೊಕ್ರಾಟ್ ಕ್ಲಬ್ ತಂಡವು ರಾಜ್ಯ ಬಿ ಡಿವಿಷನ್ ಹಾಕಿ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಭಾನುವಾರ ಅರಿಸ್ಟೊಕ್ರಾಟ್ 8–0ಯಿಂದ ಧ್ಯಾನ್‌ಚಂದ್ ಹಾಕಿ ಕ್ಲಬ್ ತುಮಕೂರು ಎದುರು ಗೆದ್ದಿತು. ರಾಮ 4, 38 ಮತ್ತು 48ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. ಪೊನ್ನಪ್ಪ 13, 28 ಮತ್ತು 45ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ತಸ್ವಿನ್ ಜೋಯಪ್ಪ (7ನೇ ನಿ.) ಮತ್ತು ವಿಶ್ವ ಕುಮಾರ್ (47ನೇ ನಿ.) ಕಾಣಿಕೆ ನೀಡಿದರು.

ಇನ್ನೊಂದು ಪಂದ್ಯದಲ್ಲಿ ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ ಎ ತಂಡವು 5–3ರಿಂದ ಫ್ಲೈಯಿಂಗ್ ಕ್ಲಬ್ ವಿರುದ್ಧ ಗೆದ್ದಿತು.

ಕೂಚ್ ಬೆಹಾರ್ ಟ್ರೋಫಿ: ಯಶೋವರ್ಧನ್ ಶತಕ

ಪ್ರಜಾವಾಣಿ ವಾರ್ತೆ

ಮೈಸೂರು: ನಾಯಕ ಯಶೋವರ್ಧನ್ ಪರಂತಪ್ ಸಿಡಿಸಿದ ಅಮೋಘ ಶತಕದ (114 ರನ್) ಬಲದಿಂದ ಕರ್ನಾಟಕ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ ಸೌರಾಷ್ಟ್ರ ವಿರುದ್ಧ ಸವಾಲಿನ ಮೊತ್ತ ಕಲೆ ಹಾಕಿತು.

ಇಲ್ಲಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಚ್ ಬೆಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರಾಜ್ಯ ತಂಡವು ಭಾನುವಾರ 112.1 ಓವರ್‌ಗಳಲ್ಲಿ 273 ರನ್ ಗಳಿಸಿತು. ನಾಯಕನ ಆಟವಾಡಿದ ಯಶೋವರ್ಧನ್, ಹಾರ್ದಿಕ್ ರಾಜ್ (66) ಅವರೊಂದಿಗೆ ಇನ್ನಿಂಗ್ಸ್ ಕಟ್ಟಿದರು.

ಸೌರಾಷ್ಟ್ರ ತಂಡ ದಿನದಾಟದ ಅಂತ್ಯಕ್ಕೆ ಮೊದಲ ಇನಿಂಗ್ಸ್‌ನಲ್ಲಿ 7 ವಿಕೆಟ್ ನಷ್ಟಕ್ಕೆ 197 ರನ್ ಗಳಿಸಿದೆ. ಮಾನವ್ ಚೋತಾನಿ (80) ಉತ್ತಮವಾಗಿ ಆಡಿದರು. ಕೆಎಸ್‌ಸಿಎ ತಂಡದ ಆದಿತ್ಯ ನಾಯರ್ (31ಕ್ಕೆ 2), ಧ್ರುವ್ ಪ್ರಭಾಕರ್ (39ಕ್ಕೆ 2) ಸೌರಾಷ್ಟ್ರದ ಬ್ಯಾಟಿಂಗ್ ಬೆನ್ನೆಲುಬು ಮುರಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ ಮೊದಲ ಇನಿಂಗ್ಸ್: 112.1 ಓವರ್‌ಗಳಲ್ಲಿ 273 (ಯಶೋವರ್ಧನ್ ಪರಂತಪ್ 114, ಹಾರ್ದಿಕ್ ರಾಜ್ 66, ಟಿ.ಜಡೇಜ 98ಕ್ಕೆ 4) ಸೌರಾಷ್ಟ್ರ ಮೊದಲ ಇನ್ನಿಂಗ್ಸ್ 7 ವಿಕೆಟ್ ನಷ್ಟಕ್ಕೆ 197 ರನ್ (ಮಾನವ್ ಚೋತಾನಿ 80, ಆದಿತ್ಯ ನಾಯರ್ 31ಕ್ಕೆ 2, ಧ್ರುವ್ ಪ್ರಭಾಕರ್ 39ಕ್ಕೆ 2).

ಬ್ರೂಕ್ ಶತಕ: ಇಂಗ್ಲೆಂಡ್‌ಗೆ ಮುನ್ನಡೆ

ಕರಾಚಿ (ರಾಯಿಟರ್ಸ್): ಹ್ಯಾರಿ ಬ್ರೂಕ್ (111) ಶತಕ, ಬೆನ್ ಫೋಕ್ಸ್ (64) ಹಾಗೂ ಒಲಿ ಪೋಪ್ (51) ಗಳಿಸಿದ ಅರ್ಧಶತಕಗಳ ಬಲದಿಂದ ಇಂಗ್ಲೆಂಡ್ ತಂಡವು ಪಾಕಿಸ್ತಾನ ಎದುರಿನ 3ನೇ ಟೆಸ್ಟ್ ಪಂದ್ಯದಲ್ಲಿ ಅಲ್ಪ ಮುನ್ನಡೆ ಸಾಧಿಸಿತು.

ಇಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಭಾನುವಾರ ಮೊದಲ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ 354 ರನ್ ಗಳಿಸಿ ಆಲೌಟ್ ಆಯಿತು. ಎರಡನೇ ಇನಿಂಗ್ಸ್ ಆರಂಭಿಸಿರುವ ಆತಿಥೇಯ ತಂಡ ವಿಕೆಟ್ ನಷ್ಟವಿಲ್ಲದೆ 21 ರನ್ ಗಳಿಸಿತ್ತು. ಪಾಕಿಸ್ತಾನ ಮೊದಲ ಇನಿಂಗ್ಸ್‌ನಲ್ಲಿ 304 ರನ್ ಗಳಿಸಿತ್ತು. ಸದ್ಯ ಇಂಗ್ಲೆಂಡ್ 29 ರನ್ ಮುನ್ನಡೆಯಲ್ಲಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 79 ಓವರ್‌ಗಳಲ್ಲಿ 304. ಇಂಗ್ಲೆಂಡ್: 81.4 ಓವರ್‌ಗಳಲ್ಲಿ 354 (ಒಲಿ ಪೋಪ್ 51, ಹ್ಯಾರಿ ಬ್ರೂಕ್ 111, ಬೆನ್ ಫೋಕ್ಸ್ 64; ಅಬ್ರಾರ್ ಅಹಮದ್ 150ಕ್ಕೆ 4, ನೂಮಾನ್ ಅಲಿ 126ಕ್ಕೆ 4). 2ನೇ ಇನಿಂಗ್ಸ್: ಪಾಕಿಸ್ತಾನ: 9 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 21 (ಅಬ್ದುಲ್ಲಾ ಬ್ಯಾಟಿಂಗ್ 14, ಶಾನ್ ಮಸೂದ್ ಬ್ಯಾಟಿಂಗ್ 3).

L&K | SAATCHI & SAATCHI